ವಯಸ್ಸು
4 ರಿಂದ 5 ವರ್ಷಗಳು

ಕರ್ನಾಟಕ ಸರ್ಕಾರ

# ಚಿಲಿಪಿಲಿ Plus


## ಶಿಕ್ಷಕರ ಕೈಪಿಡಿ

**ಪುಸ್ತಕ 1**

- ನಾನು ಮತ್ತು ನನ್ನ ಸುತ್ತಲಿರುವುದು
- ಗಾತ್ರದ ಬಗ್ಗೆ ತಿಳಿಯುವುದು








ಸಮಗ್ರ ಶಿಕ್ಷಣ ಕರ್ನಾಟಕ





# ಪರಿವಿಡಿ


## ವಿಷಯ 1: ನಾನು ಮತ್ತು ನನ್ನ ಸುತ್ತಲಿರುವುದು

**ಉಪವಿಷಯ 1.1: ನಾನು ನನ್ನದು**

ಸಂಭಾಷಣೆ . . . . . . . . . . . . . . . . . . . . . . . . . . 2
ಯೋಜನಾ ಕಾರ್ಯಗಳು. . . . . . . . . . . . . . . . . . . . . . 7
ಶಿಶುಗೀತೆಗಳು . . . . . . . . . . . . . . . . . . . . . . . . 8
ಕಥೆ . . . . . . . . . . . . . . . . . . . . . . . . . . . . 11
ಸೃಜನಾತ್ಮಕ ಚಟುವಟಿಕೆಗಳು . . . . . . . . . . . . . . . . 13
ಒಳಾಂಗಣ ಆಟಗಳು . . . . . . . . . . . . . . . . . . . . 14
ಹೊರಾಂಗಣ ಆಟಗಳು . . . . . . . . . . . . . . . . . . . 18
Total Physical Response . . . . . . . . . . . . . . . . . 20

**ಉಪವಿಷಯ 1.2: ನನ್ನ ದೇಹ**

ಸಂಭಾಷಣೆ . . . . . . . . . . . . . . . . . . . . . . . . . . 24
ಯೋಜನಾ ಕಾರ್ಯಗಳು. . . . . . . . . . . . . . . . . . . . . . 27
ಶಿಶುಗೀತೆಗಳು . . . . . . . . . . . . . . . . . . . . . . . . 28
ಕಥೆ . . . . . . . . . . . . . . . . . . . . . . . . . . . . 31
ಸೃಜನಾತ್ಮಕ ಚಟುವಟಿಕೆಗಳು . . . . . . . . . . . . . . . . 33
ಒಳಾಂಗಣ ಆಟಗಳು . . . . . . . . . . . . . . . . . . . . 34
ಹೊರಾಂಗಣ ಆಟಗಳು . . . . . . . . . . . . . . . . . . . 37
Total Physical Response . . . . . . . . . . . . . . . . . 39









**ಉಪವಿಷಯ 1.3: ನನ್ನ ಕುಟುಂಬ**

ಸಂಭಾಷಣೆ . . . . . . . . . . . . . . . . . . . . . . . . . . 44
ಯೋಜನಾ ಕಾರ್ಯಗಳು. . . . . . . . . . . . . . . . . . . . . . 47
ಶಿಶುಗೀತೆಗಳು . . . . . . . . . . . . . . . . . . . . . . . . 48
ಕಥೆ . . . . . . . . . . . . . . . . . . . . . . . . . . . . 51
ಸೃಜನಾತ್ಮಕ ಚಟುವಟಿಕೆಗಳು . . . . . . . . . . . . . . . . 53
ಒಳಾಂಗಣ ಆಟಗಳು . . . . . . . . . . . . . . . . . . . . 54
ಹೊರಾಂಗಣ ಆಟಗಳು . . . . . . . . . . . . . . . . . . . 56
Total Physical Response . . . . . . . . . . . . . . . . . 57







## ಗಾತ್ರದ ಬಗ್ಗೆ ತಿಳಿಯುವುದು


**ಪರಿಕಲ್ಪನೆ ಹಾಗೂ ನಿರ್ವಹಣೆ**

ಸಿದ್ಧತಾ ಚಟುವಟಿಕೆಗಳು . . . . . . . . . . . . . . . . . . 62
ಅನ್ವೇಷಣಾ ಚಟುವಟಿಕೆ. . . . . . . . . . . . . . . . . . . .63
ವಿಸ್ತರಣಾ ಚಟುವಟಿಕೆ . . . . . . . . . . . . . . . . . . . 65




ಪಠ್ಯಕ್ರಮವನ್ನು ಈ ಕೆಳಗಿನಂತೆ ವಿನ್ಯಾಸಗೊಳಿಸಲಾಗಿದೆ:

## ಮೌಖಿಕ ಭಾಷಾ ಕೌಶಲ ಬೆಳವಣಿಗೆ



ಸಂಭಾಷಣೆ



ಯೋಜನಾ ಕಾರ್ಯಗಳು



ಶಿಶುಗೀತೆಗಳು



ಕಥೆ



Total Physical Response (TPR)

---

## ಸೂಕ್ಷ್ಮ ಮತ್ತು ಸ್ಥೂಲ ಚಲನ ಕೌಶಲ, ಸಾಮಾಜಿಕ–ಭಾವನಾತ್ಮಕ ಮತ್ತು ಸೃಜನಾತ್ಮಕ ಬೆಳವಣಿಗೆ



ಒಳಾಂಗಣ ಆಟಗಳು



ಹೊರಾಂಗಣ ಆಟಗಳು




ಸೃಜನಾತ್ಮಕ ಚಟುವಟಿಕೆಗಳು

---


## ಇಂದ್ರಿಯ ಗ್ರಹಿಕೆಯ ಬೆಳವಣಿಗೆ




ಸಿದ್ಧತಾ ಚಟುವಟಿಕೆಗಳು



ಪರಿಶೋಧನಾತ್ಮಕ ಚಟುವಟಿಕೆಗಳು



ವಿಸ್ತರಣಾ ಚಟುವಟಿಕೆ



ಅನ್ವಯಿಸುವಿಕೆ

# ಕೃತಜ್ಞತೆಗಳು

2019–20ನೇ ಸಾಲಿನಲ್ಲಿ 276 ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲಾಗಿದೆ. ಪೂರ್ವ ಪ್ರಾಥಮಿಕ ತರಗತಿಗಳ ಶಿಕ್ಷಕಿಯರಿಗೆ ಪಠ್ಯಕ್ರಮ ಅನುಸರಿಸಲು ಕೈಪಿಡಿಯ ಅವಶ್ಯಕತೆಯಿರುವುದರಿಂದ, ಸಿದ್ದಪಡಿಸಲು ಈ ಕೆಳಕಂಡ ಪಠ್ಯಕ್ರಮ ರಚನಾ ತಂಡಕ್ಕೆ ಸೂಚನೆ ನೀಡಲಾಗಿತ್ತು.

ಪೂರ್ವ ಪ್ರಾಥಮಿಕ ತರಗತಿಗಳ ಪಠ್ಯಕ್ರಮ ರಚನೆಗೆ ಸಹಕರಿಸಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಮೇಲ್ವಿಚಾರಕರು, ನಲಿ–ಕಲಿ ಶಿಕ್ಷಕರು, ಸಂಪನ್ಮೂಲ ವ್ಯಕ್ತಿಗಳು, ಅಕ್ಷರ ಫೌಂಡೇಷನ್, ಅಜೀಂ ಪ್ರೇಮ್‌ಜಿ ಫೌಂಡೇಷನ್, ಸೆಂಟರ್ ಫಾರ್ ಲರ್ನಿಂಗ್, ಕಮ್ಯೂನಿಟಿ ಬೇಸ್ಡ್ ರಿಹ್ಯಾಬಿಲಿಟೇಷನ್ ನೆಟ್‌ವರ್ಕ್(ಸಿ.ಬಿ.ಆರ್), ಕಲಿಕೆ–ಟಾಟಾ ಟ್ರಸ್ಟ್, ಪ್ರಜಾಯತ್ನ, ಪ್ರಜ್ಞಾ ವಿದ್ಯಾ–ಕ್ರಿಯೇಟಿವ್ ಸ್ಕೂಲ್, ಪ್ರಾಪ್ತಿ ಫೌಂಡೇಷನ್, ಪ್ರಾಮಿಸ್ ಫೌಂಡೇಷನ್, ಟೈಡ್ ಲರ್ನಿಂಗ್ ಮತ್ತು ವಿ.ಹೆಚ್.ಡಿ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ರವರು ತಮ್ಮ ಅನುಭವ, ಪರಿಣತಿಯನ್ನು ಹಂಚಿಕೊಂಡಿರುತ್ತಾರೆ. ಪೂರ್ವ ಪ್ರಾಥಮಿಕ ತರಗತಿಗಳ ಶಿಕ್ಷಕಿಯರ ಸಾಮರ್ಥ್ಯಗಳ ಅಭಿವೃದ್ಧಿಗಾಗಿ ಸಹಕರಿಸಿದವರೆಲ್ಲವರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ.


ಚಿಲಿ ಪಿಲಿ ಕಲಿಕಾ ಸಂಪನ್ಮೂಲಗಳಿಂದ ಕೆಲವು ಆಯ್ದ ಚಟುವಟಿಕೆಗಳು, ಕಥೆಗಳು, ಪದ್ಯಗಳು, ಎನ್‌ಸಿಇಆರ್‌ಟಿ ಸಂಪನ್ಮೂಲ ಪುಸ್ತಕಗಳಿಂದ ಥೀಮ್ ಬೇಸ್ಡ್ ಅರ್ಲಿ ಚೈಲ್ಡ್ ಕೇರ್ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸೇವ್‌ದ ಚಿಲ್ಡ್ರನ್ ಇಂಟರ್‌ನ್ಯಾಷನಲ್ ಸಂಸ್ಥೆಯಿಂದ ರೆಡಿ ಟು ಲರ್ನ್ ಅರ್ಲಿ ಲಿಟರೆಸಿ ಆಂಡ್ ಮ್ಯಾಥ್ಸ್, www.storyweavers.org.in, ಮತ್ತು ಇತರೆ ಮುಕ್ತ ಸಂಪನ್ಮೂಲಗಳಿಂದ ಅಗತ್ಯ ಮಾಹಿತಿಗಳನ್ನು ಅವಶ್ಯಕತೆ ಮತ್ತು ಸಂದರ್ಭಕ್ಕೆ ಅನುಗುಣವಾಗಿ ಪಠ್ಯಕ್ರಮದಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಆರ್ಥಿಕ ಮತ್ತು ತಾಂತ್ರಿಕ ನೆರವು ನೀಡಿದ ಯುನಿಸೆಫ್ ಸಂಸ್ಥೆಗೆ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

**(ಡಾ. ಎಂ.ಟಿ. ರೇಜು, ಭಾ.ಆ.ಸೇ.)**
ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ
ಬೆಂಗಳೂರು



## ನಾನು ಮತ್ತು ನನ್ನ ಸುತ್ತಲಿರುವುದು

# ನಾನು ನನ್ನದು





# ಕಲಿಕಾ ಫಲಿತಗಳು

## ಉಪವಿಷಯ 1.1: ನಾನು ನನ್ನದು

| 3–4 ವರ್ಷಗಳು | 4–5 ವರ್ಷಗಳು | 5–6 ವರ್ಷಗಳು |
|---|---|---|
| 1 ತಮ್ಮ ಹೆಸರು, ಲಿಂಗ ಮತ್ತು ವಯಸ್ಸು, ಜೊತೆಗೆ ತಮ್ಮ ತಾಯಿ, ತಂದೆ ಹಾಗೂ ಒಡಹುಟ್ಟಿದವರ ಹೆಸರುಗಳನ್ನು ತಿಳಿದಿರುತ್ತಾರೆ. | 1 ತಮ್ಮ ಹೆಸರು, ಲಿಂಗ ಮತ್ತು ವಯಸ್ಸು, ಜೊತೆಗೆ ತಮ್ಮ ತಾಯಿ, ತಂದೆ, ಒಡಹುಟ್ಟಿದವರು ಮತ್ತು ಗೆಳೆಯ/ತಿಯರ ಹೆಸರುಗಳನ್ನು ಹೇಳಬಲ್ಲರು. | 1 ತಮ್ಮ ಗೆಳೆಯ/ತಿಯರು ಅಥವಾ ಸಹಪಾಠಿಗಳ ಬಗ್ಗೆ ಒಂದೆರಡು ವಾಕ್ಯಗಳಲ್ಲಿ ವಿವರಿಸಬಲ್ಲರು. |
| 2 ಕುಟುಂಬದಲ್ಲಿ ಎಷ್ಟು ಜನರಿದ್ದಾರೆ ಎಂಬುದನ್ನು ಎರಡು ವಾಕ್ಯಗಳಲ್ಲಿ ಹೇಳಬಲ್ಲರು. | 2 ತಮ್ಮ ಬಗ್ಗೆ ಮತ್ತು ತಮ್ಮಲ್ಲಿರುವುದರ ಬಗ್ಗೆ, ತಮ್ಮ ಇಷ್ಟ ಮತ್ತು ಇಷ್ಟವಿಲ್ಲದ್ದರ ಕುರಿತು, ಯಾವುದು ತಮ್ಮನ್ನು ಸಂತೋಷಪಡಿಸುತ್ತದೆ, ಯಾವುದು ಬೇಸರ/ದುಃಖಪಡಿಸುತ್ತದೆ ಎಂದು ಸರಳ ವಾಕ್ಯಗಳಲ್ಲಿ ಅಥವಾ ಕಿರು ಪದಗುಚ್ಛಗಳಲ್ಲಿ ವಿವರಿಸುತ್ತಾರೆ. | 2 ಮಕ್ಕಳು ಅವರ ಗೆಳೆಯ/ತಿಯರು, ಅವರುಗಳ ಇಷ್ಟ ಮತ್ತು ಇಷ್ಟವಿಲ್ಲದ್ದರ ಕುರಿತು, ಅವರ ಇಷ್ಟದ ಪ್ರಾಣಿಗಳು ಮತ್ತು ಆಹಾರದ (ತರಕಾರಿಗಳು ಮತ್ತು ಹಣ್ಣುಗಳು) ಕುರಿತು ತಿಳಿದಿರುತ್ತಾರೆ ಮತ್ತು ವಿವರಿಸುತ್ತಾರೆ. |
| 3 ಮುಖಭಾವವನ್ನು ಗುರುತಿಸಬಲ್ಲರು ಮತ್ತು ಮುಖಭಾವಗಳನ್ನು ಗ್ರಹಿಸಿಕೊಂಡು, ಬೇರೆಯವರಿಗೆ ಏನು ಅನ್ನಿಸುತ್ತಿದೆ ಎಂಬುದನ್ನು ತಿಳಿಯಬಲ್ಲರು ಮತ್ತು ಮುಖದ ಮೇಲೆ ಅಥವಾ ಚಿತ್ರದಲ್ಲಿ ಪ್ರಕಟವಾದ ಭಾವನೆ ಏನು ಎಂದು ಒಂದು ವಾಕ್ಯದಲ್ಲಿ ವಿವರಿಸಬಲ್ಲರು. | 3 ಮುಖಭಾವಗಳನ್ನು ಭಾವನೆಗಳ ಜೊತೆ ಸಂಬಂಧ ಕಲ್ಪಿಸಬಲ್ಲರು, ಯಾವುದರಿಂದ ಭಾವನೆಗಳು ಉಂಟಾಗುತ್ತವೆ; ತಮಗೆ ಅಥವಾ ಇನ್ನೊಬ್ಬರಿಗೆ ಕೋಪ, ನೋವು, ದುಃಖ ಮತ್ತು ಸಂತೋಷ ಉಂಟು ಮಾಡುವ ಸನ್ನಿವೇಶಗಳನ್ನು ಊಹೆ ಮಾಡಬಲ್ಲರು ಮತ್ತು ವಾಕ್ಯಗಳಲ್ಲಿ ವಿವರಿಸುತ್ತಾರೆ. | 3 ಬೇರೆಯವರಿಗೆ ಸೇರಿದ ವಸ್ತುಗಳನ್ನು ಗೌರವಿಸಲು ಕಲಿಯುತ್ತಾರೆ. |
| 4 ಮುದ್ರಣದಲ್ಲಿರುವ ತಮ್ಮ ಹೆಸರನ್ನು ಗುರುತಿಸಬಲ್ಲರು ಮತ್ತು ಹಾಜರಾತಿಯನ್ನು ಗುರುತಿಸಬಲ್ಲರು. | 4 ಮುದ್ರಣದಲ್ಲಿರುವ ತಮ್ಮ ಹೆಸರನ್ನು ಗುರುತಿಸಬಲ್ಲರು ಮತ್ತು ಹಾಜರಾತಿಯನ್ನು ಗುರುತಿಸಬಲ್ಲರು. | 4 ಜನರು ಹೇಗೆ ವಿವಿಧ ಭಾವನೆಗಳಿಗೆ ಪ್ರತಿಕ್ರಿಯಿಸುತ್ತಾರೆ ಮತ್ತು ಒಬ್ಬರು ಕೋಪದಲ್ಲಿದ್ದಾಗ ಅಥವಾ ಗೆಳೆಯ/ತಿಯೊಬ್ಬರು ದುಃಖ, ಭಯ ಅಥವಾ ನೋವಿನಲ್ಲಿದ್ದ ಸನ್ನಿವೇಶಗಳಲ್ಲಿ ಸಾಮಾಜಿಕವಾಗಿ ಸ್ವೀಕೃತವಾದ ಪ್ರತಿಕ್ರಿಯೆಗಳು ಏನು ಎಂಬುದನ್ನು ಅರ್ಥ ಮಾಡಿಕೊಳ್ಳುತ್ತಾರೆ. |
| | | 5 ತಮ್ಮ ಹೆಸರನ್ನು ಮುದ್ರಣದಲ್ಲಿ ಬರೆಯಬಲ್ಲರು ಮತ್ತು ಗುರುತಿನ/ಅನನ್ಯತೆ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳುತ್ತಾರೆ. |

ಉಪವಿಷಯ 1.1

# ನಾನು ನನ್ನದು



## ಕಲಿಕಾ ಉದ್ದೇಶಗಳು

ಈ ಅಧ್ಯಾಯದ ಕೊನೆಯಲ್ಲಿ ಮಕ್ಕಳು ಈ ಕೆಳಗಿನ ಸಾಮರ್ಥ್ಯಗಳನ್ನು ಗಳಿಸಿರುತ್ತಾರೆ –

- ತಮ್ಮ ಹೆಸರು, ಲಿಂಗ ಮತ್ತು ವಯಸ್ಸು, ಜೊತೆಗೆ ತಮ್ಮ ತಾಯಿ, ತಂದೆ, ಒಡಹುಟ್ಟಿದವರು ಮತ್ತು ಗೆಳೆಯ/ತಿಯರ ಹೆಸರುಗಳನ್ನು ಹೇಳಬಲ್ಲರು.
- ತಮ್ಮ ಬಗ್ಗೆ ಮತ್ತು ತಮ್ಮಲ್ಲಿರುವುದರ ಬಗ್ಗೆ, ತಮ್ಮ ಇಷ್ಟ ಮತ್ತು ಇಷ್ಟವಿಲ್ಲದ್ದರ ಕುರಿತು, ಯಾವುದು ತಮ್ಮನ್ನು ಸಂತೋಷಪಡಿಸುತ್ತದೆ, ಯಾವುದು ಬೇಸರ/ದುಃಖಪಡಿಸುತ್ತದೆ ಎಂದು ಸರಳ ವಾಕ್ಯಗಳಲ್ಲಿ ಅಥವಾ ಕಿರು ಪದಗುಚ್ಛಗಳಲ್ಲಿ ವಿವರಿಸುತ್ತಾರೆ.
- ಮುಖಭಾವಗಳನ್ನು ಭಾವನೆಗಳ ಜೊತೆ ಸಂಬಂಧ ಕಲ್ಪಿಸಬಲ್ಲರು, ಯಾವುದರಿಂದ ಭಾವನೆಗಳು ಉಂಟಾಗುತ್ತವೆ; ತಮಗೆ ಅಥವಾ ಇನ್ನೊಬ್ಬರಿಗೆ ಕೋಪ, ನೋವು, ದುಃಖ ಮತ್ತು ಸಂತೋಷ ಉಂಟು ಮಾಡುವ ಸನ್ನಿವೇಶಗಳನ್ನು ಊಹೆ ಮಾಡಬಲ್ಲರು ಮತ್ತು ವಾಕ್ಯಗಳಲ್ಲಿ ವಿವರಿಸುತ್ತಾರೆ.
- ಮುದ್ರಣದಲ್ಲಿರುವ ತಮ್ಮ ಹೆಸರನ್ನು ಗುರುತಿಸಬಲ್ಲರು ಮತ್ತು ಹಾಜರಾತಿಯನ್ನು ಗುರುತಿಸಬಲ್ಲರು.

ಸಂಭಾಷಣೆ 1

## ನಾನು ಯಾರು?



### ಕಲಿಕಾ ಫಲಿತಗಳು

ಈ ಸಂಭಾಷಣೆಯ ಕೊನೆಯಲ್ಲಿ ಮಕ್ಕಳು ತಮ್ಮ ಹೆಸರು, ಲಿಂಗ ಮತ್ತು ವಯಸ್ಸು, ಜೊತೆಗೆ ತಮ್ಮ ತಂದೆ, ಒಡಹುಟ್ಟಿದವರು ಮತ್ತು ಗೆಳೆಯ/ತಿಯರ ಹೆಸರುಗಳನ್ನು ಹೇಳಬಲ್ಲರು.

### ಕಲಿಕಾ ಬೋಧನಾ ಸಾಮಗ್ರಿಗಳು

ಏನೂ ಇಲ್ಲ

### ಶಿಕ್ಷಕರ ಪೂರ್ವಸಿದ್ಧತೆ

ಮಕ್ಕಳೊಂದಿಗೆ ಈ ಸಂಭಾಷಣೆಯನ್ನು ಆರಂಭಿಸುವುದಕ್ಕಿಂತ ಮೊದಲು, ಸ್ನೇಹಯುತವಾದ ಧ್ವನಿಯಲ್ಲಿ ಮಾತನಾಡಲು ನಿಮ್ಮ ಮನಸ್ಸಿನಲ್ಲಿಯೇ ಕೆಲವು ಸಲ ಅಭ್ಯಾಸ ಮಾಡಿಕೊಳ್ಳುವುದು.

### ಸೂಚನೆಗಳು

ಹಂತ 1

**ಶಿಕ್ಷಕರು ಮತ್ತು ಮಕ್ಕಳು ತಮ್ಮನ್ನು ತಾವು ಪರಿಚಯಿಸಿಕೊಳ್ಳುವುದು. ಇಡೀ/ಪೂರ್ಣ ತರಗತಿ ಚಟುವಟಿಕೆ.**

1. ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸುವುದು.
2. ನಿಮ್ಮನ್ನು ಮತ್ತು ನಿಮ್ಮ ಆಯಾ ಅಥವಾ ಸಹಾಯಕ ಶಿಕ್ಷಕರನ್ನು ಪರಿಚಯಿಸಿಕೊಳ್ಳಿ. 'ಮಕ್ಕಳೇ, ನಾನು ನಿಮ್ಮ ಶಿಕ್ಷಕಿ/ಟೀಚರ್. ನನ್ನ ಹೆಸರು ______________, ನನಗೆ __________ ವರ್ಷ ಆಗಿದೆ. ನಾನು ಹುಡುಗ/ಹುಡುಗಿ.
   ಇವರು ನಮ್ಮ ಸಹಾಯಕ ಶಿಕ್ಷಕರು, ಇವರ ಹೆಸರು ____________ ಅಕ್ಕಾ, ಇವರಿಗೆ _______________ ವರ್ಷ ಆಗಿದೆ.
   ಇವರು ಹುಡುಗಿ.
3. ಮೊದಲ ಮಗುವಿಗೆ ಕೇಳಿ, "ಈಗ ನೀನು ನಿನ್ನ ಹೆಸರು, ತರಗತಿ, ನಿನ್ನ ಹೆಸರು ಮತ್ತು ನೀನು ಹುಡುಗನೋ ಅಥವಾ ಹುಡುಗಿಯೋ ಅಂತ ಹೇಳಬೇಕು, ನಾನು ಹೇಗೆ ಹೇಳಿದೆನೋ ಹಾಗೆಯೇ ನೀವು ಹೇಳಬೇಕು. ಮನೆಯಲ್ಲಿ ನಿಮ್ಮ ಅಪ್ಪ, ಅಮ್ಮ ನಿಂಗೆ ಏನಂತ ಕರೀತಾರೆ, ಅದನ್ನೂ ಹೇಳಬೇಕು, ಆಯ್ತಾ ಮಗೂ..."
4. ಮಕ್ಕಳು ಒಬ್ಬೊಬ್ಬರಾಗಿ ತಮ್ಮ ಹೆಸರುಗಳನ್ನು ಹೇಳಿ, ಪರಿಚಯಿಸಿಕೊಂಡ ನಂತರ, ಇನ್ನುಳಿದ ಮಕ್ಕಳು ಅವರಿಗೆ ಚಪ್ಪಾಳೆ ತಟ್ಟಬೇಕು ಅಥವಾ ಕೈ ಬೀಸಬೇಕು ಅಥವಾ ಬೇರೆ ಏನಾದರೂ ದೈಹಿಕ ಚಟುವಟಿಕೆ ಮಾಡುವುದು.

ಹಂತ 2

**ಮಕ್ಕಳು ತಮ್ಮ ಸಹಪಾಠಿ ಅಥವಾ ಗೆಳೆಯ/ತಿಯನ್ನು ಗುರುತಿಸುತ್ತಾರೆ.**

1. ಮಕ್ಕಳಿಗೆ ತಮ್ಮ ಗೆಳೆಯ/ತಿಯಾಗಿರುವ ಒಂದು ಮಗುವಿನತ್ತ ಬೆರಳು ತೋರಿಸಿ, ಅವರ ಹೆಸರು, ವಯಸ್ಸು ಮತ್ತು ಲಿಂಗವನ್ನು ಒಂದು ಪೂರ್ಣವಾಕ್ಯದಲ್ಲಿ ಹೇಳುವಂತೆ ತಿಳಿಸುವುದು. ಮೊದಲು ಕೆಲವು ಮಕ್ಕಳು ಉತ್ತರಿಸಿದಾಗ, ಅವರ ಪ್ರತಿಕ್ರಿಯೆಯನ್ನು ಪೂರ್ಣ ವಾಕ್ಯವಾಗಿ ನೀವು ಪೂರ್ಣಗೊಳಿಸಿ, ಆಮೇಲೆ ಅವರು ನೀವು ಹೇಳಿದ್ದನ್ನು ಪುನರಾವರ್ತನೆ ಮಾಡುವಂತೆ ತಿಳಿಸುವುದು.
2. ನೀವು ಇದನ್ನು ಕೆಲವು ಸಲ ಮಾಡಿದ ನಂತರ, ಮಕ್ಕಳಿಗೆ ಪೂರ್ಣವಾಕ್ಯವನ್ನು ಮಾತನಾಡುವಂತೆ ಪ್ರೋತ್ಸಾಹಿಸುವುದು. ನೀವು ಮೊದಲ ಕೆಲವು ಮಕ್ಕಳಿಗೆ ಮಾಡಿ ತೋರಿಸುತ್ತಿರುವಂತೆ ಹೀಗೆ ಮಾಡುವಂತೆ ಮಕ್ಕಳಿಗೆ ಕೇಳಬಹುದು.

ಸಂಭಾಷಣೆ 2

# ನನ್ನ ಇಷ್ಟಗಳು ಮತ್ತು ಇಷ್ಟವಿಲ್ಲದಿರುವುದು



## ಕಲಿಕಾ ಫಲಿತಗಳು

ಈ ಸಂಭಾಷಣೆಯ ಕೊನೆಯಲ್ಲಿ, ಮಕ್ಕಳು ತಮ್ಮ ಇಷ್ಟ ಮತ್ತು ಇಷ್ಟವಿಲ್ಲದ್ದರ ಕುರಿತು ಮಾತನಾಡಬಲ್ಲರು.

## ಕಲಿಕಾ ಬೋಧನಾ ಸಾಮಗ್ರಿಗಳು

ಏನೂ ಇಲ್ಲ

## ಶಿಕ್ಷಕರ ಪೂರ್ವಸಿದ್ಧತೆ

ನಿಮ್ಮ ಮನೆಯಿಂದ ಏನಾದರೂ ವಸ್ತುವನ್ನು ತನ್ನಿ. ಆ ವಸ್ತು ಬಹುತೇಕ ಮಕ್ಕಳ ಮನೆಗಳಲ್ಲಿ ಇರುವ ಸಾಧ್ಯತೆ ಇರಬೇಕು, ಅಂತಹ ವಸ್ತುವನ್ನು ತರುವುದು.

## ಸೂಚನೆಗಳು

### ಹಂತ 1

**ಇಡೀ/ಪೂರ್ಣ ತರಗತಿ ಚಟುವಟಿಕೆ**

1. ತರಗತಿ ಕೋಣೆಯ ಸುತ್ತ ಒಮ್ಮೆ ಓಡಾಡಿ ಮತ್ತು ಎಲ್ಲ ಮಕ್ಕಳಿಗೆ ಗೊತ್ತಿರುವ, ಎಲ್ಲರೂ ಇಷ್ಟಪಡುವ ಒಂದು ವಸ್ತುವನ್ನು ಹುಡುಕಿಕೊಳ್ಳಿ. ಅದು ಒಂದು ಆಟಿಗೆ ಅಥವಾ ಪುಸ್ತಕ ಅಥವಾ ಏನಾದರೂ ಸಂಗೀತದ ಸಾಧನ ಆಗಿರಬಹುದು.
2. ನಮ್ಮ ತರಗತಿ ಕೋಣೆಯಲ್ಲಿ ಆಟವಾಡಲು ಬಹಳ ವಸ್ತುಗಳಿವೆ, ಆದರೆ ನಾವು ಯಾವುದೋ ಒಂದನ್ನು ಬೇರೆ ವಸ್ತುಗಳಿಗಿಂತ ಹೆಚ್ಚು ಇಷ್ಟಪಡುತ್ತೇವೆ ಎಂದು ಸರಳ ಪದಗಳಲ್ಲಿ ವಿವರಿಸುವುದು.
3. ಆ ವಸ್ತುವನ್ನು ಕೈಗೆತ್ತಿಕೊಂಡು, “ಏನಿದು ಹೇಳಿ...” ಎಂದು ಕೇಳುತ್ತ, ನೀವು ಯಾಕೆ ಅದನ್ನು ಇಷ್ಟಪಡುತ್ತೀರಿ ಎಂದು ವಿವರಿಸಿ. ತುಂಬ ಸರಳವಾಗಿ ಹೇಳುವುದು. (ನಂಗೆ ಈ ಪುಸ್ತಕ ಅಂದ್ರೆ ತುಂಬಾ ಇಷ್ಟ, ಯಾಕೆಂದ್ರೆ ಇದ್ರಲ್ಲಿ ತುಂಬ ಬಣ್ಣಬಣ್ಣದ ಚಿತ್ರ ಇವೆ ಅಥವಾ ನಂಗೆ ಈ ಡ್ರಮ್ಮಿನ ಸದ್ದು ತುಂಬ ಇಷ್ಟ ಅಥವಾ ನಂಗೆ ಈ ಪಜಲ್ ತುಂಬ ಇಷ್ಟ, ಇದನ್ನ ಹಿಂಗೆ ಜೋಡಿಸೋದು ಇಷ್ಟ ನಂಗೆ... ಹೀಗೆ)
4. ‘ಈಗ ನೀವೆಲ್ಲರೂ ನಿಮಗೆ ಇಷ್ಟವಾಗಿರೋ ಒಂದು ವಸ್ತುವನ್ನು ತೆಗೆದುಕೊಂಡು, ಮತ್ತೆ ಎಲ್ರೂ ಗುಂಪಲ್ಲಿ ಬಂದು ಕೂರಬೇಕು’ ಎಂದು ಹೇಳುವುದು.
5. ಮಕ್ಕಳಿಗೆ ತರಗತಿಕೋಣೆಯಲ್ಲಿ ಓಡಾಡಿ ವಸ್ತುಗಳನ್ನು ಆಯ್ಕೆ ಮಾಡಿಕೊಳ್ಳಲು ಹತ್ತು ನಿಮಿಷ ಸಮಯ ಕೊಡುವುದು (ಇಬ್ಬರು ಮಕ್ಕಳು ಒಂದೇ ವಸ್ತುವನ್ನು ಇಷ್ಟಪಟ್ಟರೆ, ಪರವಾಗಿಲ್ಲ, ಆ ಇಬ್ಬರೂ ಮಕ್ಕಳು ಆ ವಸ್ತುವನ್ನು ಹಿಡಿದುಕೊಂಡು, ಅಕ್ಕಪಕ್ಕದಲ್ಲಿ ಕುಳಿತುಕೊಳ್ಳಬಹುದು, ಇಬ್ಬರೂ ಯಾಕೆ ಇಷ್ಟ ಎನ್ನುವುದನ್ನು ಬೇರೆಯಾಗಿ ವಿವರಿಸಬಹುದು.)
6. ಮಕ್ಕಳಿಗೆ ಅವರು ಏನು ಆಯ್ಕೆ ಮಾಡಿಕೊಂಡಿದ್ದಾರೆ ಮತ್ತು ಅದು ಅವರಿಗೆ ಏಕೆ ಇಷ್ಟ ಎಂಬುದನ್ನು ವಿವರಿಸಲು ಹೇಳುವುದು. ಸಾಧ್ಯವಿದ್ದಷ್ಟೂ ಅದನ್ನು ಪೂರ್ಣ ವಾಕ್ಯದಲ್ಲಿ ಹೇಳಲು ಪ್ರೋತ್ಸಾಹಿಸುವುದು.
7. ಇಡೀ ಗುಂಪು ಹೇಳುವುದನ್ನು ಮುಗಿಸಿದ ನಂತರ, ಅವರ ಪ್ರತಿಕ್ರಿಯೆಗಳನ್ನು ಸಾರಾಂಶೀಕರಿಸಿ, ಮಕ್ಕಳು ತರಗತಿಕೋಣೆಯಲ್ಲಿರುವ ಕೆಲವು ವಸ್ತುಗಳನ್ನು ಯಾಕೆ ತುಂಬ ಇಷ್ಟಪಟ್ಟರು ಎಂಬುದಕ್ಕೆ ಕಾರಣಗಳನ್ನು ನೀಡಿ ವಿವರಿಸುವುದು, ಉದಾ: ನಿಮ್ಮಲ್ಲಿ ಹೆಚ್ಚಿನ ಮಕ್ಕಳು ಆಟದ ಸಾಮಾನು ಇಷ್ಟಪಟ್ಟಿರಿ, ನಿಮಗೆ ಆಡಲು ಇಷ್ಟ, ಮತ್ತೆ ಕೆಲವರು ಪುಸ್ತಕದಲ್ಲಿರೋ ಚಿತ್ರಗಳನ್ನು ಇಷ್ಟಪಟ್ಟಿರಿ, ಹೀಗೆ.
8. ಈ ಚಟುವಟಿಕೆಯು ಒಂದಕ್ಕಿಂತ ಹೆಚ್ಚು ದಿನ ತೆಗೆದುಕೊಳ್ಳಬಹುದು, ಅವಸರ ಮಾಡಬೇಡಿ. ಯಾವುದೇ ಮಗುವಿಗೆ ಮೊದಲ ದಿನ ಸರದಿ ಸಿಗದಿದ್ದರೆ, ಮರುದಿನ ಅದೇ ವಸ್ತುವನ್ನು ಎತ್ತಿಕೊಂಡು ವಿವರಿಸಲು ಹೇಳಬಹುದು.

ಸಂಭಾಷಣೆ 2

# ನನ್ನ ಇಷ್ಟಗಳು ಮತ್ತು ಇಷ್ಟವಿಲ್ಲದಿರುವುದು



## ಹಂತ 2

**ಮಕ್ಕಳು ತಾವು ಇಷ್ಟಪಡುವ ತಮ್ಮದೊಂದು ವಸ್ತುವಿನ ಬಗ್ಗೆ ಮಾತನಾಡುತ್ತಾರೆ**


1. ನಿಮ್ಮ ಮನೆಯಿಂದ ನೀವು ತಂದಿರುವ ವಸ್ತುವನ್ನು ಹೊರಗೆ ತೆಗೆಯಿರಿ. ನೀವು ತಂದ ವಸ್ತುವಿನ ಬಗ್ಗೆ ಎರಡು ವಿಚಾರಗಳನ್ನು ಹೇಳುತ್ತ ಸಂಭಾಷಣೆಯನ್ನು ಶುರು ಮಾಡಿ. ಅದು ಏನು ಮತ್ತು ಅದರ ಉಪಯೋಗಗಳೇನು, ನಿಮಗೆ ಯಾಕೆ ಆ ವಸ್ತು ಅಷ್ಟೊಂದು ಇಷ್ಟ ಎಂಬ ಬಗ್ಗೆ ಮಾತನಾಡುವುದು.
2. ಮಕ್ಕಳಿಗೆ ಮನೆಯಿಂದ ಅವರು ತುಂಬ ಇಷ್ಟಪಡುವ ಏನಾದರೂ ವಸ್ತು ತರುವ ಕಾರ್ಯವನ್ನು ವಹಿಸುವುದು. ಇದು ಏನಾದರೂ ಆಗಿರಬಹುದು – ಆಟಿಗೆ, ವಸ್ತು (ಬಾಚಣಿಗೆ, ಪೆನ್ನು, ಪೆನ್ ಸ್ಟಾಂಡ್ ಇತ್ಯಾದಿ) ಅಥವಾ ಉಡುಪಿಗೆ ಸಂಬಂಧಿಸಿದ್ದು (ರಿಬ್ಬನ್ನುಗಳು, ಶೂಸ್, ಬಳೆ ಇತ್ಯಾದಿ) ಅಥವಾ ಒಂದು ಪುಸ್ತಕ ಅಥವಾ ಮನೆಯಲ್ಲಿ ಅವರು ಬಳಸುವ ಏನಾದರೂ ಚಿಕ್ಕ ಪಾತ್ರೆ (ಲೋಟ, ಬಟ್ಟಲು ಪುಟಾಣಿ ಡಬ್ಬಿ) ಇತ್ಯಾದಿ ಏನಾದರೂ ಸರಿ.
3. ಮಕ್ಕಳು ಮೊದಲು ತಾವು ತಂದಿರುವ ಆ ವಸ್ತುವಿನ ಹೆಸರು ಹೇಳಿ, ಅದು ಏನು ಮತ್ತು ಅದನ್ನು ತಾವು ಹೇಗೆ ಬಳಸುತ್ತೇವೆ ಎಂದು ಹೇಳಲು ಆಸ್ಪದ ಕಲ್ಪಿಸುವುದು. ಮಕ್ಕಳಿಗೆ ಪೂರ್ಣ ವಾಕ್ಯವನ್ನು ಹೇಳಲು ಪ್ರೋತ್ಸಾಹಿಸುವುದು. ಮೊದಲ 2–3 ಸಲ ಅವರ ಉತ್ತರಗಳನ್ನು ಪೂರ್ಣ ವಾಕ್ಯಗಳಾಗಿ ನೀವು ಸರಿಪಡಿಸಿ ಹೇಳಿ, ಅವರಿಗೆ ಅದನ್ನು 2 ವಾಕ್ಯಗಳಲ್ಲಿ ಪುನರಾವರ್ತನೆ ಮಾಡಲು ತಿಳಿಸುವುದು – ಇದು ____________, ಇದನ್ನು ____________ ಗೆ ಬಳಸುತ್ತೇವೆ, ನನಗೆ ಇದು ತುಂಬ ಇಷ್ಟ, ಯಾಕೆಂದರೆ ____________
4. ಕೆಲವು ಮಕ್ಕಳು ಏನೂ ತರದೇ ಇರುವ ಸಾಧ್ಯತೆಯೂ ಇರುತ್ತದೆ. ತುಂಬಾ ಒತ್ತಿ ಹೇಳಬೇಡಿ, ಆದರೆ ಗರಿಷ್ಠ ಸಂಖ್ಯೆಯ ಮಕ್ಕಳು ಏನಾದರೂ ತರುವಂತೆ ಪ್ರೋತ್ಸಾಹಿಸುವುದು. ಅವರು ಅದನ್ನು ಮನೆಗೆ ಮರಳಿ ಹೋಗುವಾಗ ಮರೆಯದೇ ತೆಗೆದುಕೊಂಡು ಹೋಗುವಂತೆ ನೋಡಿಕೊಳ್ಳಿ.

## ಸಂಭಾಷಣೆ 3

# ನನ್ನ ಭಾವನೆಗಳು

### ಕಲಿಕಾ ಫಲಿತಗಳು


ಮಗುವು ಮುಖದ ಅಭಿವ್ಯಕ್ತಿಗಳನ್ನು ಭಾವನೆಗಳೊಂದಿಗೆ ಸಂಬಂಧಿಸಲು ಮತ್ತು ಯಾವುದರಿಂದ ಭಾವನೆಗಳು ಉಂಟಾಗುತ್ತವೆ ಎಂಬುದನ್ನು ತಿಳಿದುಕೊಳ್ಳಲು ಸಮರ್ಥರಾಗುತ್ತಾರೆ.




### ಕಲಿಕಾ ಬೋಧನಾ ಸಾಮಗ್ರಿಗಳು

- **ಟಿಎಲ್ಎಂ 1.1.1** ಭಾವನೆಗಳನ್ನು ಅಂಟಿಸಿದ ಸೂತ್ರದಬೊಂಬೆಗಳು (ಇಮೋಶನ್ ಸ್ಟಿಕ್ ಪಪೆಟ್ಸ್)
- **ಎಫ್1.1.1** ಸನ್ನಿವೇಶಗಳನ್ನು ತೋರಿಸುವ ಚಿತ್ರದ ಕಾರ್ಡುಗಳು (ಎಫ್1.1.1–1 ಬೊಗಳುವ ನಾಯಿಯತ್ತ ಮುಖ ಮಾಡಿದ ಮಗು; **ಎಫ್1.1.1–2** ಅಂಗಡಿಯಿಂದ ಏನಾದರೂ ಕೊಡಿಸುವಂತೆ ಕೇಳುತ್ತ ಸಿಟ್ಟಿನ ಮುಖದಲ್ಲಿರುವ ಮಗು; **ಎಫ್1.1.1–3** ತಂದೆಗೆ ಟಾಟಾ ಎನ್ನುತ್ತಿರುವ ಎತ್ತಿಕೊಂಡಿರುವ ಮಗು; **ಎಫ್1.1.1–4** ಏನೋ ಉಡುಗೊರೆಯೊಂದನ್ನು ಪಡೆಯುತ್ತಿರುವ ಮಗು) – ಮಕ್ಕಳಲ್ಲಿ ಭಾವನೆಗಳನ್ನು ಹುಟ್ಟಿಸುವಂತೆ ಇರುವ ಭಯ, ಸಿಟ್ಟು, ದುಃಖ, ಸಂತೋಷದ ಸನ್ನಿವೇಶದಲ್ಲಿರುವ ಮಕ್ಕಳ ಚಿತ್ರಗಳು. ಕಾರ್ಡಿನ ಇನ್ನೊಂದು ಕಡೆ ಅವೇ ಮಕ್ಕಳ ಚಿತ್ರಗಳು ಭಾವನೆಗಳನ್ನು ವ್ಯಕ್ತಪಡಿಸುವಂತೆ ಇರುತ್ತವೆ.




### ಶಿಕ್ಷಕರ ಪೂರ್ವಸಿದ್ಧತೆ

ಭಾವನೆಗಳ ಸೂತ್ರದ ಬೊಂಬೆಗಳನ್ನು ಮತ್ತು ಸನ್ನಿವೇಶದ ಕಾರ್ಡುಗಳನ್ನು ತರಗತಿ ಶುರುವಾಗುವದಕ್ಕಿಂತ ಮೊದಲು ಕೈಗೆ ಸಿಗುವಂತೆ ಸಿದ್ಧವಾಗಿಟ್ಟುಕೊಳ್ಳುವುದು.

### ಸೂಚನೆಗಳು

#### ಹಂತ 1

**ಮಕ್ಕಳು ಕಾರ್ಡಿನಲ್ಲಿ ಚಿತ್ರಿತಗೊಂಡ ಭಾವನೆಗಳನ್ನು ಗುರುತಿಸುತ್ತಾರೆ ಮತ್ತು ಆ ಮುಖಭಾವಗಳನ್ನು ತಾವೂ ಮಾಡಿ ತೋರಿಸುತ್ತಾರೆ.**
**ಇಡೀ ಗುಂಪು ಚಟುವಟಿಕೆ:**

1. ನಮಗೆ ಇಷ್ಟವಾಗಿದ್ದರ ಕುರಿತು ಮಾತನಾಡಿದಾಗ ನಮಗೇನು ಅನ್ನಿಸುತ್ತದೆ ಎಂದು ಮಕ್ಕಳಿಗೆ ಕೇಳುತ್ತ ಸಂಭಾಷಣೆಯನ್ನು ಆರಂಭಿಸುವುದು. ಅವರು ಸಂತೋಷಗೊಂಡಾಗ ಅಥವಾ ಖುಷಿಯಲ್ಲಿದ್ದಾಗ ಅವರ ಮುಖ ಹೇಗೆ ಕಾಣುತ್ತದೆ ಎಂಬುದನ್ನು ಅನುಕರಣೆ ಮಾಡಿ ತೋರಿಸಲು ಹೇಳುವುದು.
2. ಇನ್ನೂ ಕೆಲವು ಭಾವನೆಗಳಿಗೆ, ಒಬ್ಬರ ಮುಖವನ್ನು ನೋಡಿ ಭಾವನೆಗಳನ್ನು ಗುರುತಿಸಲು ನಮಗೆ ಸಾಧ್ಯವೇ ಎಂಬುದನ್ನು ಈಗ ನೋಡೋಣ ಎಂದು ಮಕ್ಕಳಿಗೆ ಹೇಳುವುದು.
3. 4 ಮುಖ್ಯವಾದ ಭಾವನೆಗಳ ಸೂತ್ರದ ಬೊಂಬೆಗಳನ್ನು ತೋರಿಸಿ (ನಗು, ದುಃಖ, ಸಿಟ್ಟು ಮತ್ತು ಭಯ). ನೀವು ಚೆನ್ನಾಗಿ ಅಭಿನಯಿಸುತ್ತೀರಾದರೆ, ಈ ಭಾವನೆಗಳನ್ನು ನಿಮ್ಮ ಮುಖದ ಮೇಲೆ ಮಾಡಿ ತೋರಿಸುವುದು.
4. ಈ ಸೂತ್ರದ ಬೊಂಬೆಗಳು ಯಾವ ಭಾವನೆಗಳನ್ನು ತೋರಿಸುತ್ತಿವೆ ಎಂದು ಊಹೆ ಮಾಡುವಂತೆ ಮಕ್ಕಳಿಗೆ ಕೇಳುವುದು. ಅವರಿಗೆ ಸರಿಯಾಗಿ ಹೆಸರಿಸಲು ಆಗಬಹುದು ಅಥವಾ ಆಗದೇ ಇರಬಹುದು. ಸರಿಯಾಗಿ ಗುರುತಿಸದೇ ಇದ್ದರೆ, ಅವರಿಗೆ ಗುರುತಿಸಲು ಮಾರ್ಗದರ್ಶನ ಮಾಡುವುದು.

## ಸಂಭಾಷಣೆ 3

## ನನ್ನ ಭಾವನೆಗಳು

5. ಈಗ ಸೂತ್ರದ ಬೊಂಬೆಗಳನ್ನು ಮಡುಚಿ ಇಡುವುದು.
6. ಒಂದು ಮಗುವಿಗೆ ಯಾವುದಾದರೂ ಒಂದು ಸೂತ್ರದ ಬೊಂಬೆಯನ್ನು ತೆಗೆದುಕೊಂಡು, ಅದರಲ್ಲಿ ತೋರಿಸಿರುವ ಭಾವನೆಯನ್ನು ತಮ್ಮ ಮುಖದಲ್ಲಿ ಅಭಿನಯಿಸಿ ತೋರಿಸಲು ಹೇಳುವುದು.
7. ಇನ್ನೊಂದು ಮಗುವಿಗೆ ಆ ಭಾವನೆಯನ್ನು ಹೆಸರಿಸಲು ಮತ್ತು ಅದನ್ನು ಒಂದು ವಾಕ್ಯದಲ್ಲಿ ವಿವರಿಸುವಂತೆ ಹೇಳುವುದು. ಉದಾ: ಮೇರಿ ಖುಷಿಯಾಗಿದ್ದಾಳೆ ಅಥವಾ ರವಿ ದುಃಖದಲ್ಲಿದ್ದಾನೆ ಹೀಗೆ.
8. ಎಲ್ಲಾ ಮಕ್ಕಳಿಗೆ ಭಾವನೆಗಳನ್ನು ಅನುಕರಣೆ ಮಾಡಲು ಅವಕಾಶ ಕೊಡುವುದು.

### ಹಂತ 2

**ಮಕ್ಕಳು ಮುಖಭಾವ ಮತ್ತು ಸನ್ನಿವೇಶವನ್ನು ಆಧರಿಸಿ ಭಾವನೆಗಳನ್ನು ಊಹಿಸುತ್ತಾರೆ ಅಥವಾ ತೀರ್ಮಾನಕ್ಕೆ ಬರುತ್ತಾರೆ**

1. ನೀವು ಈಗ ಕೆಲವು ಕಾರ್ಡುಗಳನ್ನು ತೋರಿಸುತ್ತೀರಿ, ಅದರಲ್ಲಿ ಮಗುವಿಗೆ ನಗು, ದುಃಖ, ಸಿಟ್ಟು ಮತ್ತು ಭಯ ಉಂಟು ಮಾಡುವಂತೆ ಏನೋ ನಡೆಯುತ್ತಿರುವ ಸನ್ನಿವೇಶ ಇರುತ್ತದೆ ಎಂದು ಹೇಳುತ್ತ ಸಂಭಾಷಣೆ ಆರಂಭಿಸಿ. ಚಿತ್ರದಲ್ಲಿರೋ ಮಗುವಿಗೆ ಏನು ಅನ್ನಿಸ್ತಾ ಇದೆ ಮತ್ತು ಯಾಕೆ ಹಾಗೆ ಅನ್ನಿಸ್ತಾ ಇದೆ ಎಂದು ಮಕ್ಕಳು ಊಹಿಸಿ ಹೇಳಬೇಕು ಎಂದು ಹೇಳುವುದು.
2. ಸನ್ನಿವೇಶದ ಕಾರ್ಡುಗಳನ್ನು ಹೊರಗೆ ತೆಗೆದು, ಅದರಲ್ಲಿರುವ ಚಿತ್ರಗಳನ್ನು ತೋರಿಸುವುದು. ಚಿತ್ರದಲ್ಲಿರುವ ಮಗುವಿಗೆ ಏನು ಅನ್ನಿಸ್ತಾ ಇದೆ ಮತ್ತು ಅವನು/ಅವಳು ಹೇಗೆ ಆ ಭಾವನೆಯನ್ನು ಮುಖದಲ್ಲಿ ವ್ಯಕ್ತಪಡಿಸುತ್ತಿದ್ದಾರೆ ಎಂದು ಮಕ್ಕಳಿಗೆ ಕೇಳುವುದು.
3. ಈಗ ಭಾವನೆಗಳ ಕಾರ್ಡುಗಳನ್ನು ಹೊರಗೆ ತೆಗೆದು, ಮಕ್ಕಳಿಗೆ ಪ್ರತಿಯೊಂದು ಸನ್ನಿವೇಶಕ್ಕೆ ಭಾವನೆಗಳ ಕಾರ್ಡುಗಳನ್ನು ಹೊಂದಿಸಿ ಎಂದು ಹೇಳುವುದು.
4. ಅವರು ನಗು/ದುಃಖ/ಸಿಟ್ಟು/ಭಯದಲ್ಲಿ ಇದ್ದ ಸನ್ನಿವೇಶಗಳ ಕುರಿತು ಯೋಚಿಸಲು ಹೇಳುವುದು ಮತ್ತು ಅದನ್ನು ಒಂದು ಅಥವಾ ಎರಡು ವಾಕ್ಯದಲ್ಲಿ ವಿವರಿಸುವಂತೆ ಕೇಳುವುದು.
5. ಅವರು ಯಾವುದಾದರೂ ಭಾವನೆಯನ್ನು ಅನುಭವಿಸಿದ್ದರ ಕುರಿತು ಮಾತನಾಡಲು ಎಲ್ಲ ಮಕ್ಕಳಿಗೂ ಅವಕಾಶ ಕೊಡಿ. ಮಕ್ಕಳು ಒಂದು ಅಥವಾ ಎರಡು ಪದಗಳನ್ನು ಮಾತ್ರ ಹೇಳಿದರೆ, ವಾಕ್ಯವನ್ನು ಪೂರ್ಣಗೊಳಿಸಲು ಅವರಿಗೆ ಸಹಾಯ ಮಾಡಿ.









# ನಾನು ಮತ್ತು ನನ್ನದು

## ಕಲಿಕಾ ಫಲಿತಗಳು

ಈ ವಿಷಯದ ಅಂತ್ಯದಲ್ಲಿ ಮಕ್ಕಳು ತರಗತಿಗೆ ಬಂದ ಕೂಡಲೇ ತಮ್ಮ ಹೆಸರಿನ ಕಾರ್ಡುಗಳನ್ನು ಗುರುತಿಸಲು ಮತ್ತು ತಮ್ಮ ಸ್ವಂತ ಹಾಜರಾತಿಯನ್ನು ಗುರುತಿಸಲು ಸಮರ್ಥರಾಗುತ್ತಾರೆ.

## ಕಲಿಕಾ ಬೋಧನಾ ಸಾಮಗ್ರಿಗಳು:

1. ಪ್ರತೀ ಮಗುವಿಗೆ ಕಾರ್ಡ್‌ಬೋರ್ಡ್‌ನಲ್ಲಿ ಬರೆದಿರುವ ಹೆಸರಿನ ಕಾರ್ಡು
2. ಬಂದಿದ್ದಾರೆ ಮತ್ತು ಬಂದಿಲ್ಲ (ಪ್ರೆಸೆಂಟ್ ಮತ್ತು ಆಬ್ಸೆಂಟ್) ಎಂದು ಗುರುತು ಮಾಡಿರುವ ಮರಳಿನಿಂದ ತುಂಬಿದ 2 ಬೇರೆ ಬೇರೆ ಬಣ್ಣದ ಟ್ರೇಗಳು
3. ಸ್ಟಾಂಪ್ ಪ್ಯಾಡ್ ಮತ್ತು ಕಾಗದ
4. ಹೆಸರಿನ ಟ್ಯಾಗ್‌ಗಳು

## ಶಿಕ್ಷಕರ ಪೂರ್ವಸಿದ್ಧತೆ

1. ಹೆಸರಿನ ಕಾರ್ಡುಗಳನ್ನು ಸಿದ್ಧ ಮಾಡುವುದು ಮತ್ತು ಹಾಜರಾತಿಯನ್ನು ಗುರುತಿಸುವುದು.
2. ಈ ಕೆಳಗೆ ಸೂಚಿಸಿರುವ ರೀತಿಯಲ್ಲಿ ಹೆಸರಿನ ಕಾರ್ಡುಗಳನ್ನು ಸಿದ್ಧಪಡಿಸಿಕೊಳ್ಳುವುದು.
3. ಕೆಳಗಿನ ಸಾಮಗ್ರಿಗಳನ್ನು ಸಂಗ್ರಹಿಸಿಕೊಳ್ಳುವುದು:
   - ಕಾರ್ಡ್‌ಬೋರ್ಡಿನ ಮೇಲೆ ಬರೆದಿರುವ ಹೆಸರಿನ ಕಾರ್ಡುಗಳು.
   - ಐಸ್‌ಕ್ರೀಮ್ ಕಡ್ಡಿಗಳು ಅಥವಾ ಬೇರೆ ಯಾವುದೇ ಕಡ್ಡಿಗಳು.
   - ಬೇರೆ ಬೇರೆ ಬಣ್ಣದ 2 ಟ್ರೇಗಳು.
   - ಬಂದಿದ್ದಾರೆ ಮತ್ತು ಬಂದಿಲ್ಲ (ಪ್ರೆಸೆಂಟ್ ಮತ್ತು ಆಬ್ಸೆಂಟ್) ಲೇಬಲ್‌ಗಳು.
   - ಮಕ್ಕಳ ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರಗಳು (ಸಾಧ್ಯವಿದ್ದ ಕಡೆಯಲ್ಲಿ)
4. ಹೆಸರಿನ ಕಾರ್ಡುಗಳನ್ನು ಮಾಡುವ ವಿಧಾನ:
   - ಕಾರ್ಡ್‌ಬೋರ್ಡ್‌ನ್ನು ಆಯಾತಾಕಾರದಲ್ಲಿ ಚಿಕ್ಕದಾಗಿ ಕತ್ತರಿಸಿ, ಅದರ ಮೇಲೆ ಮಗುವಿನ ಭಾವಚಿತ್ರ ಅಂಟಿಸುವುದು.
   - ಅದರ ಕೆಳಗೆ ಮಗುವಿನ ಹೆಸರು ಬರೆಯುವುದು. ಭಾವಚಿತ್ರ ಇಲ್ಲದಿದ್ದರೆ, ಹಾಗೆಯೇ ಹೆಸರನ್ನು ದೊಡ್ಡದಾಗಿ ಬರೆಯುವುದು
   - ಕಾರ್ಡಿನ ಹಿಂಭಾಗಕ್ಕೆ ಕಡ್ಡಿಯನ್ನು ಅಂಟಿಸುವುದು.
   - ಎರಡೂ ಬಣ್ಣದ ಟ್ರೇಗಳನ್ನು ಮರಳಿನಿಂದ ತುಂಬಿಸುವುದು ಮತ್ತು ಅದರ ಮೇಲೆ ಒಂದಕ್ಕೆ ಬಂದಿದ್ದಾರೆ, ಇನ್ನೊಂದಕ್ಕೆ ಬಂದಿಲ್ಲ (ಪ್ರೆಸೆಂಟ್ ಮತ್ತು ಆಬ್ಸೆಂಟ್) ಲೇಬಲ್ ಅಂಟಿಸುವುದು.

## ಸೂಚನೆಗಳು

1. ಮೊದಲ ದಿನ ಕಾರ್ಡುಗಳನ್ನು ಮಕ್ಕಳಿಗೆ ಕೊಡುವುದು ಮತ್ತು ಅದನ್ನು ಬಣ್ಣದ ಪೆನ್ಸಿಲ್ಲುಗಳು, ಉಣ್ಣೆ, ದಾರ ಮತ್ತು ಬಿಂದಿಗಳಿಂದ ಅಲಂಕರಿಸಲು ಹೇಳುವುದು. ಅವರ ಚಿತ್ರಗಳನ್ನು/ಹೆಸರುಗಳನ್ನು ಗುರುತಿಸಲು ಹೇಳುವುದು ಮತ್ತು ಅವುಗಳನ್ನು ಬಂದಿಲ್ಲ (ಆಬ್ಸೆಂಟ್) ಟ್ರೇಯಿಂದ ಎತ್ತಿಕೊಂಡು, ಬಂದಿದ್ದಾರೆ (ಪ್ರೆಸೆಂಟ್) ಟ್ರೇಯಲ್ಲಿಡುವಂತೆ ಹೇಳುವುದು.
2. ಮಕ್ಕಳಿಗೆ ಅವರು ತರಗತಿಗೆ ಬಂದೊಡನೆ ಇದನ್ನು ಮಾಡುವುದಕ್ಕೆ ಮೊದಲ ಕೆಲವು ದಿನ ಸಹಾಯ ಮಾಡಿ, ಆಮೇಲೆ ಅವರಿಗೆ ಇದು ಪ್ರತಿ ದಿನ ತಮ್ಮ ಹಾಜರಾತಿಯನ್ನು ಗುರುತಿಸುವುದು ಒಂದು ಅಭ್ಯಾಸವಾಗುತ್ತದೆ.
3. ನೀವು ಶಾಲೆಯನ್ನು ಬಿಡುವುದಕ್ಕಿಂತ ಮೊದಲು ಹಾಜರಾತಿ ಕಡತದಲ್ಲಿ ಎಲ್ಲ ಮಕ್ಕಳ ಹಾಜರಾತಿಯನ್ನು ಬರೆದು, ಎಲ್ಲ ಕಾರ್ಡುಗಳನ್ನು ಬಂದಿಲ್ಲ ಟ್ರೇಯಲ್ಲಿ ಮತ್ತೆ ಇಡುವುದು.

# ಶಿಶುಗೀತೆಯ ಸೂಚನೆಗಳು

## ಕಲಿಕಾ ಫಲಿತಗಳು

ಇಡೀ/ಪೂರ್ಣ ತರಗತಿ ಚಟುವಟಿಕೆ ಈ ಅಧ್ಯಾಯದ ಕೊನೆಯಲ್ಲಿ ಮಕ್ಕಳು 'ನಮ್ಮ ದೇಹದ ಅಂಗಾಂಗಗಳು' ಕವನವನ್ನು ಸರಿಯಾದ ಪದಗಳು, ಉಚ್ಚಾರ ಮತ್ತು ಅಭಿನಯದೊಂದಿಗೆ ಹಾಡಲು ಅಥವಾ ಹೇಳಲು ಸಮರ್ಥರಾಗುತ್ತಾರೆ.

## ಕಲಿಕಾ ಬೋಧನಾ ಸಾಮಗ್ರಿಗಳು

ಚಿಲಿಪಿಲಿ ಪುಸ್ತಕದ 8ನೇ ಪುಟದಲ್ಲಿರುವ 'ನಮ್ಮ ದೇಹದ ಅಂಗಾಂಗಗಳು' ಶಿಶುಗೀತೆ

## ಸೂಚನೆಗಳು

1. ಶಿಶುಗೀತೆಯನ್ನು ಪರಿಚಯಿಸುವುದು ಮತ್ತು ಅದು ಯಾವುದರ ಬಗ್ಗೆ ಇದೆ ಎಂದು ವಿವರಿಸುವುದು.
2. ಶಿಶುಗೀತೆಯನ್ನು ಅಭಿನಯ ಮತ್ತು ಧ್ವನಿಯ ಏರಿಳಿತದೊಂದಿಗೆ ಹೇಳುವುದು.
3. ಮುಖ್ಯಪದಗಳ ಅರ್ಥವನ್ನು ವಿವರಿಸುವುದು ಮತ್ತು ಮಕ್ಕಳಿಗೆ ಅವು ಅರ್ಥವಾಗಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದು. ವಿವರಣೆಯನ್ನು ಹಾವಭಾವದೊಂದಿಗೆ ಹೊಂದಿಸಿ, ಶಿಶುಗೀತೆಯ ಅರ್ಥ ಸ್ಪಷ್ಟವಾಗುವಂತೆ ಮಾಡುವುದು.
4. ಶಿಶುಗೀತೆಯನ್ನು ಒಂದು ಸಾಲಿನ ನಂತರ ಇನ್ನೊಂದರಂತೆ ಅಭಿನಯದೊಂದಿಗೆ ಹೇಳುತ್ತ, ಮಕ್ಕಳಿಗೆ ನಿಮ್ಮನ್ನು ಅನುಕರಿಸಲು ಹೇಳುವುದು.
5. ಉಚ್ಚಾರ, ಸ್ಪಷ್ಟತೆ ಮತ್ತು ಅಭಿನಯದ ಮೇಲೆ ಗಮನ ಕೇಂದ್ರೀಕರಿಸುವುದು.
6. 3–4 ಮಕ್ಕಳ ಚಿಕ್ಕ ಗುಂಪುಗಳಾಗಿ ಮಾಡಿ, ಶಿಶುಗೀತೆಯನ್ನು ಹೇಳಿಸುವುದು. ಸಾಲುಗಳನ್ನು ನೆನಪಿಸಿಕೊಂಡು ಹೇಳಲು ಕಷ್ಟಪಡುವ, ಉಚ್ಚಾರ ತಪ್ಪು ಅಥವಾ ಪದಗಳೊಂದಿಗೆ ಅಭಿನಯವನ್ನು ಹೊಂದಿಸಲು ಆಗದ ಮಕ್ಕಳನ್ನು ಗುರುತಿಸಿ, ಅವರಿಗೆ ಇನ್ನಷ್ಟು ಅಭ್ಯಾಸ ಮಾಡಿಸುವುದು.

# ನಮ್ಮ ದೇಹದ ಅಂಗಾಂಗಗಳು

ತೋರ ಬೆರಳು ಹೆಬ್ಬೆರಳು ಕುಣಿಯುತ್ತಿದೆ
ತಕದಿಮ್ಮಿ ತಂದಾನ ತಯ್ಯಾ

ತೋರ ಬೆರಳು, ಹೆಬ್ಬೆರಳು ಬಲಗೈ,
ಕುಣಿಯುತ್ತಿದೆ
ತಕದಿಮ್ಮಿ ತಂದಾನ ತಯ್ಯಾ

ತೋರ ಬೆರಳು, ಹೆಬ್ಬೆರಳು ಬಲಗೈ,
ಎಡಗೈ ಕುಣಿಯುತ್ತಿದೆ
ತಕದಿಮ್ಮಿ ತಂದಾನ ತಯ್ಯಾ

ತೋರ ಬೆರಳು, ಹೆಬ್ಬೆರಳು ಬಲಗೈ,
ಎಡಗೈ, ಬಲಗಾಲು ಕುಣಿಯುತ್ತಿದೆ
ತಕದಿಮ್ಮಿ ತಂದಾನ ತಯ್ಯಾ



ತೋರ ಬೆರಳು, ಹೆಬ್ಬೆರಳು ಬಲಗೈ,
ಎಡಗೈ, ಬಲಗಾಲು, ಎಡಗಾಲು ಕುಣಿಯುತ್ತಿದೆ
ತಕದಿಮ್ಮಿ ತಂದಾನ ತಯ್ಯಾ

ತೋರ ಬೆರಳು, ಹೆಬ್ಬೆರಳು ಬಲಗೈ,
ಎಡಗೈ, ಬಲಗಾಲು, ಎಡಗಾಲು ತಲೆಯು ಕುಣಿಯುತ್ತಿದೆ
ತಕದಿಮ್ಮಿ ತಂದಾನ ತಯ್ಯಾ

ತೋರ ಬೆರಳು, ಹೆಬ್ಬೆರಳು ಬಲಗೈ,
ಎಡಗೈ, ಬಲಗಾಲು, ಎಡಗಾಲು ತಲೆಯು, ಹೊಟ್ಟೆಯು ಕುಣಿಯುತ್ತಿದೆ
ತಕದಿಮ್ಮಿ ತಂದಾನ ತಯ್ಯಾ

ಶಿಶುಗೀತೆ 2

# Sita

## Sita

Sung by child : I am __Name__, I am __Name__.
Look at me, look at me.

Sung by teacher/ Action by Child : Look at __Child's Name__ Standing.

Sung by child : Look at me, look at me.

*Note:*
*Teacher alternates between standing, sitting, walking, stopping and running.*



## ಗೋಡೆ ಮೇಲಿನ ಹುಡುಗಿ



### ಕಲಿಕಾ ಫಲಿತಗಳು

ಈ ವಿಷಯದ ಕೊನೆಯಲ್ಲಿ ಮಕ್ಕಳು **'ಗೋಡೆ ಮೇಲಿನ ಹುಡುಗಿ'** ಕಥೆಯನ್ನು ಅರ್ಥ ಮಾಡಿಕೊಳ್ಳಲು ಸಮರ್ಥರಾಗುತ್ತಾರೆ ಮತ್ತು 'ಯಾಕೆ, ಏನು, ಹೇಗೆ ಮತ್ತು ಯಾವಾಗ' ಎಂಬ ನೆನಪಿಸಿಕೊಂಡು ಹೇಳುವ ಹಾಗೂ ತೀರ್ಮಾನ ಮಾಡಬೇಕಿರುವಂತಹ ಸರಳವಾದ ಪ್ರಶ್ನೆಗಳಿಗೆ ಉತ್ತರ ಹೇಳುತ್ತಾರೆ.

### ಕಲಿಕಾ ಬೋಧನಾ ಸಾಮಗ್ರಿಗಳು

- ಕಥೆಯನ್ನು ಚಿತ್ರಿಸುವ ಕಥೆಯ ಕಾರ್ಡುಗಳು
- ಪುಟ್ಟ ಹುಡುಗಿಯ ಸೂತ್ರದ ಬೊಂಬೆ ಕಥೆ



ಗೋಡೆ ಮೇಲಿನ ಹುಡುಗಿ
The Girl on the Wall

### ಕಥೆ

**ಗೋಡೆ ಮೇಲಿನ ಹುಡುಗಿ**

ಸೀತಾಳ ತಂದೆ ಅವರ ಮನೆಯ ಹೊರಗಡೆ ಒಂದು ದೊಡ್ಡ ಗೋಡೆ ಕಟ್ಟಿದ್ದರು. ಸೀತಾ ಆ ಗೋಡೆಯನ್ನು ತನಗೆ ಹತ್ತಲು ಆಗುತ್ತಾ ನೋಡಬೇಕು ಅಂತ ಅದನ್ನು ನೋಡೋದಕ್ಕೆ ಹೋದಳು.

ಹೊರಗೆ ಬಹಳ ಚೆನ್ನಾಗಿತ್ತು. ತುಂಬ ಬೆಳಕಿತ್ತು. ಗೋಡೆ ಎತ್ತರಕ್ಕಿತ್ತು, ಸುಣ್ಣ ಹಚ್ಚಿದ್ದರಿಂದ ಬೆಳ್ಳಗೆ ಇತ್ತು. ಜೊತೆಗೆ ಅದು ಸೀತಾಳಿಗಿಂತ ತುಂಬಾನೆ ದೊಡ್ಡದಿತ್ತು. ಅವಳು ಅಲ್ಲಿ ನಿಂತು, ಗೋಡೆಯನ್ನೇ ದಿಟ್ಟಿಸಿ ನೋಡಿದಳು. ಅಲ್ಲಿ ಮೇಲುಗಡೆ ಏನೋ ಇದ್ದಂತೆ ಕಾಣಿಸಿತು. ಅಲ್ಲೊಂದು ದೊಡ್ಡ ಕಪ್ಪು ಕಲೆ ಇರುವಂತೆ ಕಾಣಿಸಿತು. ಅರೆ... ಅದು ಒಂದು ಚಿಕ್ಕ ಹುಡುಗಿಯ ಹಾಗೆ ಕಾಣಿಸಿತು. ಅದಕ್ಕೆ ಕೈಗಳು, ಕಾಲುಗಳು ಮತ್ತು ಎತ್ತಿಕಟ್ಟಿದ ಕೂದಲು ಎಲ್ಲ ಇತ್ತು, ಸೀತಾಳ ಹಾಗೆಯೇ! ಆ ಹುಡುಗಿಯ ತಲೆ ಸೀತಾಳ ತಲೆಯ ಹಾಗೆಯೇ ಕಂಡರೂ, ಅವಳಿಗೆ ಮುಖ ಇರಲಿಲ್ಲ.

ಈ ಚಿಕ್ಕ ಹುಡುಗಿಯ ಹತ್ತಿರ ಗೆಳೆತನ ಮಾಡಬೇಕೆ ಬೇಡವೇ ಎಂದು ಸೀತಾಳಿಗೆ ಗೊತ್ತಾಗಲಿಲ್ಲ, ಹೀಗಾಗಿ ಅವಳು ಮನೆಯೊಳಗೆ ವಾಪಸು ಹೊರಟಳು. ಆದರೆ ಎಂತಹ ವಿಚಿತ್ರ! ಆಮೇಲೆ ಗೊಡೆಯ ಮೇಲಿದ್ದ ಹುಡುಗಿ ದೊಡ್ಡದಾಗಿ ಬೆಳೆದಳು. ಸೀತಾ ಗೋಡೆಯ ಮೇಲೆ ಇರೋ ವಿಚಿತ್ರ ಹುಡುಗಿ ಬಗ್ಗೆ ತನ್ನಮ್ಮನಿಗೆ ಹೇಳಬೇಕು ಎಂದುಕೊಂಡಳು. ಹೀಗಾಗಿ ಅವಳು ಮನೆ ಕಡೆ ತಿರುಗಿ ನಡೆಯತೊಡಗಿದಳು. ಐದಾರು ಹೆಜ್ಜೆ ನಡೆದವಳು, ಆ ಹುಡುಗಿ ಗೋಡೆಯ ಮೇಲೆ ಇದ್ದಾಳಾ ಎಂದು ನೋಡಲು ಮತ್ತೆ ಹಿಂದೆ ತಿರುಗಿ ನೋಡಿದಳು. ಅರೆ... ಏನು ಅಚ್ಚರಿ!! ಆ ಹುಡುಗಿ ಗೋಡೆಯಿಂದ ಇಳಿದು, ಇವಳಂತೆಯೇ ಹೂದೋಟದ ಕಡೆ ನೆಲದ ಮೇಲೆ ತೆವಳಿಕೊಂಡು ಹೊರಟಿದ್ದಳು.

ಸೀತಾ ಈ ಕಡೆ ತಿರುಗಿ, ಓಡಿದಳು. ಮತ್ತೆ ತಿರುಗಿ ನೋಡಿದರೆ, ಆ ಹುಡುಗಿ ಇನ್ನೂ ದೊಡ್ಡದಾಗಿ ಬೆಳೆದಿದ್ದಳು ಮತ್ತು ಸೀತಾಳ ಹತ್ತಿರವೇ ಬಂದಿದ್ದಳು. ಇನ್ನೇನು ತನ್ನನ್ನು ಮುಟ್ಟುತ್ತಾಳೆ ಎನ್ನುವಷ್ಟು ಹತ್ತಿರದಲ್ಲಿ ಇದ್ದಳು. ಇವಳಿಗೆ ಟಾಟಾ ಹೇಳಿದರೆ ಅವಳು ಹೊರಟು ಹೋಗಬಹುದು ಎಂದುಕೊಂಡ ಸೀತಾ ಅವಳಿಗೆ ಕೈ ಬೀಸಿದಳು. ನೆಲದ ಮೇಲಿದ್ದ ಆ ಹುಡುಗಿಯೂ ವಾಪಸು ಕೈ ಬೀಸಿದಳು, ಆದರೆ ಅವಳು ದೂರ ಹೋಗಲಿಲ್ಲ. ಸೀತಾ ಎಡಕ್ಕೆ ತಿರುಗಿದರೆ, ಆ ಹುಡುಗಿಯೂ ಎಡಕ್ಕೆ ತಿರುಗಿದಳು. ಸೀತಾ ಬಲಕ್ಕೆ ತಿರುಗಿದರೆ, ಅವಳೂ ಬಲಕ್ಕೆ ತಿರುಗಿದಳು.

ಸೀತಾ ಮನೆಯ ಬಳಿ ಓಡಿ ಬಂದಳು. ಮನೆಯೊಳಗೆ ಹೋಗುವ ಮೊದಲು ತಿರುಗಿ ನೋಡಿದಳು. ಆ ವಿಚಿತ್ರ ಹುಡುಗಿ ಕಾಣಿಸಲಿಲ್ಲ. ಗೋಡೆಯ ಮೇಲಿದ್ದ ಹೊಸ ಹುಡುಗಿಯ ಬಗ್ಗೆ ಸೀತಾ ತನ್ನಮ್ಮನಿಗೆ ಹೇಳಿದಳು. ಅವಳಮ್ಮ ಜೋರಾಗಿ ನಕ್ಕರು. 'ಅವಳು ನಿನ್ನ ಹೊಸ ಗೆಳತಿ. ಅವಳು ನಿನ್ನ ನೆರಳು. ಹೊರಗೆ ಸೂರ್ಯನ ಬೆಳಕು ತುಂಬ ಇದ್ದಾಗ, ಅವಳು ನಿನ್ನ ಜೊತೆಗೆ ಇರುತ್ತಾಳೆ.' ಎಂದು ಅಮ್ಮ ಹೇಳಿದರು.

'ಆದರೆ ನಾನು ಅವಳನ್ನು ಸರಿಯಾಗಿ ನೋಡಲಿಕ್ಕೆ ಆಗಲ್ಲವಲ್ಲ... ಅವಳು ಹ್ಯಾಗೆ ಕಾಣಿಸುತ್ತಾಳೆ?' ಎಂದು ಸೀತಾ ಹೇಳಿದಳು. 'ಹೋಗಿ ಕನ್ನಡಿಯಲ್ಲಿ ನೋಡಿಕೋ. ನಿಂಗೇ ಗೊತ್ತಾಗುತ್ತೆ, ಅವಳು ಹ್ಯಾಗೆ ಕಾಣಿಸುತ್ತಾಳೆ ಅಂತ' ಎಂದು ಅಮ್ಮ ಮತ್ತೆ ಜೋರಾಗಿ ನಕ್ಕರು.

## ಗೋಡೆ ಮೇಲಿನ ಹುಡುಗಿ



### ಶಿಕ್ಷಕರ ಪೂರ್ವಸಿದ್ಧತೆ

ಎಲ್ಲ ಕಲಿಕಾ ಸಾಮಗ್ರಿಗಳನ್ನು ಸಿದ್ಧವಾಗಿಟ್ಟುಕೊಳ್ಳುವುದು.

### ಸೂಚನೆಗಳು

**ಹಂತ 1:** ಕಥೆಯ ಪರಿಚಯ: ಮಕ್ಕಳೊಂದಿಗೆ ವಿಷಯದ ಕುರಿತು ಚರ್ಚೆ, ಅದನ್ನು ಅವರ ಬದುಕಿನ ಅನುಭವಗಳಿಗೆ ಸಂಬಂಧಿಸುತ್ತ ಮತ್ತು ಕಥೆಯ ಮುಖ ಪುಟವನ್ನು ತೋರಿಸಿ, ಕಥೆಯು ಯಾವುದರ ಬಗ್ಗೆ ಇರಬಹುದು ಎಂದು ಸ್ವಲ್ಪ ಚರ್ಚೆ ಮಾಡುವುದು.

**ಹಂತ 2:** ಕಥೆಯನ್ನು ನಿಮ್ಮದೇ ಪದಗಳಲ್ಲಿ ಧ್ವನಿಯ ಏರಿಳಿತ ಹಾಗೂ ಹಾವಭಾವ, ಮುಖಭಾವದೊಂದಿಗೆ ಹೇಳುವುದು.

**ಹಂತ 3:** ಕಥೆಯನ್ನು ಮತ್ತೊಮ್ಮೆ ಓದುತ್ತ, ಮುಖ್ಯ ಪಾತ್ರಗಳನ್ನು ಹಾಗೂ ಘಟನೆಗಳನ್ನು, ಮುಖ್ಯವಾದ ಪದಗಳನ್ನು ವಿವರಿಸುತ್ತ, ಮರು ಪ್ರಶ್ನೆಗಳನ್ನು ಕೇಳುವುದು, ಅಂದರೆ ಮಕ್ಕಳು ಕಥೆಯನ್ನು ಅರ್ಥಮಾಡಿಕೊಂಡಿದ್ದಾರೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದು. ಇಲ್ಲಿ ಮಾರುತ್ತರ ಪಡೆಯುವ ಕೆಲವು ಉದಾಹರಣೆ ಪ್ರಶ್ನೆಗಳಿವೆ:

- ಸೀತಾ ಗೋಡೆಯನ್ನು ನೋಡಲು ಮತ್ತು ಅದನ್ನು ತನಗೆ ಹತ್ತಲು ಆಗುತ್ತಾ ಎಂದು ನೋಡಲು ಹೋದಳು. *ಸೀತಾ ಏನು ನೋಡಲು ಹೋದಳು?*
- ಆದರೆ ಅಲ್ಲಿ ನಿಂತು, ಅವಳು ಮೇಲೆ ನೋಡಿದಾಗ, ಅಲ್ಲಿ ಏನೋ ಇತ್ತು. ಅದೊಂದು ದೊಡ್ಡ ಕಪ್ಪು ಚಿತ್ರ. *ಸೀತಾ ಗೋಡೆಯ ಮೇಲೆ ಏನು ನೋಡಿದಳು?*
- ಈ ಹೊಸ ಹುಡುಗಿಯೊಂದಿಗೆ ಗೆಳೆತನ ಮಾಡಬೇಕೇ, ಬೇಡವೇ ಎಂದು ಅವಳಿಗೆ ಗೊತ್ತಾಗಲಿಲ್ಲ. ಹೀಗಾಗಿ ಅವಳು ಮನೆ ಕಡೆ ತಿರುಗಿ ನಡೆಯತೊಡಗಿದಳು. ಅರೆ... ಏನು ಅಚ್ಚರಿ!! ಗೋಡೆಯ ಮೇಲೆ ಇದ್ದ ಹುಡುಗಿ ಇನ್ನಷ್ಟು ದೊಡ್ಡದಾಗಿದ್ದಳು. *ಸೀತಾ ಹಿಂತಿರುಗಿ ನೋಡಿದಾಗ, ಗೋಡೆಯ ಮೇಲಿದ್ದ ಪುಟ್ಟ ಹುಡುಗಿ ಏನಾಗಿದ್ದಳು?*

**ಹಂತ 4:** ಕಥೆಯ ಕೊನೆಯಲ್ಲಿ, ಗ್ರಹಣಶಕ್ತಿ ಮತ್ತು ಸ್ಮರಣಶಕ್ತಿಯನ್ನು ಪರೀಕ್ಷಿಸಲು ಕೆಲವು ಸರಳವಾದ ಪ್ರಶ್ನೆಗಳನ್ನು ಕೇಳುವುದು. ಸ್ಮರಣಶಕ್ತಿ ಪರೀಕ್ಷಿಸಲು ಕೆಲವು ಉದಾಹರಣೆ ಪ್ರಶ್ನೆಗಳು:

- ಗೋಡೆ ಹೇಗೆ ಕಾಣುತ್ತಿತ್ತು?
- ಸೀತಾಳಿಗೆ ಗೋಡೆ ಮೇಲೆ ಏನು ಕಾಣಿಸಿತು?
- ಸೀತಾ ಹಿಂತಿರುಗಿ ನೋಡಿದಾಗ, ಗೋಡೆಯ ಮೇಲೆ ಇದ್ದ ಪುಟ್ಟ ಹುಡುಗಿ ಏನಾಗಿದ್ದಳು?
- ಸೀತಾ ಮನೆಯ ಕಡೆ ಓಡತೊಡಗಿದಾಗ, ಗೋಡೆಯ ಮೇಲಿದ್ದ ಹುಡುಗಿ ಏನು ಮಾಡಿದಳು?
- ಗೋಡೆಯ ಮೇಲೆ ಇದ್ದ ಹುಡುಗಿಗೆ ಸೀತಾಳ ಅಮ್ಮ ಏನೆಂದು ಕರೆದರು?

**ಹಂತ 5:** ಕಥೆಯ ಪಾತ್ರಗಳೊಂದಿಗೆ ಮಕ್ಕಳಿಗೆ ಅನುಭೂತಿಯನ್ನು ಹೊಂದಲು ಸಾಧ್ಯವಾಗುವ ಕೆಲವು ಸರಳ ಪ್ರಶ್ನೆಗಳನ್ನು ಕೇಳಿ.

- ಗೋಡೆಯ ಮೇಲೆ ಇದ್ದ ಚಿತ್ರವನ್ನು ನೋಡಿದಾಗ, ಸೀತಾಳಿಗೆ ಏನು ಅನ್ನಿಸಿತು ಎಂದು ನೀವು ಯೋಚಿಸುತ್ತೀರಿ?
- ಕನ್ನಡಿಯನ್ನು ನೋಡಿಕೊಂಡಾಗ ಅವಳಿಗೆ ಏನು ಅನ್ನಿಸಿತು ಎಂದು ನೀವು ಯೋಚಿಸುತ್ತೀರಿ?

**ಹಂತ 6:** ಮಕ್ಕಳಿಗೆ ತೀರ್ಮಾನ ಮಾಡುವುದು ಅಗತ್ಯವಿರುವ ಅಥವಾ 'ಹಾಗಾದರೆ, ಹೀಗಾದರೆ' ರೀತಿಯ ಪ್ರಶ್ನೆ ಕೇಳುವುದನ್ನು ಮುಂದುವರೆಸಿ.

- ಗೋಡೆಯ ಮೇಲೆ ಇದ್ದ ಪುಟ್ಟ ಹುಡುಗಿ ಹೇಗೆ ಕಾಣುತ್ತಿದ್ದಳು ಎಂದು ನೀವು ಯೋಚಿಸುತ್ತೀರಿ?
- ಸೀತಾ ಮನೆಯೊಳಗೆ ಬಂದ ಕೂಡಲೆ ಆ ಪುಟ್ಟ ಹುಡುಗಿ ಏಕೆ ಕಾಣೆಯಾದಳು?

**ಹಂತ 7:** ಮಕ್ಕಳು ತಮ್ಮದೇ ನಾಲ್ಕಾರು ವಾಕ್ಯಗಳಲ್ಲಿ ಈ ಕಥೆಯನ್ನು ಹೇಳಲು ಬೆಂಬಲ ನೀಡುವುದು.

**ಚಟುವಟಿಕೆ 1**

## ನಿಮ್ಮ ಚಿತ್ರ ನೀವೇ ಬಿಡಿಸಿ

### ಕಲಿಕಾ ಬೋಧನಾ ಸಾಮಗ್ರಿಗಳು

ಹಾಳೆ ಮತ್ತು ಬಣ್ಣದ ಪೆನ್ಸಿಲ್ಲುಗಳು

### ಸೂಚನೆಗಳು

1. ಮಕ್ಕಳಿಗೆ ಅವರನ್ನು ಕನ್ನಡಿಯಲ್ಲಿ ನೋಡಿಕೊಳ್ಳಲು ಹೇಳಿ – ಕೂದಲು ಎಷ್ಟುದ್ದ ಇದೆ ಎನ್ನುವುದೂ ಸೇರಿದಂತೆ ಸರಿಯಾಗಿ ನೋಡಿಕೊಳ್ಳಲು ಹೇಳಿ.
2. ಅವರಿಗೆ ಅವರದೇ ಸ್ವಂತ ಚಿತ್ರವನ್ನು ಬಿಡಿಸಲು ಹೇಳಿ.
3. ಕೂದಲಿನ ಉದ್ದ, ಬಟ್ಟೆಗಳು ಇತ್ಯಾದಿ ವಿಶೇಷ ಲಕ್ಷಣಗಳು ಸೇರಿದಂತೆ ಅವರ ಚಿತ್ರದ ಕುರಿತು ಚರ್ಚೆ ಮಾಡಿ.
4. ದಿನಾಂಕ ಮತ್ತು ಅವರ ಹೆಸರನ್ನು ಬರೆದು, ಗೋಡೆಯ ಮೇಲೆ ಚಿತ್ರವನ್ನು ತೂಗುಹಾಕಿ ಅಥವಾ ಪಿನ್ ಮಾಡಿ.
5. ಪ್ರತಿಯೊಂದೂ ಮಗುವಿಗೆ ಒಂದು ಫೋಲ್ಡರ್ ಇಡಿ, ಅದರಲ್ಲಿ ಮಗು ಮಾಡಿರುವ ಎಲ್ಲ ಚಟುವಟಿಕೆಗಳ ಹಾಳೆಗಳನ್ನು ಹಾಕಿಡಿ. (ಫೋಲ್ಡರ್ ಲಭ್ಯವಿಲ್ಲದಿದ್ದರೆ, ಕಾಗದದ ಕವರಿನಲ್ಲಿ ಹಾಕಿಡಿ)

---

**ಚಟುವಟಿಕೆ 2**

## ನಿಮ್ಮ ಗೆಳೆಯರ ಚಿತ್ರ ಬಿಡಿಸಿ

### ಕಲಿಕಾ ಬೋಧನಾ ಸಾಮಗ್ರಿಗಳು

ಹಾಳೆ ಮತ್ತು ಬಣ್ಣದ ಪೆನ್ಸಿಲ್ಲುಗಳು

### ಸೂಚನೆಗಳು

1. ಮಕ್ಕಳಿಗೆ ಅವರ ಗೆಳೆಯ/ತಿಯರನ್ನು ಸರಿಯಾಗಿ ನೋಡಲು ಹೇಳಿ – ಕೂದಲು ಎಷ್ಟುದ್ದ ಇದೆ ಎನ್ನುವುದೂ ಸೇರಿದಂತೆ ಸರಿಯಾಗಿ ನೋಡಿಕೊಳ್ಳಲು ಹೇಳಿ.
2. ಈಗ ಗೆಳೆಯ/ತಿಯ ಚಿತ್ರವನ್ನು ಬಿಡಿಸಲು ಹೇಳಿ.
3. ಗೆಳೆಯ/ತಿಯ ಯಾವೆಲ್ಲ ವಿಶೇಷ ಲಕ್ಷಣಗಳು ಚಿತ್ರದಲ್ಲಿ ಇವೆ, ಏನು ಚೆನ್ನಾಗಿದೆ ಎಂದು ಅವರ ಚಿತ್ರದ ಕುರಿತು ಚಿತ್ರದ ಕುರಿತು ಚರ್ಚೆ ಮಾಡಿ.
4. ಆ ಗೆಳೆಯ/ತಿಯ ಹೆಸರನ್ನು ಹಾಕಿ, ಚಿತ್ರವನ್ನು ನೇತುಹಾಕಿ.
5. ಎರಡೂ ಚಿತ್ರಗಳನ್ನು ತೋರಿಸಿ, ಅವರೇ ಬಿಡಿಸಿದ ಅವರ ಸ್ವಂತ ಚಿತ್ರ ಮತ್ತು ಗೆಳೆಯರ ಚಿತ್ರ – ಎರಡರಲ್ಲಿಯೂ ಏನು ವ್ಯತ್ಯಾಸವಿದೆ, ಏನು ಹೋಲಿಕೆಯಿದೆ ತೋರಿಸಿ.
6. ಒಂದು ಮಗುವಿನ ಎರಡು ಚಿತ್ರ, ಅಂದರೆ ಒಂದು ಮಗುವಿನ ಚಿತ್ರವನ್ನು ಇಬ್ಬರು ಗೆಳೆಯರು ಬಿಡಿಸಿರುವುದು, ಇನ್ನೊಂದು ಅವರೇ ಬಿಡಿಸಿದ್ದು, ಇವನ್ನು ಒಟ್ಟಿಗೇ ಪಿನ್ ಮಾಡಿ. (ಜಾನಿಯ ಚಿತ್ರವನ್ನು ಗೋಪಾಲ ಬಿಡಿಸಿದ್ದು, ಜಾನಿಯ ಚಿತ್ರವನ್ನು ಕಮಲ ಬಿಡಿಸಿದ್ದು, ಜಾನಿಯ ಚಿತ್ರವನ್ನು ಜಾನಿಯೇ ಬಿಡಿಸಿದ್ದು, ಹೀಗೆ)

ಚಟುವಟಿಕೆ 1

## ಹುಡುಗರು ಮತ್ತು ಹುಡುಗಿಯರು

### ಕಲಿಕಾ ಬೋಧನಾ ಸಾಮಗ್ರಿಗಳು

ಏನೂ ಇಲ್ಲ

### ಸೂಚನೆಗಳು

1. ಮಕ್ಕಳನ್ನು ನಾಲ್ಕು ಗುಂಪುಗಳಾಗಿ ಮಾಡಿ, 2 ಹುಡುಗಿಯರ ಗುಂಪು ಮತ್ತು 2 ಹುಡುಗರ ಗುಂಪು ಇರಲಿ.
2. ಪ್ರತಿಯೊಂದು ಗುಂಪು ತರಗತಿ ಕೋಣೆಯ ಒಂದು ಮೂಲೆಯಲ್ಲಿ ನಿಂತು ಕೊಂಡಿರುವುದು.

**ಹಂತ 1: ಹುಡುಗ – ಹುಡುಗಿ**

- ಈ ರೀತಿಯಾಗಿ ಸೂಚನೆ ನೀಡಿ: "ನಾನು ಹುಡುಗಿ ಎಂದು ಹೇಳಿದಾಗ, ಎಲ್ಲ ಹುಡುಗಿಯರು 'ಹೌದು' ಎಂದು ಹೇಳಿ ಚಪ್ಪಾಳೆ ಹೊಡೆಯಬೇಕು. ನಾನು ಹುಡುಗ ಎಂದು ಹೇಳಿದಾಗ ಎಲ್ಲ ಹುಡುಗರೂ 'ಹೌದು' ಎಂದು ಹೇಳಿ ಚಪ್ಪಾಳೆ ಹೊಡೆಯಬೇಕು."
- ಹುಡುಗ ಮತ್ತು ಹುಡುಗಿ ಎಂದು ಬೇರೆ ಬೇರೆ ಕ್ರಮದಲ್ಲಿ ಕರೆಯುತ್ತ, ಎರಡೂ ಗುಂಪುಗಳ ಪ್ರತಿಕ್ರಿಯೆಯನ್ನು ಪ್ರೋತ್ಸಾಹಿಸುವುದು.
- ಇದನ್ನು 3–5 ಸಲ ಪುನರಾವರ್ತನೆ ಮಾಡುವುದು.

**ಹಂತ 2: ಅಭಿನಯ/ಚಟುವಟಿಕೆ ಮಾಡುವುದು**

- ಮೇಲಿನ ಚಟುವಟಿಕೆಯನ್ನು ಮುಂದುವರೆಸುತ್ತ, ಹೀಗೆ ಸೂಚನೆ ನೀಡುವುದು – 'ನಾನು ಹುಡುಗಿ ಎಂದು ಹೇಳಿದಾಗ, ಎಲ್ಲ ಹುಡುಗಿಯರೂ ನಿಂತಲ್ಲಿಯೇ ಒಮ್ಮೆ ಜಿಗಿಯಬೇಕು. ನಾನು ಹುಡುಗ ಎಂದು ಹೇಳಿದಾಗ ಎಲ್ಲ ಹುಡುಗರೂ ನಿಂತಲ್ಲಿಯೇ ಒಮ್ಮೆ ಜಿಗಿಯಬೇಕು'. ಹುಡುಗ, ಹುಡುಗಿ ಎಂದು ಕರೆಯುತ್ತ ಜಿಗಿಯಲು ಹೇಳುವುದು.
- ಹೀಗೆಯೇ ಈ ಕೆಳಗಿನಂತೆ ಮಾಡಲು ತಿಳಿಸುವುದು.
- ನಿಮ್ಮ ಸೊಂಟವನ್ನು ಕುಣಿಸಬೇಕು.
- ಮುಂದೆ ಬಾಗಿ ನೆಲವನ್ನು ಮುಟ್ಟಬೇಕು.
- ಕೈಯೆತ್ತಿ ಗಾಳಿಯಲ್ಲಿ ಆಡಿಸಬೇಕು.
- ಹುರ್ರೇ ಎನ್ನಬೇಕು.

ಚಟುವಟಿಕೆ 2

# ಜೋಡಿಯಾಗಿ ನಡೆ ಮತ್ತು ನಿಲ್ಲು (ವಾಕ್ ಮತ್ತು ಫ್ರೀಜ್)

## ಕಲಿಕಾ ಬೋಧನಾ ಸಾಮಗ್ರಿಗಳು

ಸಂಗೀತ ಮತ್ತು ಮ್ಯೂಸಿಕ್ ಸಿಸ್ಟಮ್

## ಸೂಚನೆಗಳು

### ಹಂತ 1

1. ಮಕ್ಕಳಿಗೆ ಅವರ ಜೊತೆಗಾರರನ್ನು ಕಂಡುಕೊಳ್ಳುವಂತೆ ಮಾರ್ಗದರ್ಶನ ಮಾಡುವುದು, ಒಬ್ಬ ಹುಡುಗ ಮತ್ತು ಹುಡುಗಿ ಜೋಡಿಯಾಗುವಂತೆ ಮಾಡುವುದು.
2. ಮಕ್ಕಳಿಗೆ ಕೈ ಹಿಡಿದುಕೊಂಡು, 'ನಡೆ ಮತ್ತು ನಿಲ್ಲು (ವಾಕ್ & ಫ್ರೀಜ್)' ಮಾಡಲು ಕೆಳಗಿನಂತೆ ಸೂಚನೆಗಳನ್ನು ನೀಡುವುದು.
3. ತರಗತಿಕೋಣೆಯಲ್ಲಿ ಎಲ್ಲೆಂದರಲ್ಲಿ ಈ ಜೋಡಿಗಳನ್ನು ನಿಲ್ಲಿಸುವುದು. ಸಂಗೀತವನ್ನು ಹಾಕುವುದು. ಜೊತೆಗಾರರು ತರಗತಿ ಕೋಣೆಯ ಲಭ್ಯವಿರುವ ಜಾಗದಲ್ಲಿಯೇ ಬೇರೆಬೇರೆ ರೀತಿಯಲ್ಲಿ ನಡೆದಾಡುತ್ತಿರಲಿ. ಸಂಗೀತ ನಿಂತೊಡನೆ ಮಕ್ಕಳು ಅವರು ಇರುವ ಜಾಗದಲ್ಲಿಯೇ ಅಲ್ಲಾಡದೇ ನಿಲ್ಲಬೇಕು. ಇದು ಒಂದು ಸಾರಿ ಅಂದರೆ ಒಂದು ಸೈಕಲ್. ಹೀಗೆ ಪ್ರತೀ ಸಾರಿ (ಪ್ರತೀ ಸೈಕಲ್) ಮಾಡುವುದನ್ನು 'ನಡೆ ಮತ್ತು ನಿಲ್ಲು (ವಾಕ್ & ಫ್ರೀಜ್)' ಎನ್ನಲಾಗುತ್ತದೆ. ಇದನ್ನು ಹಲವು ಸಲ ಪುನರಾವರ್ತನೆ ಮಾಡಬೇಕು.

### ಹಂತ 2

**ಮಕ್ಕಳಿಗೆ ಈ ಕೆಳಗಿನ ಸೂಚನೆಗಳನ್ನು ನೀಡುವುದು.**

1. ಸಂಗೀತವು ಶುರು ಇದ್ದಾಗ ಅವರು ಕೋಣೆಯ ಒಳಗೆ ನಡೆದಾಡುತ್ತಿರಬೇಕು.
2. ವೃತ್ತಾಕಾರದಲ್ಲಿ ನಡೆದಾಡಬೇಡಿ, ಕೋಣೆಯ ಎಲ್ಲ ಜಾಗದಲ್ಲಿಯೂ ಆರಾಮಾಗಿ ನಿಮಗೆ ಬೇಕಿರುವಂತೆ ನಡೆದಾಡಿ, ಆದರೆ ಪರಸ್ಪರ ಮುಟ್ಟುವುದು, ಹಿಡಿದುಕೊಳ್ಳುವುದು, ದಬ್ಬುವುದು ಮಾಡಬೇಡಿ, ಯಾರಿಗೂ ನೋವು ಮಾಡಬೇಡಿ.
3. ಸಂಗೀತವು ಶುರುವಾದಾಗ ನಡೆದಾಡಿ ಮತ್ತು ಸಂಗೀತವು ನಿಂತಾಗ ಕಲ್ಲಿನಂತೆ ಎಲ್ಲಿದ್ದಾರೆಯೋ ಅಲ್ಲಿಯೇ ನಿಲ್ಲಬೇಕು. ನಿಮ್ಮ ಗೆಳೆಯರ ಅಥವಾ ಶಿಕ್ಷಕರ ಹತ್ತಿರ ಹೋಗಬೇಡಿ, ನೀವು ಎಲ್ಲಿದ್ದೀರೋ ಅಲ್ಲಿಯೇ ನಿಂತುಕೊಳ್ಳಿ.

### ಹಂತ 3

'ನಡೆ ಮತ್ತು ನಿಲ್ಲು (ವಾಕ್ & ಫ್ರೀಜ್)' ಇದನ್ನು ಮೂರು ಸಲ ಪುನರಾವರ್ತನೆ ಮಾಡಿದ ನಂತರ, ಶಿಕ್ಷಕರು ಈ ನಿರ್ದಿಷ್ಟ ಸೂಚನೆಯನ್ನು ಅವರು ಜೊತೆಗಾರರೊಂದಿಗೆ ಕಲ್ಲಿನಂತೆ ನಿಂತಾಗ ಹೀಗೆ ಮಾಡಬೇಕು ಎಂದು ಹೇಳಿ:

1. ನೀವು ಜೊತೆಗಾರರೊಂದಿಗೆ ನಿಲ್ಲುವಾಗ, ಹುಡುಗಿ ಮಾತ್ರ ಎರಡೂ ಕೈಗಳನ್ನು ಎತ್ತಬೇಕು.
2. ನೀವು ಜೊತೆಗಾರರೊಂದಿಗೆ ನಿಲ್ಲುವಾಗ, ಹುಡುಗ ಮಾತ್ರ ಎರಡೂ ಕೈಗಳನ್ನು ಎತ್ತಬೇಕು.
3. ನೀವು ಜೊತೆಗಾರರೊಂದಿಗೆ ನಿಲ್ಲುವಾಗ, ಹುಡುಗಿ ಮಾತ್ರ ತರಗತಿಕೋಣೆಯಲ್ಲಿ ತನಗೆ ಇಷ್ಟವಾದ ವಸ್ತುವಿನತ್ತ ಬೆರಳು ತೋರಿಸಬೇಕು.
4. ನೀವು ಜೊತೆಗಾರರೊಂದಿಗೆ ನಿಲ್ಲುವಾಗ, ಹುಡುಗ ಮಾತ್ರ ತರಗತಿಕೋಣೆಯಲ್ಲಿ ತನಗೆ ಇಷ್ಟವಾದ ವಸ್ತುವಿನತ್ತ ಬೆರಳು ತೋರಿಸಬೇಕು.
5. ನೀವು ಜೊತೆಗಾರರೊಂದಿಗೆ ನಿಲ್ಲುವಾಗ, ಹುಡುಗಿ ಮಾತ್ರ ತರಗತಿಕೋಣೆಯಲ್ಲಿ ತನಗೆ ಇಷ್ಟವಾದ ವಸ್ತುವನ್ನು ಕೈಗೆತ್ತಿಕೊಂಡು, ನಿಮಗೆ ಕೊಟ್ಟು, ಅದು ಏಕೆ ತನಗೆ ಇಷ್ಟ ಎಂದು ಹೇಳಬೇಕು. (ನೀವು ಇಡೀ ಕೋಣೆಯ ತುಂಬ ಓಡಾಡುತ್ತ, ಪ್ರತೀ ಮಗು ಹೇಳುವುದನ್ನು ಕೇಳಿಸಿಕೊಳ್ಳುವುದು) ಅಥವಾ ಹುಡುಗಿ ತನಗೆ ಇಷ್ಟವಾದ ಹಾಡನ್ನು ಹಾಡಬಹುದು/ಅಥವಾ ತನಗೆ ತುಂಬ ಇಷ್ಟವಾದ ವ್ಯಕ್ತಿಯ ಬಗ್ಗೆ ಹೇಳುವುದು.
6. ನೀವು ಜೊತೆಗಾರರೊಂದಿಗೆ ನಿಲ್ಲುವಾಗ, ಹುಡುಗ ಮಾತ್ರ ತರಗತಿಕೋಣೆಯಲ್ಲಿ ತನಗೆ ಇಷ್ಟವಾದ ವಸ್ತುವನ್ನು ಕೈಗೆತ್ತಿಕೊಂಡು, ನಿಮಗೆ ಕೊಟ್ಟು, ಅದು ಏಕೆ ತನಗೆ ಇಷ್ಟ ಎಂದು ಹೇಳಬೇಕು. (ನೀವು ಇಡೀ ಕೋಣೆಯ ತುಂಬ ಓಡಾಡುತ್ತ, ಪ್ರತೀ ಮಗು ಹೇಳುವುದನ್ನು ಕೇಳಿಸಿಕೊಳ್ಳುವುದು) ಅಥವಾ ಹುಡುಗಿ ತನಗೆ ಇಷ್ಟವಾದ ಹಾಡನ್ನು ಹಾಡಬಹುದು/ಅಥವಾ ತನಗೆ ತುಂಬ ಇಷ್ಟವಾದ ವ್ಯಕ್ತಿಯ ಬಗ್ಗೆ ಹೇಳುವುದು.

ಚಟುವಟಿಕೆ 3

# ಭಾವನೆಗಳನ್ನು ವ್ಯಕ್ತಪಡಿಸುವುದು

## ಸಂತೋಷವನ್ನು ವ್ಯಕ್ತಪಡಿಸುವುದು



**ಮುಖವನ್ನು ಬಳಸಿಕೊಂಡು ಸಂತೋಷವನ್ನು ವ್ಯಕ್ತಪಡಿಸುವುದು**

ಮಕ್ಕಳು ತರಗತಿಕೋಣೆಯಲ್ಲಿ ಎಲ್ಲೆಂದರಲ್ಲಿ ನಿಲ್ಲಬೇಕು. ನಾಲ್ಕು ಪ್ರಾಥಮಿಕ ಭಾವನೆಗಳನ್ನು ಪುನರಾವರ್ತನೆ ಮಾಡುವುದು ಮತ್ತು ನಮ್ಮ ಮುಖದಲ್ಲಿ ಹೇಗೆ ಪ್ರತೀ ಭಾವನೆಯನ್ನು ತೋರಿಸುವುದು ಮತ್ತು ದೇಹ ಹೇಗೆ ಬೇರೆ ರೀತಿಯಲ್ಲಿ ತೋರಿಸುವುದು ಎಂದು ವಿವರಿಸುವುದು. ಹೇಗೆ ಮಾಡುವುದು ಎಂದು ಈಗ ನೋಡೋಣ. 'ಸಂತೋಷ' (ಅಥವಾ ಖುಷಿ) ಎಂದು ಹೇಳಿ ಮತ್ತು ನಗುವ ಮುಖ ತೋರಿಸಿ. 'ಹೆಚ್ಚು ಖುಷಿ/ಹೆಚ್ಚು ಸಂತೋಷ' ಎಂದು ಹೇಳಿ, ಇನ್ನಷ್ಟು ದೊಡ್ಡದಾಗಿ ನಗುವುದು. ಮಕ್ಕಳಿಗೆ ನಿಮ್ಮನ್ನು ಅನುಕರಣೆ ಮಾಡಲು ಹೇಳುವುದು ಮತ್ತು 'ತುಂಬಾ ಖುಷಿ/ ತುಂಬಾ ಸಂತೋಷ' ಎಂದು ಹೇಳಿ ಭಾವನೆಯನ್ನು ಇನ್ನಷ್ಟು ತೀವ್ರವಾಗಿ ತೋರಿಸಲು ಹೇಳುತ್ತ, ಮಕ್ಕಳಿಗೆ 'ಅತ್ಯಂತ ಸಂತೋಷ/ಅತ್ಯಂತ ಖುಷಿ' ಎಂದು ಹೇಳಿದಾಗ ಮಕ್ಕಳು ಜೋರಾಗಿ ನಗಬೇಕು.

**ಕೈಗಳನ್ನು ಬಳಸಿಕೊಂಡು ಸಂತೋಷವನ್ನು ವ್ಯಕ್ತಪಡಿಸುವುದು**

ಈಗ ಮಕ್ಕಳಿಗೆ ನಮ್ಮ ಕೈಗಳನ್ನು ಬಳಸಿಕೊಂಡು ನಮಗೆ ಖುಷಿಯಾಗಿರುವುದನ್ನು ಹೇಗೆ ಹೇಳುವುದು ನೋಡೋಣ ಎಂದು ಹೇಳುವುದು. ಚಪ್ಪಾಳೆ ಹೊಡೆಯುವುದು, ಕೈಯಾಡಿಸುವುದು, ಕೈಗಳನ್ನು ಪೂರ್ಣ ಮೇಲೆತ್ತಿ ಆಹಾ! ಎನ್ನುವುದು, ಹೀಗೆ ಮಾಡಿ ತೋರಿಸುವುದು. ಕೈಗಳನ್ನು ಬಳಸಿಕೊಂಡು ಸಂತೋಷವನ್ನು ವ್ಯಕ್ತಪಡಿಸುವ ಇನ್ನೂ ಬೇರೆ ವಿಧಾನಗಳನ್ನು ಆಲೋಚಿಸಲು ಮಕ್ಕಳಿಗೆ ಪ್ರೋತ್ಸಾಹಿಸಿ.

**ದೇಹದ ಬೇರೆ ಭಾಗಗಳನ್ನು ಬಳಸಿಕೊಂಡು ಸಂತೋಷವನ್ನು ವ್ಯಕ್ತಪಡಿಸುವುದು**

ಈಗ ಹೇಳಿ – ಈಗ ಇಡೀ ದೇಹ ಖುಷಿಯನ್ನು ಹೇಗೆ ತೋರಿಸುತ್ತೆ ಅಂತ ನೋಡೋಣ. ನೆಗೆಯುವುದು, ಕುಣಿಯುವುದು, ಓಲಾಡುವುದು, ಓಡುವುದು ಇತ್ಯಾದಿ. ಪ್ರತೀ ಸಲವೂ ಮಕ್ಕಳಿಗೆ ಮುಖದ ಮೇಲೆ ನಗು ಇರಬೇಕು ಎಂದು ಪ್ರೋತ್ಸಾಹಿಸಿ. ಹೆಚ್ಚು ಖುಷಿ, ಅತ್ಯಂತ ಖುಷಿಯಾಗಿರುವುದನ್ನು ಮಾಡಿ ತೋರಿಸುವಾಗ ತುಂಬ ಹುಮ್ಮಸ್ಸಿನಿಂದ ಮಾಡುವಂತೆ ಪ್ರೋತ್ಸಾಹಿಸುವುದು. ಮಕ್ಕಳ ಹಾಗೆ ಮಾಡಿ ತೋರಿಸುವಾಗ ಪೂರ್ವಗ್ರಹದಿಂದ ಯೋಚಿಸಬೇಡಿ, ಅವರು ಮುಕ್ತವಾಗಿ ಅವರಿಗೆ ಅನ್ನಿಸಿದನ್ನು ಮಾಡಲಿ.

## ದುಃಖವನ್ನು ವ್ಯಕ್ತಪಡಿಸುವುದು



**ಮುಖವನ್ನು ಬಳಸಿಕೊಂಡು ದುಃಖವನ್ನು ವ್ಯಕ್ತಪಡಿಸುವುದು**

ಈಗ ಬೇರೆ ಭಾವನೆಗಳನ್ನು ವ್ಯಕ್ತಪಡಿಸುವುದನ್ನು ನೋಡೋಣ ಎಂದು ಮಕ್ಕಳಿಗೆ ಹೇಳಿ. 'ದುಃಖ' ಎಂದು ಹೇಳಿ, ನೀವು ಮುಖದ ಮೇಲೆ ದುಃಖದ ಭಾವನೆಯನ್ನು ತೋರಿಸುವುದು. ಅವರಿಗೆ ಮುಖದ ಮೇಲೆ ಬೇಸರವನ್ನು ತೋರಿಸುವಂತೆ ಹೇಳುವುದು. ಆಮೇಲೆ 'ತುಂಬ ದುಃಖ', 'ಅತ್ಯಂತ ದುಃಖ' ಎಂದು ಹೇಳುತ್ತ, ಭಾವನೆಯ ತೀವ್ರತೆಯನ್ನು ವ್ಯಕ್ತಪಡಿಸಲು ಹೇಳಿ.

**ಕೈಗಳನ್ನು ಬಳಸಿಕೊಂಡು ದುಃಖವನ್ನು ವ್ಯಕ್ತಪಡಿಸುವುದು**

ನಂತರ 'ನಾವು ದುಃಖದಲ್ಲಿದ್ದಾಗ ನಮ್ಮ ಕೈಗಳನ್ನು ಹೇಗೆ ಆಡಿಸುತ್ತೇವೆ ಎನ್ನೋದನ್ನು ನೋಡೋಣ. ನಿಮ್ಮ ಬೆರಳು ಮಡಚಿ, ಮುಖದ ಮೇಲೆ ಕೈಯಿಟ್ಟು, ಮುಖದ ಮೇಲೆ ಕೈಯಿಂದ ಮುಚ್ಚಿಕೊಳ್ಳುವುದು' ಹೀಗೆ. ಮಕ್ಕಳಿಗೆ ಕೈಗಳನ್ನು ಬಳಸಿಕೊಂಡು ದುಃಖವನ್ನು ಸೂಚಿಸುವ ಇನ್ನೂ ಬಹಳ ವಿಧಾನಗಳನ್ನು ಆಲೋಚಿಸಲು ಹೇಳಿ.

**ದೇಹವನ್ನು ಬಳಸಿಕೊಂಡು ದುಃಖವನ್ನು ವ್ಯಕ್ತಪಡಿಸುವುದು**

ನಂತರ ಹೇಳಿ, "ನಾವೀಗ ಇಡೀ ದೇಹ ದುಃಖವನ್ನು ಹೇಗೆ ತೋರಿಸುತ್ತೆ ಅಂತ ನೋಡೋಣ. ಕುಸಿದು ಕೂರುವಂತೆ, ಭುಜಗಳು ಇಳಿಬಿದ್ದಂತೆ ಕೂರುವುದು ಇತ್ಯಾದಿ. ಇದೆಲ್ಲ ಮಾಡುವಾಗ ಮುಖದ ತುಂಬ ಬೇಸರ/ದುಃಖವನ್ನು ವ್ಯಕ್ತಪಡಿಸುವಂತೆ ಇರಲು ಹೇಳುವುದು.

## ಸಿಟ್ಟನ್ನು ವ್ಯಕ್ತಪಡಿಸುವುದು



**ಮುಖವನ್ನು ಬಳಸಿಕೊಂಡು ಸಿಟ್ಟನ್ನು ವ್ಯಕ್ತಪಡಿಸುವುದು:** ಈಗ ಇನ್ನೂ ಬೇರೆ ಬೇರೆ ಭಾವನೆಗಳನ್ನು ನೋಡೋಣ ಎಂದು ಹೇಳಿ. 'ಸಿಟ್ಟು' ಎಂದು ಹೇಳಿ, ನೀವು ಮುಖದ ಮೇಲೆ ಸಿಟ್ಟಿನ ಭಾವನೆಯನ್ನು ತೋರಿಸುವುದು. ಮಕ್ಕಳಿಗೂ ಹಾಗೆಯೇ ಮಾಡುವಂತೆ ಹೇಳುವುದು. 'ಹೆಚ್ಚು ಸಿಟ್ಟು' 'ಅತ್ಯಂತ ಸಿಟ್ಟು' ಎಂದು ಹೇಳುತ್ತ, ಭಾವನೆಯನ್ನು ತೀವ್ರವಾಗಿ ತೋರಿಸುವಂತೆ ಪ್ರೋತ್ಸಾಹಿಸಿ.

**ಕೈಗಳನ್ನು ಬಳಸಿಕೊಂಡು ಸಿಟ್ಟನ್ನು ವ್ಯಕ್ತಪಡಿಸುವುದು:** ನಂತರ ಹೇಳುವುದು, 'ಈಗ ನಾವು ಸಿಟ್ಟಲ್ಲಿದ್ದಾಗ ಕೈಗಳನ್ನು ಹೇಗೆ ಅಲ್ಲಾಡಿಸುತ್ತೇವೆ ಎಂದು ನೋಡೋಣ'. ಕೈಗಳನ್ನು ಸೊಂಟದ ಮೇಲೆ ಇಟ್ಟುಕೊಂಡು, ಕಣ್ಣು ದೊಡ್ಡದಾಗಿ ಅರಳಿಸಿ, ಕೋಪವನ್ನು ವ್ಯಕ್ತಪಡಿಸುವುದು. ಮಕ್ಕಳಿಗೆ ಕೈಯಿಂದ ಸಿಟ್ಟನ್ನು ಪ್ರದರ್ಶಿಸುವ ಇನ್ನೂ ಬೇರೆ ವಿಧಾನಗಳನ್ನು ಮಾಡುವಂತೆ ಪ್ರೋತ್ಸಾಹಿಸಿ.

**ದೇಹವನ್ನು ಬಳಸಿಕೊಂಡು ಸಿಟ್ಟನ್ನು ವ್ಯಕ್ತಪಡಿಸುವುದು:** ಈಗ ಇಡೀ ದೇಹವನ್ನು ಬಳಸಿಕೊಂಡು ಸಿಟ್ಟನ್ನು ಹೇಗೆ ತೋರಿಸುವುದು ಎಂದು ಮಾಡಿ ತೋರಿಸುವುದು. ಕಾಲನ್ನು ನೆಲಕ್ಕೆ ಅಪ್ಪಳಿಸುವುದು, ಏನನ್ನಾದರೂ ಒದೆಯುವುದು, ಮಕ್ಕಳಿಗೆ ಇದನ್ನೆಲ್ಲ ಮಾಡುವಾಗ ಸಿಟ್ಟಿನ ಮುಖದಲ್ಲಿರುವಂತೆ ಹೇಳುವುದು.

## ಭಯವನ್ನು ವ್ಯಕ್ತಪಡಿಸುವುದು



ಮೇಲಿನ ಎಲ್ಲ ಹಂತಗಳನ್ನು ಭಯವನ್ನು ತೋರಿಸಲು ಪುನರಾವರ್ತನೆ ಮಾಡುವುದು.

## ಚಟುವಟಿಕೆ 1



# ಗುಹೆಯಲ್ಲಿ ಗೆಳೆಯರು

**ಸೂಚನೆಗಳು:** ಮಕ್ಕಳು ವೃತ್ತಾಕಾರವಾಗಿ ನಿಲ್ಲಲಿ, ಒಂದು ಮಗು ಮಧ್ಯದಲ್ಲಿ ನಿಲ್ಲಲಿ.

ಅವರು ಕೈಗಳನ್ನು ಹಿಡಿದುಕೊಂಡು ಹಾಡುತ್ತಿರಬೇಕು. ತುಂಬ ದೊಡ್ಡ ವೃತ್ತವಾಗಿರುವುದು ಬೇಡ, 4–5 ಮಕ್ಕಳು ಮಧ್ಯದಲ್ಲಿ ನಿಲ್ಲುವಷ್ಟು ಜಾಗವಿದ್ದರೆ ಸಾಕು.

*ಸೀತಾ ಗುಹೇಲಿದಾಳೆ/ಸೀತಾ ಗುಹೇಲಿದಾಳೆ*<br>
*ಹೇ ಹೇ ಹೋ ಸೀತಾ ಗುಹೇಲಿದಾಳೆ*<br>
*ಸೀತಾಗೊಬ್ಬ ಗೆಳೆಯ/ಸೀತಾಗೊಬ್ಬ ಗೆಳೆಯ*<br>
*ಹೇ ಹೇ ಹೋ ಸೀತಾಗೊಬ್ಬ ಗೆಳೆಯ*

ಸೀತಾ ಈಗ ಒಬ್ಬನನ್ನು ಆರಿಸ್ಕೊಂಡು, ಅವನು ಒಳಗೆ ಬರಬೇಕು. ಮಕ್ಕಳು ಮತ್ತೆ ಸುತ್ತುತ್ತ ಹಾಡಬೇಕು.

*ರಾಘು ಗುಹೇಲಿದಾನೆ ರಾಘು ಗುಹೇಲಿದಾನೆ*<br>
*ಹೇ ಹೇ ಹೋ ರಾಘು ಗುಹೇಲಿದಾನೆ*<br>
*ರಾಘುಗೊಬ್ಬಳು ಗೆಳತಿ ರಾಘುಗೊಬ್ಬಳು ಗೆಳತಿ*<br>
*ಹೇ ಹೇ ಹೋ ರಾಘುಗೊಬ್ಬಳು ಗೆಳತಿ*

ಈಗ ರಾಘು ಯಾರಾದರೂ ಹುಡುಗಿಯೊಬ್ಬಳನ್ನು ಒಳಗೆ ಕರೆದುಕೊಳ್ಳಬೇಕು, ಮಕ್ಕಳು ಮತ್ತೆ ಹಾಡುತ್ತ ಓಡಬೇಕು.

*ಲತಾ ಗುಹೇಲಿದಾಳೆ/ಲತಾ ಗುಹೇಲಿದಾಳೆ*<br>
*ಹೇ ಹೇ ಹೋ ಲತಾ ಗುಹೇಲಿದಾಳೆ*<br>
*ಲತಾಗೊಬ್ಬಳು ಗೆಳೆಯ/ಲತಾಗೊಬ್ಬಳು ಗೆಳೆಯ*<br>
*ಹೇ ಹೇ ಹೋ ಲತಾಗೊಬ್ಬಳು ಗೆಳೆಯ*

ಹೀಗೆ ತರಗತಿಯಲ್ಲಿರುವ ಯಾರಾದರೂ ಮಕ್ಕಳ ಹೆಸರುಗಳನ್ನು ಹಾಡಿಗೆ ಜೋಡಿಸಿಕೊಂಡು, ನಾಲ್ಕಾರು ಮಕ್ಕಳು ವೃತ್ತದ ಮಧ್ಯಕ್ಕೆ ಬರುವಂತೆ ಮಾಡುವುದು, ಮಕ್ಕಳು ಆಗಷ್ಟೇ ಶಾಲೆಗೆ ಬಂದಿರುವುದರಿಂದ, ಅವರಿಗೆ ಒಬ್ಬರಿಗೊಬ್ಬರ ಹೆಸರುಗಳು ಗೊತ್ತಾಗುತ್ತವೆ.

---

## ಚಟುವಟಿಕೆ 2

# ಎತ್ತರ ಮತ್ತು ಗಿಡ್ಡ

**ಕಲಿಕಾ ಬೋಧನಾ ಸಾಮಗ್ರಿಗಳು:** ಏನೂ ಇಲ್ಲ.

**ಶಿಕ್ಷಕರ ಪೂರ್ವಸಿದ್ಧತೆ:** ಪ್ರತೀ ಗುಂಪಿನಲ್ಲಿಯೂ ಬೇರೆ ಬೇರೆ ಎತ್ತರದ ಮಕ್ಕಳು ಇರುವಂತೆ ಮಕ್ಕಳ ತಾತ್ಕಾಲಿಕ ಪಟ್ಟಿಯೊಂದನ್ನು ಸಿದ್ಧಪಡಿಸಿಟ್ಟುಕೊಳ್ಳುವುದು.

## ಸೂಚನೆಗಳು

1. ಪ್ರತೀ ಗುಂಪಿನಲ್ಲಿ ಬೇರೆ ಬೇರೆ ಎತ್ತರದ 5 ಮಕ್ಕಳಿರುವಂತೆ ಗುಂಪು ಮಾಡುವುದು.
2. ನೀವು "ಫೈರ್ ಇನ್ ದಿ ಮೌಂಟೇನ್, ರನ್ ರನ್ ರನ್" ಎಂದು ಚಪ್ಪಾಳೆ ತಟ್ಟುತ್ತ ಹಾಡುತ್ತಿರುವಂತೆ ಮುಂದೆ ಓಡುತ್ತಿರಲು ಮಕ್ಕಳಿಗೆ ಹೇಳಿ.
3. ನೀವು ಚಪ್ಪಾಳೆ ತಟ್ಟುವುದು ಮತ್ತು ಹಾಡುವುದು ನಿಲ್ಲಿ, 1–10 ಎಣಿಸುವಷ್ಟರಲ್ಲಿ ಗುಂಪಿನ ಮಕ್ಕಳು ತಮ್ಮ ಎತ್ತರಕ್ಕೆ ಅನುಗುಣವಾಗಿ ನೀವು ಹೇಳಿದ ಸಂಖ್ಯೆಗೆ ಅನುಗುಣವಾಗಿ ನಿಲ್ಲಬೇಕು. (ಅಂದರೆ 1 ಎಂದಾಗ ಎತ್ತರವಿರುವ ಮಗು ಹಿಂದೆ, ಎರಡು ಎಂದಾಗ ಅದಕ್ಕಿಂತ ಸ್ವಲ್ಪ ಚಿಕ್ಕ ಮಗು ಹೀಗೆ)
4. ಯಾವ ಗುಂಪು ಹೀಗೆ ಎತ್ತರಕ್ಕೆ ಅನುಗುಣವಾಗಿ ನಿಲ್ಲುವುದಿಲ್ಲವೋ, ಆ ಗುಂಪು ಆಟದಿಂದ ಔಟ್.
5. ಗುಂಪನ್ನು ಬದಲಿಸಿ, ಮತ್ತೆ ಆಟ ಶುರು ಮಾಡಿ.


ಚಟುವಟಿಕೆ 3

## ನಿಮ್ಮ ಜೋಡಿಯನ್ನು ಹುಡುಕಿಕೊಳ್ಳಿ



### ಕಲಿಕಾ ಬೋಧನಾ ಸಾಮಗ್ರಿಗಳು

ಈ ಭಾವನೆಗಳ ಮುಖ ಚಿತ್ರವಿರುವ 30 ಕಾರ್ಡುಗಳು: ಎ) ಜೋರಾಗಿ ನಗುತ್ತಿರುವುದು ಬಿ) ನಗು ಮುಖ ಸಿ) ಏನೂ ಭಾವನೆಗಳಿಲ್ಲ ಡಿ) ಅಸಂತೋಷ/ಬೇಸರ ಇ) ಅಳುತ್ತಿರುವುದು (ಪ್ರತಿಯೊಂದೂ 6 ಕಾರ್ಡುಗಳು)




### ಸೂಚನೆಗಳು

1. ಕಾರ್ಡುಗಳನ್ನು ಒಂದು ಬಾಕ್ಸಿನಲ್ಲಿ ಹಾಕಿಟ್ಟು, ಮಕ್ಕಳಿಗೆ ಯಾವುದಾದರೂ ಕಾರ್ಡನ್ನು ಎತ್ತಿಕೊಳ್ಳುವಂತೆ ಹೇಳುವುದು.
2. ನೀವು "ಫೈರ್ ಇನ್ ದಿ ಮೌಂಟೇನ್, ರನ್ ರನ್ ರನ್' ಎಂದು ಚಪ್ಪಾಳೆ ತಟ್ಟುತ್ತ ಹಾಡುತ್ತಿರುವಂತೆ ಮುಂದೆ ಓಡುತ್ತಿರಲು ಮಕ್ಕಳಿಗೆ ಹೇಳಿ.
3. ನೀವು ಚಪ್ಪಾಳೆ ತಟ್ಟುವುದು ಮತ್ತು ಹಾಡುವುದು ನಿಲ್ಲಿ, 1–10 ಎಣಿಸುವಷ್ಟರಲ್ಲಿ ಮಕ್ಕಳು ತಮ್ಮ ಕಾರ್ಡಿನ ಮೇಲೆ ಇದ್ದಂತಹ ಭಾವನೆಯ ಕಾರ್ಡ್‌ನ್ನು ಹೊಂದಿರುವ ಇನ್ನುಳಿದ 6 ಜೊತೆಗಾರರನ್ನು ಕಂಡುಕೊಂಡು, ಅವರೆಲ್ಲ ಒಂದು ಗುಂಪಾಗಿ ನಿಲ್ಲಬೇಕು.
4. ನೀವು ಹತ್ತು ಎಣಿಸುವಷ್ಟರಲ್ಲಿ ಯಾವುದೇ ಗುಂಪಿಗೂ ಸೇರದೇ ಯಾವುದಾದರೂ ಒಂದು ಮಗು ಇದ್ದರೆ, ಆ ಮಗು ಔಟ್ ಆಗುವುದು.
5. ಎಲ್ಲ ಕಾರ್ಡುಗಳನ್ನು ಬಾಕ್ಸಿನಲ್ಲಿ ಹಾಕಿ, ಮತ್ತೆ ಆಟವನ್ನು ಹೊಸದಾಗಿ ಶುರು ಮಾಡುವುದು.

ಚಟುವಟಿಕೆ 4

## ನಾನು ನಗುವಂತೆ ಮಾಡು

**ಕಲಿಕಾ ಬೋಧನಾ ಸಾಮಗ್ರಿಗಳು:** ಏನೂ ಇಲ್ಲ

### ಸೂಚನೆಗಳು

1. ಒಂದು ಮಗು 'ಜೋಕರ್' ಆಗಲಿ.
2. ನೀವು ಚಪ್ಪಾಳೆ ತಟ್ಟುತ್ತಿರುವಂತೆ ಉಳಿದ ಮಕ್ಕಳು ವೃತ್ತಾಕಾರವಾಗಿ ಓಡುತ್ತಿರಲಿ, ನೀವು ಚಪ್ಪಾಳೆ ತಟ್ಟುವುದು ನಿಲ್ಲಿಸಿದಾಗ, ಮಕ್ಕಳು ಫ್ರೀಜ್ ಆಗಿ ನಿಲ್ಲಬೇಕು.
3. ಚಪ್ಪಾಳೆ ನಿಲ್ಲಿಸಿ, ಎಲ್ಲ ಮಕ್ಕಳೂ ಅಲ್ಲಾಡದೇ ನಿಲ್ಲಲು ಒಂದು ನಿಮಿಷ ಕಾಯುವುದು.
4. ಆಮೇಲೆ ಜೋಕರ್ ಆಗಿರುವ ಮಗು ಅಲ್ಲಾಡದೇ ನಿಂತ ಎಲ್ಲ ಮಕ್ಕಳ ಮುಂದೆ ಹೋಗಿ ನಿಂತು ತಮಾಷೆಯ ಹಾವಭಾವಗಳನ್ನು ಮಾಡುವುದು, ಕೈಗಳನ್ನು ಹೇಗೆಹೇಗೋ ಅಲ್ಲಾಡಿಸುವುದು, ಮಂಗದಂತೆ ಮುಖ ಮಾಡುವುದು ಇತ್ಯಾದಿ ಏನಾದರೂ ಮಾಡಿ, ಒಂದಾದರೂ ಮಗು ನಗುವಂತೆ ಮಾಡಬೇಕು. ಮೊದಲು ನಕ್ಕ ಮಗು, ಜೋಕರ್ ಆಗುವುದು. ಆಟವನ್ನು ಈ ಹೊಸ ಜೋಕರ್‌ನೊಂದಿಗೆ ಮತ್ತೆ ಮುಂದುವರೆಸುವುದು.

ಸಂಪೂರ್ಣ ದೈಹಿಕ ಪ್ರತಿಕ್ರಿಯೆ (ಟೋಟಲ್ ಫಿಸಿಕಲ್ ರೆಸ್ಪಾನ್ಸ್ – ಟಿಪಿಆರ್)


## ನಾನು ನನ್ನದು

### ಕಲಿಕಾ ಫಲಿತಗಳು

ಮೊದಲ ತಿಂಗಳಿನ ಕೊನೆಯಲ್ಲಿ ಮಕ್ಕಳು ಈ ಕೆಳಗಿನ 6 ಇಂಗ್ಲೀಷ್ ಸರಳ ಸೂಚನೆಗಳಿಗೆ ಪ್ರತಿಕ್ರಯಿಸಲು ಮತ್ತು ಅವನ್ನು ಅನುಸರಿಸಲು ಸಮರ್ಥರಾಗುತ್ತಾರೆ.

### ಕಲಿಕಾ ಬೋಧನಾ ಸಾಮಗ್ರಿಗಳು

ಶಿಕ್ಷಕರ ಕಾರ್ಡುಗಳು









# ನಾನು ಮತ್ತು ನನ್ನ ಸುತ್ತಲಿರುವುದು

## ನನ್ನ ದೇಹ



# ಕಲಿಕಾ ಫಲಿತಗಳು

## ಉಪವಿಷಯ 1.2: ನನ್ನ ದೇಹ

| 3–4 ವರ್ಷಗಳು | 4–5 ವರ್ಷಗಳು | 5–6 ವರ್ಷಗಳು |
|---|---|---|
| 1 ತಲೆಯ ಮತ್ತು ಮುಖದ ಭಾಗಗಳನ್ನು ಗುರುತಿಸುತ್ತಾರೆ (ತಲೆ, ಮುಖ, ಕಣ್ಣುಗಳು, ಮೂಗು, ಕಿವಿಗಳು, ಬಾಯಿ, ಹಲ್ಲು ಮತ್ತು ನಾಲಿಗೆ) | 1 ತಲೆ, ಕುತ್ತಿಗೆ, ಭುಜ, ಎದೆ, ಹೊಟ್ಟೆ, ಹುಬ್ಬುಗಳು, ಕೈಗಳು, ಮಂಡಿ ಮತ್ತು ಕಾಲುಗಳು ಸೇರಿದಂತೆ, ಮುಖ ಮತ್ತು ದೇಹದ ಮುಖ್ಯ ಭಾಗಗಳ ಹೆಸರುಗಳನ್ನು ಹೇಳುತ್ತಾರೆ. | 1 ದೇಹದ ಮತ್ತು ಮುಖದ ಮುಖ್ಯ ಭಾಗಗಳ ಹೆಸರುಗಳನ್ನು ಹೇಳುತ್ತಾರೆ, ಜೊತೆಗೆ ಚಿಕ್ಕ ಅಂಗಗಳಾದ ಕೂದಲು, ಕೆನ್ನೆ, ಹುಬ್ಬುಗಳು, ತುಟಿಗಳು, ಸೊಂಟ, ಬೆರಳುಗಳು, ಕಾಲ್ಬೆರಳುಗಳು, ಉಗುರುಗಳು, ಹಿಮ್ಮಡಿ, ಮಣಿಕಟ್ಟು ಇತ್ಯಾದಿಗಳ ಹೆಸರಿಗಳನ್ನು ಹೇಳುತ್ತಾರೆ. |
| 2 ಕೆಲವೇ ಪದಗಳು ಮತ್ತು ಚಿಕ್ಕ ವಾಕ್ಯಗಳಲ್ಲಿ ವಿವಿಧ ಗ್ರಹಣೇಂದ್ರಿಯಗಳ ಕಾರ್ಯನಿರ್ವಹಣೆಯನ್ನು ವಿವರಿಸುತ್ತಾರೆ. | 2 ದೇಹದ ವಿವಿಧ ಭಾಗಗಳ ಕಾರ್ಯನಿರ್ವಹಣೆಯನ್ನು ವಿವರಿಸುತ್ತಾರೆ ವಿವರಿಸಬಲ್ಲರು, ವಿಶೇಷವಾಗಿ ಕೈ ಮತ್ತು ಕಾಲುಗಳಿಂದ ಮಾಡುವ ಕೆಲಸಗಳನ್ನು ವಿವರಿಸುತ್ತಾರೆ. | 2 ದೇಹದ ಈ ಭಾಗಗಳ ಕಾರ್ಯನಿರ್ವಹಣೆಯನ್ನು ವಿವರಿಸುತ್ತಾರೆ ಮತ್ತು ಹೇಗೆ ಜನರಲ್ಲಿ ಒಬ್ಬರಿಂದ ಇನ್ನೊಬ್ಬರಿಗೆ ಮುಖದ ಲಕ್ಷಣಗಳು ಬೇರೆಯಾಗಿರುತ್ತವೆ, ಆದ್ದರಿಂದ ಬೇರೆ ಬೇರೆಯಾಗಿ ಕಾಣುತ್ತಾರೆ ಎಂದು ಚಿಕ್ಕ ವಾಕ್ಯಗಳಲ್ಲಿ ವಿವರಿಸುತ್ತಾರೆ. |
| 3 ತಮ್ಮ ಹಾಜರಾತಿಯನ್ನು ಚಿಹ್ನೆಗಳು ಮತ್ತು ಗೆರೆ/ರೇಖಾಚಿತ್ರದ ಮೂಲಕ ಗುರುತಿಸಬಲ್ಲರು | 3 ಮುದ್ರಣದಲ್ಲಿರುವ ತಮ್ಮ ಹೆಸರನ್ನು ಗುರುತಿಸಬಲ್ಲರು ಮತ್ತು ಅದನ್ನು ಹಾಜರಾತಿ ಗುರುತಿಸಲು ಬಳಸಿಕೊಳ್ಳುವರು. | 3 ತಮ್ಮ ಹೆಸರನ್ನು ಮುದ್ರಿಸಬಲ್ಲರು ಮತ್ತು ಮುದ್ರಣದಲ್ಲಿರುವ ತಮ್ಮ ಹೆಸರಿನಿಂದ ಹಾಜರಾತಿ ಗುರುತಿಸುತ್ತಾರೆ |
| 4 ಕೈಗಳನ್ನು ತೊಳೆದುಕೊಳ್ಳುವ ಸರಿಯಾದ ವಿಧಾನವನ್ನು ಮಾಡಿ ತೋರಿಸುತ್ತಾರೆ. | 4 ಕೈಗಳನ್ನು ತೊಳೆದುಕೊಳ್ಳುವ ಸರಿಯಾದ ವಿಧಾನವನ್ನು ಮಾಡಿ ತೋರಿಸುತ್ತಾರೆ. | 4 ಹಲ್ಲು ತಿಕ್ಕಿಕೊಳ್ಳಲು ಮತ್ತು ಮುಖ ತೊಳೆದುಕೊಳ್ಳುವಾಗ ಮಾಡುವ ಸರಿಯಾದ ಚಲನೆಗಳನ್ನು ಮಾಡಿ ತೋರಿಸುತ್ತಾರೆ. |
| | 5 ಅಪಾಯಕಾರಿ/ಕೆಟ್ಟ ವರ್ತನೆಗಳನ್ನು ಮತ್ತು ಅದರ ಪರಿಣಾಮಗಳನ್ನು ಗುರುತಿಸಬಲ್ಲರು, ಜೊತೆಗೆ ಅವನ್ನು ತಪ್ಪಿಸಬಲ್ಲರು. | 5 ಸುರಕ್ಷಿತವಲ್ಲ ಎನ್ನಿಸುವ ಸ್ಥಳಗಳನ್ನು. ಸಮಯವನ್ನು ಮತ್ತು ಜನರನ್ನು ಗುರುತಿಸುತ್ತಾರೆ ಮತ್ತು ಅವನ್ನು ತಪ್ಪಿಸುತ್ತಾರೆ. |

ಉಪವಿಷಯ 1.2

# ನನ್ನ ದೇಹ



## ಕಲಿಕಾ ಉದ್ದೇಶಗಳು

ಈ ಅಧ್ಯಾಯದ ಕೊನೆಯಲ್ಲಿ ಮಕ್ಕಳು ಈ ಕೆಳಗಿನ ಸಾಮರ್ಥ್ಯಗಳನ್ನು ಗಳಿಸಿರುತ್ತಾರೆ:

- ತಲೆ, ಕುತ್ತಿಗೆ, ಭುಜ, ಎದೆ, ಹೊಟ್ಟೆ, ಹುಬ್ಬುಗಳು, ಕೈಗಳು, ಮಂಡಿ ಮತ್ತು ಕಾಲುಗಳು ಸೇರಿದಂತೆ, ಮುಖ ಮತ್ತು ದೇಹದ ಮುಖ್ಯ ಭಾಗಗಳ ಹೆಸರುಗಳನ್ನು ಹೇಳುತ್ತಾರೆ.
- ದೇಹದ ವಿವಿಧ ಭಾಗಗಳ ಕಾರ್ಯನಿರ್ವಹಣೆಯನ್ನು ವಿವರಿಸುತ್ತಾರೆ ವಿವರಿಸಬಲ್ಲರು, ವಿಶೇಷವಾಗಿ ಕೈ ಮತ್ತು ಕಾಲುಗಳಿಂದ ಮಾಡುವ ಕೆಲಸಗಳನ್ನು ವಿವರಿಸುತ್ತಾರೆ.
- ಮುದ್ರಣದಲ್ಲಿರುವ ತಮ್ಮ ಹೆಸರನ್ನು ಗುರುತಿಸಬಲ್ಲರು ಮತ್ತು ಅದನ್ನು ಹಾಜರಾತಿ ಗುರುತಿಸಲು ಬಳಸಿಕೊಳ್ಳುವರು.
- ಕೈಗಳನ್ನು ತೊಳೆದುಕೊಳ್ಳುವ ಸರಿಯಾದ ವಿಧಾನವನ್ನು ಮಾಡಿ ತೋರಿಸುತ್ತಾರೆ.
- ಅಪಾಯಕಾರಿ/ಕೆಟ್ಟ ವರ್ತನೆಗಳನ್ನು ಮತ್ತು ಅದರ ಪರಿಣಾಮಗಳನ್ನು ಗುರುತಿಸಬಲ್ಲರು, ಜೊತೆಗೆ ಅವನ್ನು ತಪ್ಪಿಸಬಲ್ಲರು.

ಸಂಭಾಷಣೆ 1



## ನನ್ನ ದೇಹದ ಅಂಗಾಗಗಳು




### ಕಲಿಕಾ ಫಲಿತಗಳು

ಮಗುವು ತನ್ನ ದೇಹದ ಅಂಗಾಂಗಗಳನ್ನು ಹೆಸರಿಸಲು ಮತ್ತು ಅವುಗಳ ಕಾರ್ಯನಿರ್ವಹಣೆಯನ್ನು ಹೇಳಲು ಸಮರ್ಥವಾಗುವುದು.

### ಕಲಿಕಾ ಬೋಧನಾ ಸಾಮಗ್ರಿಗಳು

ಉದ್ದನೆಯ ಕಂದು ಕಾಗದ, ಕ್ರೆಯಾನ್‌ಗಳು, ಸ್ಕೆಚ್‌ಪೆನ್ನುಗಳು, ದೇಹದ ಮತ್ತು ಮುಖದ ಭಾಗಗಳ ಫ್ಲಾಶ್ ಕಾರ್ಡುಗಳು (3 ಸೆಟ್‌ಗಳು)

### ಶಿಕ್ಷಕರ ಪೂರ್ವಸಿದ್ಧತೆ

ಮಕ್ಕಳಿಗೆ ತರಗತಿ ಕೋಣೆಯಲ್ಲಿ ಕೆಲಸ ಮಾಡಲು ಮತ್ತು ಕಂದು ಕಾಗದವನ್ನು, ಕ್ರೆಯಾನ್‌ಗಳು/ಸ್ಕೆಚ್‌ಪೆನ್ನುಗಳನ್ನು ಹರಡಲು ಬೇರೆ ಸಾಮಾನುಗಳನ್ನು ತೆಗೆದು, ಜಾಗವನ್ನು ತೆರವು ಮಾಡಿಕೊಳ್ಳುವುದು.

### ಸೂಚನೆಗಳು

**ಹಂತ 1: ದೇಹದ ಬಾಹ್ಯ ರೇಖಾಚಿತ್ರವನ್ನು ಬಿಡಿಸುವುದು**

1. ತರಗತಿಯಲ್ಲಿ ಎಷ್ಟು ಮಕ್ಕಳಿದ್ದಾರೆ ನೋಡಿಕೊಂಡು, ಒಂದು ಗುಂಪಿನಲ್ಲಿ 6 ಮಕ್ಕಳಿರುವಂತೆ ಗುಂಪು ಮಾಡುವುದು.
2. ಒಂದು ಮಗುವಿಗೆ ನೆಲದ ಮೇಲೆ ಹಾಸಿದ ಕಂದು ಕಾಗದದ ಮೇಲೆ ಮಲಗಲು ಹೇಳಿ. ಇನ್ನುಳಿದ ಮಕ್ಕಳು ಕಾಗದದ ಮೇಲೆ ಮಲಗಿದ ಮಗುವಿನ ದೇಹದ ಹೊರಭಾಗದ ರೇಖಾಚಿತ್ರವನ್ನು ಬಿಡಿಸಬೇಕು.
3. ಅಗತ್ಯವಿದ್ದರೆ ದೇಹದ ಆಕಾರವನ್ನು ಸರಿಪಡಿಸಿ.
4. ದೇಹದ ಬಾಹ್ಯ ರೇಖಾಚಿತ್ರವನ್ನು ಬಿಡಿಸಲು ಮಕ್ಕಳು ಸ್ಕೆಚ್ ಪೆನ್ ಬಳಸುವುದು.

**ಹಂತ 2: ದೇಹದ ಭಾಗಗಳನ್ನು ಹೆಸರಿಸುವುದು**

1. ಒಂದು ರೇಖಾಚಿತ್ರವನ್ನು ಆಯ್ಕೆ ಮಾಡಿಕೊಳ್ಳಿ ಮತ್ತು ಮಕ್ಕಳು ಅದರ ಸುತ್ತಲೂ ಕೂರುವುದು. ಒಂದು ಮಗುವನ್ನು ರೂಪದರ್ಶಿಯಂತೆ ಇರಿಸಿಕೊಂಡು, ದೇಹದ ಪ್ರತೀ ಭಾಗವನ್ನು ಮುಟ್ಟುವುದು. ಮಕ್ಕಳಿಗೆ ದೇಹದ ಭಾಗದ ಹೆಸರು ಗೊತ್ತೇ ಎಂದು ಕೇಳುವುದು. ಮಕ್ಕಳು ಅದನ್ನು ಗುರುತಿಸಿದ ನಂತರ ಅದರ ಹೆಸರನ್ನು ಪುನರಾವರ್ತನೆ ಮಾಡುವುದು.
2. ಬಾಹ್ಯ ರೇಖಾಚಿತ್ರದ ಮೇಲೆ ದೇಹದ ಭಾಗಗಳನ್ನು ಗುರುತಿಸಲು ಮಕ್ಕಳಿಗೆ ಹೇಳುವುದು.
3. ಫ್ಲಾಶ್ ಕಾರ್ಡುಗಳನ್ನು ಹೊರಗೆ ತೆಗೆದು, ಬಾಹ್ಯ ರೇಖಾಚಿತ್ರದ ದೇಹದ ಭಾಗಗಳ ಮೇಲೆ ಅವುಗಳನ್ನು ಇಡಲು ಮಕ್ಕಳಿಗೆ ಹೇಳುವುದು.
4. ಎಲ್ಲ ಗುಂಪುಗಳ ಜೊತೆಗೂ ಈ ಚಟುವಟಿಕೆ ಮಾಡಿದ ನಂತರ, ಎರಡು ಬಾಹ್ಯ ರೇಖಾಚಿತ್ರವನ್ನು ಆಯ್ಕೆ ಮಾಡಿಕೊಂಡು, ಹೇಗೆ ದೇಹದ ಗಾತ್ರಗಳು ಬದಲಾಗುತ್ತವೆ ಎಂದು ಮಾತನಾಡುವುದು.
5. ಈ ಎಲ್ಲ ಬಾಹ್ಯ ರೇಖಾಚಿತ್ರಗಳನ್ನು ಒಟ್ಟಿಗೆ ಇಟ್ಟು, ಮಕ್ಕಳಿಗೆ ಯಾವ ರೇಖಾಚಿತ್ರ ಯಾರದ್ದು ಎಂದು ಹೇಳಲು ಅವಕಾಶ ಕಲ್ಪಿಸುತ್ತ, ಸಂಭಾಷಣೆಯನ್ನು ಮುಗಿಸುವುದು.

## ಸಂಭಾಷಣೆ 2

## ನನ್ನ ದೇಹ ಏನು ಮಾಡುವುದು



### ಕಲಿಕಾ ಬೋಧನಾ ಸಾಮಗ್ರಿಗಳು

ಹಗ್ಗ, ಒಂದು ಮಿಠಾಯಿ, ಒಂದು ಲೋಟ ನೀರು ಮತ್ತು ಒಂದು ಬಾಚಣಿಕೆ

### ಶಿಕ್ಷಕರ ಪೂರ್ವಸಿದ್ಧತೆ

- ಈ ಚಟುವಟಿಕೆಯನ್ನು ನಿಮ್ಮ ಮನಸ್ಸಿನಲ್ಲಿಯೇ ಒಮ್ಮೆ ಅಭ್ಯಾಸ ಮಾಡಿಕೊಂಡು, ನಿಮ್ಮ ಮಾದರಿ ಮಕ್ಕಳನ್ನು ಮೊದಲೇ ಆಯ್ಕೆ ಮಾಡಿಕೊಳ್ಳುವುದು (ಹೊಸ ಸನ್ನಿವೇಶಕ್ಕೆ ಭಯಪಡದ, ಸ್ವಲ್ಪ ಆತ್ಮವಿಶ್ವಾಸವಿರುವ, ಹಿಂಜರಿಕೆಯಿಲ್ಲದ ಮಕ್ಕಳು)

### ಸೂಚನೆಗಳು

#### ಹಂತ 1

1. ಇಂದು ನಾವೊಂದು ಆಟವನ್ನು ಆಡೋಣ, ಇದು ನಮಗೆ ನಮ್ಮ ಕೈ ಮತ್ತು ಕಾಲಿನಿಂದ ನಾವೇನು ಮಾಡುತ್ತೇವೆ ಎಂದು ಯೋಚನೆ ಮಾಡಲು ಸಹಾಯ ಮಾಡುತ್ತೆ ಎಂದು ಹೇಳುತ್ತ ಆಟವನ್ನು ಶುರು ಮಾಡುವುದು.
2. ಮಗುವನ್ನು ಮುಂದೆ ಕರೆದು, ಅವಳ/ಅವನ ಕೈಗಳನ್ನು ಬೆನ್ನಿನ ಹಿಂದೆ ಕಟ್ಟುವುದು. ಏನಾದರೂ ಹೊಸದು ಮಾಡಲು ಇಷ್ಟಪಡುವ ಮಗುವನ್ನು ಅಥವಾ ಸ್ವಲ್ಪ ದೊಡ್ಡ ಮಗುವನ್ನು ಆಯ್ಕೆ ಮಾಡಿಕೊಳ್ಳುವುದು. ಹಿಂಜರಿಕೆಯ, ನಾಚಿಕೆ ಸ್ವಭಾವದ ಮಗು ಹೆದರಿಕೊಂಡು, ಅಳಲು ಶುರು ಮಾಡಬಹುದು.
3. ಗುಂಪಿಗೆ ಹೇಳಿ, 'ನೀವು ನೋಡುತ್ತಿರುವ ಹಾಗೆ ________________ (ಮಗುವಿನ ಹೆಸರು ಹೇಳಿ) ತನ್ನ ಕೈಯನ್ನು ಬಳಸೋದಕ್ಕೆ ಆಗೋದಿಲ್ಲ. ಈಗ ಕೈ ಕಟ್ಟಿರೋದ್ರಿಂದ ಅವನಿಗೆ/ಅವಳಿಗೆ ಯಾವ್ಯಾವ ಕೆಲಸ ಮಾಡೋದಕ್ಕೆ ಆಗೋದಿಲ್ಲ ಅಂತ ಹೇಳ್ತೀರಾ"?
4. ಮಕ್ಕಳು ಕೆಲವು ಎದ್ದು ಕಾಣುವ ಕೆಲಸಗಳನ್ನು ಹೇಳಬಹುದು (ತಿನ್ನುವುದು, ಹಲ್ಲುಜ್ಜುವದು, ತಲೆ ಬಾಚಿಕೊಳ್ಳುವುದು, ಬರೆಯುವುದು ಇತ್ಯಾದಿ) ಇನ್ನೂ ಹೆಚ್ಚು ಉತ್ತರಗಳನ್ನು ಅವರು ಹೇಳುವಂತೆ ಮತ್ತಷ್ಟು ಕೇಳುತ್ತಿರಿ. ಇನ್ನೂ ಏನು?
5. ಈಗ ನಾವು ಗಮನ ಸೆಳೆಯಲು ಬಯಸಿದರೆ ಅಥವಾ ಮೆಚ್ಚಿಗೆ ವ್ಯಕ್ತಪಡಿಸಲು ಬಯಸಿದರೆ (ಚಪ್ಪಾಳೆ ಹೊಡೆಯುವುದು, ಕೈ ಎತ್ತಿ ಅಲ್ಲಾಡಿಸುವುದು ಇತ್ಯಾದಿ), ಇಂತಹ ಕೆಲವು ಸನ್ನಿವೇಶಗಳನ್ನು ಹೇಳಿ... ಈಗೇನು ಮಾಡುವುದು? ಅವನಿಗೆ/ಅವಳಿಗೆ ಹೀಗೆ ಮಾಡಲು ಸಾಧ್ಯವೇ? ಮತ್ತೇನು ಮಾಡೋದಕ್ಕೆ ಅವನಿಗೆ/ಅವಳಿಗೆ ಆಗೋದಿಲ್ಲ?
6. ಮಕ್ಕಳು ಸಾಕಷ್ಟು ಕೆಲಸಗಳನ್ನು ಯೋಚಿಸಿ ಹೇಳಿದ ನಂತರ, ಎರಡನೇ ಸುತ್ತಿನ ಪ್ರಶ್ನೆಗಳನ್ನು ಕೇಳುವುದು, "ಅವನಿಗೆ/ಅವಳಿಗೆ ಸಹಾಯ ಮಾಡೋದಕ್ಕೆ ಏನು ಮಾಡಬಹುದು? ಅವನಿಗೆ/ಅವಳಿಗೆ ತಿನ್ನಲು ಹೇಗೆ ಸಹಾಯ ಮಾಡುವುದು? (ಮಿಠಾಯಿ ಸಿದ್ಧವಾಗಿಟ್ಟುಕೊಂಡಿರುವುದು) ಕುಡಿಯಲು ಹೇಗೆ ಸಹಾಯ ಮಾಡುವುದು? ಅವನಿಗೆ/ಅವಳಿಗೆ ತಲೆ ಬಾಚಿಕೊಳ್ಳಲು ಹೇಗೆ ಸಹಾಯ ಮಾಡುವುದು? (ಮಕ್ಕಳು ನಿಧಾನವಾಗಿ ತಲೆ ಬಾಚಲು ಪ್ರಯತ್ನಿಸುವಂತೆ, ಈ ಚಟುವಟಿಕೆಯನ್ನು ತುಸು ತಮಾಶೆಯಾಗಿರುವಂತೆ ಮಾಡಿ) ಕೆಲವೊಮ್ಮೆ ಮಕ್ಕಳಿಗೆ ಹುಷಾರಿಲ್ಲದಿದ್ದಾಗ, ನಿಶ್ಯಕ್ತರಾದಾಗ, ನಾವು ಅವರಿಗೆ ಸಹಾಯ ಮಾಡಬೇಕು ಎಂದು ವಿವರಿಸಿ.
7. ಈಗ ಮುಂದಿನ ಸುತ್ತಿನ ಪ್ರಶ್ನೆಗಳನ್ನು ಕೇಳುವುದು, "ನಾನು ಅವನನ್ನು/ಅವಳನ್ನು ತಳ್ಳಿದರೆ ಏನಾಗುತ್ತದೆ? ಕೈಗಳನ್ನು ಬಳಸಕ್ಕಾಗದೇ ಇರುವ ವ್ಯಕ್ತಿಯ ಜೊತೆಗೆ ಇದ್ದಾಗ ನಾವು ಹೇಗೆ ಎಚ್ಚರಿಕೆಯಿಂದ ಇರಬೇಕು? (ಅವರಿಗೆ ಸಹಾಯ ಮಾಡುವುದು/ತಳ್ಳಬಾರದು/ನೂಕಬಾರದು)
8. ಇನ್ನೊಂದು ಮಗುವಿನ ಕಾಲುಗಳನ್ನು ಮೆಲ್ಲಗೆ ಕಟ್ಟಿ ಇದೇ ಚಟುವಟಿಕೆಯನ್ನು ಪುನರಾವರ್ತನೆ ಮಾಡಿ, ಕಾಲನ್ನು ಬಳಸಲು ಆಗದೇ ಇದ್ದಾಗ ಮಗುವಿಗೆ ಯಾವ ಕೆಲಸಗಳನ್ನು ಮಾಡಲು ಆಗುವುದಿಲ್ಲ ಎನ್ನುವುದನ್ನು ಕೇಳುತ್ತ ಹೋಗುವುದು..

ಈ ಎರಡರ ಚರ್ಚೆಯಲ್ಲಿ ಕೈ ಮತ್ತು ಕಾಲುಗಳ ಎಲ್ಲಾ ರೀತಿಯ ಉಪಯೋಗಗಳ ಕುರಿತು ಮಾತನಾಡಿದ್ದನ್ನು ಮತ್ತೊಮ್ಮೆ ಹೇಳುತ್ತ, ನಮ್ಮ ದೇಹದ ಎಲ್ಲಾ ಭಾಗಗಳು ಕೆಲವು ಉಪಯೋಗಗಳನ್ನು ಹೊಂದಿವೆ ಎಂದು ಕ್ರೋಢಿಕರಿಸುವುದು ಕೈ, ಕಾಲು ಜೊತೆಗೆ ಕಣ್ಣು, ಮೂಗು, ಕಿವಿ ಇನ್ನೊಂದೆರಡು ಮುಖ್ಯ ಕಾರ್ಯನಿರ್ವಹಣೆಯನ್ನು 3–4 ವಯೋಮಾನದ ಗುಂಪಿನವರಿಗೂ ಅರ್ಥವಾಗುವಂತೆ ಸಾರಾಂಶೀಕರಿಸಿ.

## ಸಂಭಾಷಣೆ 3

## ಎಚ್ಚರಿಕೆಯಿಂದ ಇರಿ



### ಕಲಿಕಾ ಬೋಧನಾ ಸಾಮಗ್ರಿಗಳು

ಅಪಾಯಕಾರಿ ಸಂಗತಿಗಳನ್ನು ಮಾಡುತ್ತಿರುವ ಮಕ್ಕಳ ಚಿತ್ರದ ಕಾರ್ಡ್‌ಗಳು

**F1.2.1** – 1) ಪಟಾಕಿ ಹಚ್ಚುವಾಗ ಅದರ ಮೇಲೆ ಬಾಗುವುದು 2) ಮರದಿಂದ ನೇತಾಡುವುದು 3) ಕೊಳಕು ನೀರಿನಲ್ಲಿ ಕಾಲಾಡಿಸುತ್ತ ಹೋಗುವುದು 4) ಜೇನುಗೂಡಿಗೆ ಅಥವಾ ಯಾವುದಾದರೂ ಪ್ರಾಣಿಗೆ ಕಲ್ಲು ಎಸೆಯುವುದು. ಇವುಗಳ ಇನ್ನೊಂದು ಬದಿಯಲ್ಲಿ ಎ) ಕೂದಲು ಸುಟ್ಟ ಮಗುವಿನ ಚಿತ್ರ; ಬಿ) ಕಾಲು ಮುರಿದುಕೊಂಡು ಪಟ್ಟಿಹಾಕಿಕೊಂಡ ಮಗುವಿನ ಚಿತ್ರ; ಸಿ) ಕಾಲಿನ ಮೇಲೆ ಗುಳ್ಳೆಗಳು ಇರುವ ಮಗುವಿನ ಚಿತ್ರ; ಡಿ) ದೇಹದ ಮೇಲೆ ಕಚ್ಚಿದ ಗುರುತುಗಳು ಇರುವ ಮಗುವಿನ ಚಿತ್ರ, ಇರುತ್ತವೆ.





### ಶಿಕ್ಷಕರ ಪೂರ್ವಸಿದ್ಧತೆ

ಎಲ್ಲ ಚಿತ್ರ ಕಾರ್ಡುಗಳನ್ನು ನಿಮಗೆ ಬಳಸಲು ತಟ್ಟನೆ ಸಿಗುವಂತೆ ಹತ್ತಿರ ಇಟ್ಟುಕೊಳ್ಳುವುದು.

### ಸೂಚನೆಗಳು

1. 'ಇವತ್ತು ನಾನು ಕೆಲವು ಮೂರ್ಖ ಮಕ್ಕಳ ಬಗ್ಗೆ ನಿಮಗೆ ಹೇಳ್ತೀನಿ. ಅವರೆಲ್ಲ ಅಪಾಯಕಾರಿಯಾದ, ತುಂಬ ಮೂರ್ಖತನ/ಪೆದ್ದು ಅನ್ನಿಸೋ ಕೆಲಸ ಮಾಡ್ತಿದಾರೆ' ಎಂದು ಹೇಳುತ್ತ ಸಂಭಾಷಣೆ ಶುರು ಮಾಡುವುದು.
2. ಮೊದಲ ಚಿತ್ರ ಕಾರ್ಡ್ ತೋರಿಸಿ, 'ಈಗ ಈ ಹುಡುಗ ಏನು ಮಾಡ್ತಿದಾನೆ ಹೇಳಿ? ಹೀಗೆ ಮಾಡಿದರೆ ಅವನಿಗೆ ಏನಾಗುತ್ತೆ'?
3. ಎಲ್ಲ ನಾಲ್ಕು ಚಿತ್ರ ಕಾರ್ಡ್ ತೋರಿಸಿ, ಇದೇ ಸಂಭಾಷಣೆಯನ್ನು ಪುನರಾವರ್ತನೆ ಮಾಡುವುದು. ಮಕ್ಕಳಿಗೆ ಕೆಲವು ಸುಳಿವು ನೀಡಿ, ಮಾರ್ಗದರ್ಶನ ಮಾಡುವುದು – ಅವನು ಕೆಳಗೆ ಬಿದ್ದರೆ ಏನಾಗುತ್ತೆ? ಅವನು ಯಾಕೆ ಪೆದ್ದುತನದ ಕೆಲಸ ಮಾಡುತ್ತಿದ್ದಾನೆ? ಯಾಕೆ ಹೀಗೆ ಮಾಡುವುದು ಅಪಾಯಕಾರಿ ಎನ್ನಿಸುತ್ತೆ?
4. ನಾವು ಸುರಕ್ಷಿತವಾಗಿರಲು ಏನು ಮಾಡಬೇಕು?
5. ಈಗ ಆ ಚಿತ್ರಗಳ ಹಿಂಭಾಗದಲ್ಲಿ ಈ ಅಪಾಯಕಾರಿ ವರ್ತನೆಗಳ ಪರಿಣಾಮ ಕಾಣುವಂತೆ ಇರುವುದನ್ನು ತೋರಿಸಲು ಅದನ್ನು ಮೇಲೆ ಮಾಡಿ ಇಡುವುದು.
6. ಈ ಎಲ್ಲ ಮಕ್ಕಳು ಒಂದು ತಿಂಗಳು ಶಾಲೆಗೆ ಬರೋದಿಲ್ಲ. ಅವರಿಗೆ ಏನು ಆಗಿದೆ ಎಂದು ಹೇಳೋದಕ್ಕೆ ಆಗುತ್ತಾ ನಿಮಗೆ? ಮಕ್ಕಳಿಗೆ ಊಹೆ ಮಾಡಲು ಮತ್ತು ಈ ಮೊದಲು ಚರ್ಚೆ ಮಾಡಿದ ಒರಟು/ಅಪಾಯಕಾರಿ ವರ್ತನೆಯೊಂದಿಗೆ ಅದನ್ನು ಸಂಬಂಧಿಸಲು ಅವಕಾಶ ಕೊಡಿ.
7. ನಾವು ಹೇಗೆ ಎಚ್ಚರಿಕೆಯಿಂದ ಇರಬೇಕು? ಮಕ್ಕಳು ಹುಷಾರಾಗಿ/ಎಚ್ಚರಿಕೆಯಿಂದ ಇರುವಂತಹ ಇನ್ನೂ ಬೇರೆ ಸನ್ನಿವೇಶಗಳ ಬಗ್ಗೆ ಯೋಚನೆ ಮಾಡಿ ಹೇಳ್ತೀರಾ? ನೀವು ಕೆರೆ ಅಥವಾ ನದಿ ಹತ್ತಿರ ಇದ್ರೆ ನೀವು ಏನು ಮಾಡಬೇಕು? ಇತ್ಯಾದಿ.
8. ಅಪಾಯಕಾರಿ ಚಟುವಟಿಕೆಗಳು ಮತ್ತು ಸುರಕ್ಷಿತವಾದ ರೀತಿಯಲ್ಲಿ ನಡೆದುಕೊಳ್ಳುವ ಕುರಿತು ಒತ್ತಿ ಹೇಳುತ್ತ ಸಾರಾಂಶೀಕರಿಸಿರಿ.

## ನಾನು, ನನ್ನದು ಮತ್ತು ನನ್ನ ಕುಟುಂಬ




### ಕಲಿಕಾ ಫಲಿತಗಳು

ಈ ವಿಷಯದ ಅಂತ್ಯದಲ್ಲಿ ಮಕ್ಕಳು ಕೈಗಳನ್ನು ತೊಳೆದುಕೊಳ್ಳುವ ಸರಿಯಾದ ವಿಧಾನವನ್ನು ಮಾಡಿ ತೋರಿಸಲು ಸಮರ್ಥರಾಗುತ್ತಾರೆ.

### ಕಲಿಕಾ ಬೋಧನಾ ಸಾಮಗ್ರಿಗಳು

- ಹರಿಯುವ ನೀರು/ಬಕೇಟ್‌ನಲ್ಲಿ ನೀರು
- ಸೋಪು ಮತ್ತು ಟವೆಲ್
- ಕೈ ತೊಳೆಯುವುದರ ಚಾರ್ಟ್

### ಶಿಕ್ಷಕರ ಪೂರ್ವಸಿದ್ಧತೆ

ಎಲ್ಲ ಕಲಿಕಾ ಸಾಮಗ್ರಿಗಳನ್ನು ಸಿದ್ಧವಾಗಿಟ್ಟುಕೊಳ್ಳುವುದು.

### ಸೂಚನೆಗಳು

ನಾವು ಆರೋಗ್ಯವಾಗಿರಲು ಕೈ ತೊಳೆದುಕೊಳ್ಳುವುದು ಒಂದು ಬಹು ಮುಖ್ಯವಾದ ಅಂಶ ಎಂಬುದನ್ನು ಮಕ್ಕಳಿಗೆ ಮತ್ತೆ ಮನದಟ್ಟು ಮಾಡಿಸುವುದು ಮತ್ತು ಇದನ್ನು ಈಗ ಅಭ್ಯಾಸ ಮಾಡಿ, ಸರಿಯಾದ ವಿಧಾನದಲ್ಲಿ ಕೈಗಳನ್ನು ತೊಳೆದುಕೊಳ್ಳುವರು ಎಂದು ಹೇಳುವುದು.

ಸರಿಯಾಗಿ ಕೈಗಳನ್ನು ತೊಳೆದುಕೊಳ್ಳಲು ಏಳು ಹಂತಗಳ ಪ್ರಾಯೋಗಿಕ ಪ್ರಾತ್ಯಕ್ಷಿಕೆ ಅಂದರೆ ನೀವು ಒಮ್ಮೆ ಮಾಡಿ ತೋರಿಸುವುದು.

**ಹಂತ 1:** ಕೈಗಳನ್ನು ಒದ್ದೆ ಮಾಡಿಕೊಳ್ಳುವುದು. ಹರಿಯುವ ನೀರಿನಲ್ಲಿ ಅಥವಾ ಚೊಂಬಿನಿಂದ ಕೈಗೆ ಸ್ವಲ್ಪ ನೀರು ಹಾಕಿಕೊಂಡು ಕೈಗಳನ್ನು ಪೂರ್ಣವಾಗಿ ಒದ್ದೆ ಮಾಡಿಕೊಳ್ಳುವುದು.

**ಹಂತ 2:** ಅಂಗೈಗಳನ್ನು ಒಟ್ಟಿಗೇ ತಿಕ್ಕಿ/ಉಜ್ಜಿ.

**ಹಂತ 3:** ಎರಡೂ ಕೈಗಳ ಹಿಂಭಾಗದಲ್ಲಿ ತಿಕ್ಕಿ/ಉಜ್ಜಿ.

**ಹಂತ 4:** ಕೈ ಬೆರಳುಗಳನ್ನು ಒಂದಕ್ಕೊಂದು ಹೆಣೆದುಕೊಂಡು, ಎರಡೂ ಕೈಗಳನ್ನು ತಿಕ್ಕಿ/ಉಜ್ಜಿ.

**ಹಂತ 5:** ಬೆರಳುಗಳ ಹಿಂಭಾಗದಲ್ಲಿ ತಿಕ್ಕಿ/ಉಜ್ಜಿ.

**ಹಂತ 6:** ಹೆಬ್ಬೆರಳನ್ನು ಮತ್ತು ಮಣಿಕಟ್ಟಿನ ತುದಿಯನ್ನು ತಿಕ್ಕಿ/ಉಜ್ಜಿ.

**ಹಂತ 7:** ಈಗ ಎರಡೂ ಕೈಗಳನ್ನು ನೀರಿನಿಂದ ಚೆನ್ನಾಗಿ ತೊಳೆದುಕೊಳ್ಳಿ.

- ಈ ಪ್ರಾತ್ಯಕ್ಷಿಕೆಯನ್ನು ಇನ್ನೊಮ್ಮೆ ಮಾಡಿ ತೋರಿಸಿ ಮತ್ತು ಮಕ್ಕಳಿಗೆ ನೀವು ಮಾಡಿದ ಎಲ್ಲ ಹಂತಗಳ ಕ್ರಿಯೆಯನ್ನು ಅನುಸರಿಸಲು ಹೇಳುವುದು ಮತ್ತು ನಿಮ್ಮ ನಂತರ ಅವರು 3–4 ಸಲ ಮಾಡುವುದು.
- ಪ್ರತೀ ದಿನವೂ ಸೂಚನೆಗಳನ್ನು ಪುನರಾವರ್ತಿಸುತ್ತ, ಇದನ್ನು ಮಕ್ಕಳಿಗೆ ಮಾಡಿ ತೋರಿಸುವುದು ಮತ್ತು ಮಕ್ಕಳು ಕೈಗಳನ್ನು ತೊಳೆದುಕೊಳ್ಳುವಾಗ ಪರಿಶೀಲನೆ ಮಾಡುತ್ತಲೇ ಇರುವುದು.
- ತರಗತಿ ಕೋಣೆಯಲ್ಲಿ ನೋಡಿಕೊಳ್ಳಲು ಅನುವಾಗುವಂತೆ ಚಾರ್ಟ್‌ನ್ನು ಎಲ್ಲರಿಗೂ ಕಾಣುವಂತೆ ಕೈತೊಳೆದುಕೊಳ್ಳುವ ಜಾಗದ ಬಳಿ ನೇತುಹಾಕುವುದು.

## ಶಿಶುಗೀತೆಯ ಸೂಚನೆಗಳು

### ಕಲಿಕಾ ಫಲಿತಗಳು

ಈ ವಿಷಯದ ಅಂತ್ಯದಲ್ಲಿ ಮಕ್ಕಳು **ತಲೆ ಮೇಲೆ ಕೈ** – 'ಚಿಲಿಪಿಲಿ ಪುಟ ಸಂಖ್ಯೆ –––ರಲ್ಲಿ' ಇರುವ ಪದ್ಯವನ್ನು ಸರಿಯಾದ ಪದಗಳು, ಉಚ್ಚಾರ ಮತ್ತು ಅಭಿನಯದೊಂದಿಗೆ ಹಾಡಲು ಅಥವಾ ಹೇಳಲು ಸಮರ್ಥರಾಗುತ್ತಾರೆ.

### ಸೂಚನೆಗಳು

1. ಶಿಶುಗೀತೆಯನ್ನು ಪರಿಚಯಿಸಿ, ಅದು ಯಾವುದರ ಕುರಿತಾಗಿದೆ ಎಂದು ವಿವರಿಸುವುದು.
2. ಶಿಶುಗೀತೆಯನ್ನು ಅಭಿನಯ, ಹಾವಭಾವ ಮತ್ತು ಧ್ವನಿಯ ಏರಿಳಿತಗಳೊಂದಿಗೆ ಹೇಳುವುದು
3. ಮುಖ್ಯವಾದ ಪದಗಳನ್ನು ವಿವರಿಸುವುದು ಮತ್ತು ಮಕ್ಕಳು ಅದರರ್ಥವನ್ನು ಅರ್ಥಮಾಡಿಕೊಳ್ಳುವುದನ್ನು ಖಾತ್ರಿಪಡಿಸಿಕೊಳ್ಳುವುದು. ವಿವರಣೆಯನ್ನು ಹಾವಭಾವ, ಆಂಗಿಕ ಅಭಿನಯಕ್ಕೆ ಹೊಂದಿಸಿ, ಆಗ ಪದ್ಯದ ಅರ್ಥವು ಇನ್ನಷ್ಟು ಸ್ಪಷ್ಟವಾಗುತ್ತದೆ.
4. ಶಿಶುಗೀತೆಯ ಒಂದೊಂದೇ ಸಾಲುಗಳನ್ನು ಅಭಿನಯದೊಂದಿಗೆ ಹೇಳುತ್ತ, ಮಕ್ಕಳು ಅನುಸರಿಸುವಂತೆ ಮಾಡುವುದು.
5. ಉಚ್ಚಾರ, ಸ್ಪಷ್ಟತೆ ಮತ್ತು ಅಭಿನಯದ ಮೇಲೆ ಗಮನವಿರಲಿ.
6. ಮಕ್ಕಳ 3–4 ಗುಂಪುಗಳನ್ನು ಮಾಡಿ, ಗೀತೆಯನ್ನು ಹೇಳಿಸುವುದು, ಯಾರಿಗೆ ಹೇಳಲು ಕಷ್ಟವಾಗುತ್ತಿದೆ, ಉಚ್ಚಾರ ತಪ್ಪುತ್ತಿದೆ ಅಥವಾ ಪದಗಳನ್ನು ಅಭಿನಯದೊಂದಿಗೆ ಹೊಂದಿಸಿ ಹೇಳಲು ಆಗುತ್ತಿಲ್ಲ, ಅಂತಹ ಮಕ್ಕಳನ್ನು ಗುರುತಿಸಿ, ಅವರಿಗೆ ಇನ್ನೂ ಹೆಚ್ಚು ಅಭ್ಯಾಸ ಮಾಡಿಸುವುದು.

ಶಿಶುಗೀತೆ 1

## ತಲೆ ಮೇಲೆ ಕೈ

# ತಲೆ ಮೇಲೆ ಕೈ



ನಮ್ಮ ದೇಹದ ಅಂಗಾಂಗಗಳು
ತಲೆ ಮೇಲೆ ಕೈ ಇಲ್ಲೇನಿದೆ
ಇದು ನನ್ನ ತಲೆ ಬುರುಡೆ ನನ್ನ ಅಮ್ಮ
ತಲೆ ಬುರುಡೆ ತಲೆ ಬುರುಡೆ ನಿಕಿ ನಿಕಿ ನಿಕಿ ನೋ

ಅಮ್ಮಾ ನಾ ಶಾಲೆಗೆ ಹೋಗ್ಲಾ
ತಲೆ ಮೇಲೆ ಕೈ ಇಲ್ಲೇನಿದೆ (ಕಣ್ಣನ್ನು ತೋರಿಸಿ)
ಇದು ನನ್ನ ಕಣ್ ರೆಪ್ಪೆ ನನ್ನ ಅಮ್ಮ
ತಲೆ ಬುರುಡೆ ಕಣ್ ರೆಪ್ಪೆ ನಿಕಿ ನಿಕಿ ನಿಕಿ ನೋ

ಅಮ್ಮಾ ನಾ ಶಾಲೆಗೆ ಹೋಗ್ಲಾ
ತಲೆ ಮೇಲೆ ಕೈ ಇಲ್ಲೇನಿದೆ (ಮೂಗನ್ನು ತೋರಿಸಿ)
ಇದು ನನ್ನ ಉದ್ದ ಮೂಗು ನನ್ನ ಅಮ್ಮ
ತಲೆ ಬುರುಡೆ ಕಣ್ ರೆಪ್ಪೆ ಉದ್ದ ಮೂಗು ನಿಕಿ ನಿಕಿ ನಿಕಿ ನೋ

ಅಮ್ಮಾ ನಾ ಶಾಲೆಗೆ ಹೋಗ್ಲಾ
ತಲೆ ಮೇಲೆ ಕೈ ಇಲ್ಲೇನಿದೆ (ಬಾಯನ್ನು ತೋರಿಸಿ)
ಇದು ನನ್ನ ಪುಟ್ಟ ಬಾಯಿ ನನ್ನ ಅಮ್ಮ
ತಲೆ ಬುರುಡೆ ಕಣ್ ರೆಪ್ಪೆ ಉದ್ದ ಮೂಗು ಪುಟ್ಟ ಬಾಯಿ
ನಿಕಿ ನಿಕಿ ನಿಕಿ ನೋ

ಅಮ್ಮಾ ನಾ ಶಾಲೆಗೆ ಹೋಗ್ಲಾ
ತಲೆ ಮೇಲೆ ಕೈ ಇಲ್ಲೇನಿದೆ (ಕೈಯನ್ನು ತೋರಿಸಿ)
ಇವು ನನ್ನ ಕೈಗಳು ನನ್ನ ಅಮ್ಮ
ತಲೆ ಬುರುಡೆ ಕಣ್ ರೆಪ್ಪೆ ಉದ್ದ ಮೂಗು ಪುಟ್ಟ ಬಾಯಿ ಕೈಗಳು
ನಿಕಿ ನಿಕಿ ನಿಕಿ ನೋ

ಅಮ್ಮಾ ನಾ ಶಾಲೆಗೆ ಹೋಗ್ಲಾ
ತಲೆ ಮೇಲೆ ಕೈ ಇಲ್ಲೇನಿದೆ (ಕಾಲುಗಳನ್ನು ತೋರಿಸಿ)
ಇವು ನನ್ನ ಕಾಲುಗಳು ನನ್ನ ಅಮ್ಮ
ತಲೆ ಬುರುಡೆ ಕಣ್ ರೆಪ್ಪೆ ಉದ್ದ ಮೂಗು ಪುಟ್ಟ ಬಾಯಿ ಕೈಗಳು ಕಾಲ್ಗಳು ನಿಕಿ ನಿಕಿ ನಿಕಿ ನೋ

ಅಮ್ಮಾ ನಾ ಶಾಲೆಗೆ ಹೋಗ್ಲಾ
ತಲೆ ಮೇಲೆ ಕೈ ಇಲ್ಲೇನಿದೆ (ಹೊಟ್ಟೆಯನ್ನು ತೋರಿಸಿ)
ಇದು ನನ್ನ ಡೊಳ್ಳುಹೊಟ್ಟೆ ನನ್ನ ಅಮ್ಮ
ತಲೆ ಬುರುಡೆ ಕಣ್ ರೆಪ್ಪೆ ಉದ್ದ ಮೂಗು ಪುಟ್ಟ ಬಾಯಿ ಕೈಗಳು ಕಾಲ್ಗಳು ಡೊಳ್ಳುಹೊಟ್ಟೆ
ನಿಕಿ ನಿಕಿ ನಿಕಿ ನೋ

ಶಿಶುಗೀತೆ ೨

# This is the way

## This is the way

*This is the way I brush my teeth*
*Brush my teeth, brush my teeth*

*This is the way I brush my teeth*
*Early in the morning*

*This is the way I wash my face*
*Wash my face, wash my face*

*This is the way I wash my face*
*Early in the morning*






# ಯಾರು ದೊಡ್ಡವರು?



## ಕಲಿಕಾ ಫಲಿತಗಳು

ಈ ವಿಷಯದ ಅಂತ್ಯದಲ್ಲಿ 'ಯಾರು ದೊಡ್ಡವರು?' ಕಥೆಯನ್ನು ಹೇಳಲು ಸಮರ್ಥರಾಗುತ್ತಾರೆ ಮತ್ತು ಪುನಾಃ ನೆನಪಿಸಿಕೊಳ್ಳುವುದು ಮತ್ತು ಅರ್ಥೈಸಿಕೊಳ್ಳುವಿಕೆ ಅಗತ್ಯವಿರುವ ಏನು, ಏಕೆ, ಹೇಗೆ ಮತ್ತು ಯಾವಾಗ ಎಂಬ ಸರಳ ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥರಾಗುತ್ತಾರೆ.




## ಕಲಿಕಾ ಬೋಧನಾ ಸಾಮಗ್ರಿಗಳು

ಕಥೆಯ ಕಾರ್ಡ್

### ಕಥೆ

**ಯಾರು ದೊಡ್ಡವರು?**

**ನಮ್ಮ ದೇಹದ ಅಂಗಾಂಗಗಳು**

ಒಂದು ದಿನ ಅಂಗಾಂಗಳು ಎಲ್ಲವೂ ಹರತಾಳ ಮಾಡಲು ನಿರ್ಧರಿಸಿದವು

**ಕೈ** – ನಾನು ಇಲ್ಲದೆ ಯಾವ ಕೆಲಸ ಮಾಡಲು ಬರುವುದಿಲ್ಲ. ನಾನು ಮಾಡಿದ ಕೆಲಸದಿಂದ ಹೊಟ್ಟೆ ತುಂಬುತ್ತದೆ. ಹೊಟ್ಟೆ ಸುಮ್ಮನೆ ಇರುತ್ತದೆ. ನನ್ನಿಂದ ಹೊಟ್ಟೆ ತುಂಬಿಕೊಳ್ಳುತ್ತದೆ. ನಾನೇಕೆ ದುಡಿಯಬೇಕು ಎಂದುಕೊಂಡಿತು ಹಾಗೂ ಸುಮ್ಮನೆ ಕುಳಿತುಕೊಂಡಿತು.

**ಕಾಲು** – ನಾನಿಲ್ಲದೆ ನಡೆದಾಡುವುದು ಸಾಧ್ಯವಿಲ್ಲ. ನಾನು ಇಡೀ (ಶರೀರವನ್ನು) ದೇಹವನ್ನು ಹೊತ್ತುಕೊಂಡು ನಡೆಯಬೇಕು. ಹೊಟ್ಟೆ ಸುಮ್ಮನೆ ಕೂತುಕೊಂಡಿರುತ್ತದೆ ನಾನೇಕೆ ಕೆಲಸ ಮಾಡಲಿ ಎಂದು ಸುಮ್ಮನಾಯಿತು.

**ಬಾಯಿ** – ಹೌದು ನಾನೇಕೆ ಕಷ್ಟಪಟ್ಟು ತಿನ್ನಬೇಕು. ಹೊಟ್ಟೆ ಸುಮ್ಮನೆ ಕೂತಿರುತ್ತದೆ. ನಾನು ರುಚಿ ನೋಡಬೇಕು, ಜಗಿದು ತಿನ್ನಬೇಕು. ನಾನು ಈ ಕೆಲಸ ಮಾಡಲಾರೆ ಅಂದಿತು.

**ಮೂಗು** – ನಾನಿಲ್ಲದೇ ಹೊಟ್ಟೆಯು ಇರಲಾರದು. ನೀವು ಇರುವುದಿಲ್ಲ, ನಾನು ಕಷ್ಟಪಟ್ಟು ಉಸಿರಾಡಿದಾಗ ನೀವೆಲ್ಲ ಬದುಕುತ್ತೀರಿ, ನಾನು ಉಸಿರಾಡಲಾರೆ ಎಂದಿತು.

**ಕಣ್ಣು** – ನಾನು ಸಹ ಕೆಲಸ ಮಾಡಲಾರೆ. ನಾನು ಎಲ್ಲವನ್ನು ನೋಡಬೇಕು. ಕೆಟ್ಟದನ್ನು ಹಾಗೂ ಒಳ್ಳೆಯದನ್ನು ನಾನು ನೋಡಲಾರೆ ಎಂದಿತು.

**ಕಿವಿ** – ನಾನು ಕೇಳಬೇಕು, ಒಳ್ಳೆಯದಾಗಿರಲಿ ಕೆಟ್ಟದಾಗಿರಲಿ ನಾನು ಕೇಳಿದಾಗ ಮಾತ್ರ ಎಲ್ಲ ಕೆಲಸಗಳು ನಡೆಯುತ್ತದೆ. ನಾನು ಕೇಳಲಾರೆ ಎಂದಿತು.

ಹೊಟ್ಟೆಯು ಸುಮ್ಮನೆ ಕುಳಿತುಕೊಂಡಿತು. ಎಲ್ಲಾ ಅವಯವಗಳು ಹರತಾಳ ಮಾಡಿ ತಮ್ಮ ತಮ್ಮ ಕೆಲಸ (ಕಾರ್ಯ)ಗಳನ್ನು ಬಿಟ್ಟು ಕುಳಿತುಕೊಂಡವು.

ಒಂದು ತಾಸಾಯಿತು, ಎರಡು ತಾಸು, ಮೂರು ತಾಸು, ಹೀಗೆ ಸಮಯ ಕಳೆಯುತ್ತ ಬಂತು. ಹೊಟ್ಟೆಗೆ ಆಹಾರವಿಲ್ಲದೆ ಹಾಗೇ ಕುಳಿತಿತ್ತು. ಆಗ ಕೈ, ಕಾಲು ಚಲಿಸದಾದವು, ಬಾಯಿ ಒಣಗಿತು, ಕಣ್ಣು ಕಳಾಹೀನವಾಯಿತು. ಆಗ ಎಲ್ಲಾ ಅವಯವಗಳು ಹೊಟ್ಟೆಯಲ್ಲಿಗೆ ಮೊರೆ ಹೋದವು. "ನಮ್ಮದೆಲ್ಲಾ ತಪ್ಪಾಯಿತು, ಇನ್ನು ಮೇಲೆ ಈ ರೀತಿ ಮಾಡುವುದಿಲ್ಲ" ಎಂದು ಗೋಳಾಡಿದವು.

ಆಗ ಹೊಟ್ಟೆಯೆಂದಿತು "ಒಬ್ಬರನ್ನು ಬಿಟ್ಟು ಒಬ್ಬರಿಲ್ಲ. ಎಲ್ಲರು ಬೇಕೇ ಬೇಕು. ಶರೀರದ ಒಂದು ಅಂಗಕ್ಕೆ ತೊಂದರೆಯಾದರೆ ಇಡೀ ಶರೀರಕ್ಕೆ ಬಾಧೆ ಆಗುತ್ತದೆ."

**ನೀತಿ:** ನಾನೇ ಹೆಚ್ಚು ಎಂದು ಜಂಭಕೊಚ್ಚಿಕೊಳ್ಳಬಾರದು.

## ಯಾರು ದೊಡ್ಡವರು?



### ಸೂಚನೆಗಳು

**ಹಂತ 1:** ಕಥೆಯ ಪರಿಚಯ: ಮಕ್ಕಳೊಂದಿಗೆ ವಿಷಯದ ಕುರಿತು ಚರ್ಚೆ, ಅವರ ಬದುಕಿನ ಅನುಭವಗಳಿಗೆ ಸಂಬಂಧಿಸಿದಂತೆ ಮತ್ತು ವಿಷಯದ ಜೊತೆಗೆ ಮಕ್ಕಳ ಸ್ವಂತ ಅನುಭವವನ್ನು ನೆನಪಿಸಿ ಸ್ವಲ್ಪ ಚರ್ಚೆ ಮಾಡುವುದು – ನಿಮ್ಮ ದೇಹದ ಯಾವ ಅಂಗ ಬಹಳ ಮುಖ್ಯ ಅಂತ ಯೋಚಿಸ್ತೀರಿ? ಕೈ ಅಥವಾ ಕಾಲನ್ನು ಇಡೀ ದಿನ ಕಟ್ಟಿಹಾಕಿದರೆ ನೀವು ಏನು ಮಾಡ್ತೀರಿ? ಕಥೆಯ ಮುಖ ಪುಟವನ್ನು ತೋರಿಸಿ, ಕಥೆಯು ಯಾವುದರ ಬಗ್ಗೆ ಇರಬಹುದು ಎಂದು ಸ್ವಲ್ಪ ಚರ್ಚೆ ಮಾಡುವುದು.

**ಹಂತ 2:** ಕಥೆಯನ್ನು ನಿಮ್ಮದೇ ಪದಗಳಲ್ಲಿ ಧ್ವನಿಯ ಏರಿಳಿತ ಹಾಗೂ ಹಾವಭಾವ, ಮುಖಭಾವದೊಂದಿಗೆ ಹೇಳುವುದು.

**ಹಂತ 3:** ಕಥೆಯನ್ನು ಜೋರಾಗಿ ಓದುತ್ತ, ಮಕ್ಕಳಿಗೆ ಮಧ್ಯೆ ಏನೂ ಅಡ್ಡಿ ಮಾಡದೇ, ಗಮನವಿಟ್ಟು ಕಥೆ ಕೇಳುವಂತೆ ಮಾಡುವುದು.

**ಹಂತ 4:** ಕಥೆಯನ್ನು ಮತ್ತೊಮ್ಮೆ ಓದುತ್ತ, ಮುಖ್ಯ ಪಾತ್ರಗಳನ್ನು ಹಾಗೂ ಘಟನೆಗಳನ್ನು ಮುಖ್ಯವಾದ ಪದಗಳನ್ನು ವಿವರಿಸುತ್ತ, ಮರು ಪ್ರಶ್ನೆಗಳನ್ನು ಕೇಳುವುದು, ಅಂದರೆ ಮಕ್ಕಳು ಕಥೆಯನ್ನು ಅರ್ಥಮಾಡಿಕೊಂಡಿದ್ದಾರೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದು. ಇಲ್ಲಿ ಮಾರುತ್ತರ ಪಡೆಯುವ ಕೆಲವು ಉದಾಹರಣೆ ಪ್ರಶ್ನೆಗಳಿವೆ:

- ಕೈಗಳು ಹೇಳಿದವು 'ನಾನಿಲ್ಲದೇ ಏನೂ ಕೆಲಸ ಮಾಡೋದಕ್ಕೆ ಆಗೋದಿಲ್ಲ. ಊಟ ಮಾಡೋದಕ್ಕೆ ನಾನೇ ಬೇಕು ನಿಮಗೆ' – ಕೈ ಏನಂತ ಹೇಳಿತು?
- ಕಾಲು ಹೇಳಿತು, 'ನಾನಿಲ್ಲದೇ ಊಟ ಇರೋ ಕಡೆ ನಿಮಗೆ ನಡೆದುಕೊಂಡು ಹೋಗಕ್ಕೆ ಆಗೋದಿಲ್ಲ.' ಕಾಲು ಏನು ಹೇಳಿತು?
- 'ನಾನು ಊಟದ ರುಚಿ ನೋಡಬೇಕು, ಮತ್ತೆ ಅದನ್ನು ಜೋರಾಗಿ ಅಗೀಬೇಕು', ಬಾಯಿ ಹೇಳಿತು. ಬಾಯಿ ಏನು ಹೇಳಿತು?

**ಹಂತ 5:** ಕಥೆಯ ಕೊನೆಯಲ್ಲಿ, ಗ್ರಹಣಶಕ್ತಿ ಮತ್ತು ಸ್ಮರಣಶಕ್ತಿಯನ್ನು ಪರೀಕ್ಷಿಸಲು ಕೆಲವು ಸರಳವಾದ ಪ್ರಶ್ನೆಗಳನ್ನು ಕೇಳುವುದು.

ಸ್ಮರಣಶಕ್ತಿಗೆ ಕೆಲವು ಉದಾಹರಣೆ ಪ್ರಶ್ನೆಗಳು:

- ಕೈಗಳು ಏಕೆ ತಾವೇ ಬಹುಮುಖ್ಯ ಎಂದು ಯೊಚಿಸಿದವು?
- ಮೂಗು ಯಾಕೆ ತಾನೇ ಬಹುಮುಖ್ಯ ಎಂದು ಯೋಚಿಸಿತು?
- ಯಾರೆಲ್ಲರೂ ಕೆಲಸ ಮಾಡಲು ನಿಲ್ಲಿಸಲು ನಿರ್ಧರಿಸಿದರು?
- ಕೈಗಳು ಕೆಲಸ ಮಾಡೋದನ್ನು ನಿಲ್ಲಿಸಿದರೆ ಏನಾಗುತ್ತದೆ?

**ಹಂತ 6:** ಮಕ್ಕಳಿಗೆ ತೀರ್ಮಾನ ಮಾಡುವುದು ಅಗತ್ಯವಿರುವ ಅಥವಾ 'ಹಾಗಾದರೆ, ಹೀಗಾದರೆ' ರೀತಿಯ ಪ್ರಶ್ನೆ ಕೇಳುವುದನ್ನು ಮುಂದುವರೆಸಿ.

- ಯಾರು ಎಲ್ಲ ಅಂಗಗಳೂ ಸೋಮಾರಿ ಎಂದು ತಿಳಿದುಕೊಂಡು, ಕೆಲಸ ಮಾಡಲಿಲ್ಲ?
- ಎಲ್ಲರೂ ಕೆಲಸ ಮಾಡಿ, ಕೈಯೊಂದೇ ಕೆಲಸ ಮಾಡಲಿಲ್ಲ ಎಂದರೆ ಏನಾಗುತ್ತದೆ? ಕೈಗಳ ಕೆಲಸವನ್ನು ಮಾಡಲು ದೇಹದ ಬೇರೆ ಅಂಗವನ್ನು ಬಳಸಲು ಸಾಧ್ಯವಿದೆಯೇ?
- ಮೂಗು ಮಾತ್ರ ಕೆಲಸ ಮಾಡೋದನ್ನು ನಿಲ್ಲಿಸಿದರೆ ಏನಾಗುತ್ತದೆ?

**ಹಂತ 7:** ಕಥೆಯ ಪಾತ್ರಗಳೊಂದಿಗೆ ಮಕ್ಕಳಿಗೆ ಅನುಭೂತಿಯನ್ನು ಹೊಂದಲು ಸಾಧ್ಯವಾಗುವ ಕೆಲವು ಸರಳ ಪ್ರಶ್ನೆಗಳನ್ನು ಕೇಳಿ.

- ನಿಮಗೆ ಹಸಿವೆಯಾದಾಗ, ನಿಮ್ಮ ದೇಹಕ್ಕೆ ಏನು ಅನ್ನಿಸುತ್ತದೆ?
- ನಿಮಗೆ ಹಸಿವೆಯಾದಾಗ, ನಿಮ್ಮ ಹೊಟ್ಟೆ ಏನು ಮಾಡುತ್ತದೆ?

**ಹಂತ 8:** ಮಕ್ಕಳು ತಮ್ಮದೇ ನಾಲ್ಕಾರು ವಾಕ್ಯಗಳಲ್ಲಿ ಈ ಕಥೆಯನ್ನು ಹೇಳಲು ಬೆಂಬಲ ನೀಡುವುದು.

**ಚಟುವಟಿಕೆ 1**

## ಒಂದು ಸ್ವಂತ ವ್ಯಕ್ತಿಚಿತ್ರ ಮಾಡುವದು

### ಕಲಿಕಾ ಬೋಧನಾ ಸಾಮಗ್ರಿಗಳು

- ಮುಖದ ಬಾಹ್ಯರೇಖೆಯನ್ನು ಬಿಡಿಸಿರುವ ಕಾಗದದ ಚೂರು
- ಉಣ್ಣೆ, ಬಣ್ಣದ ಪೆನ್ಸಿಲ್‌ಗಳು, ಬಣ್ಣದ ಕಾಗದ
- ಚಿಕ್ಕ ಗುಂಡಿಗಳು

### ಸೂಚನೆಗಳು

1. ಮಕ್ಕಳಿಗೆ ಮುಖದ ಚಿತ್ರವನ್ನು ನೀಡಿ, ಕಪ್ಪು ಉಣ್ಣೆಯನ್ನು ಕೂದಲಿಗೆ ಅಂಟಿಸಿ, ಕಣ್ಣುಗಳನ್ನು ಬಿಡಿಸಿ ಅಥವಾ ಗುಂಡಿಗಳನ್ನು ಅಂಟಿಸಿ, ಪೆನ್ಸಿಲ್‌ನಿಂದ ಮೂಗು, ಬಾಯಿಯನ್ನು ಬರೆಯಲು ಹೇಳಿ, ಬಾಯಿಗೆ ಕೆಂಪು ಉಣ್ಣೆಯ ದಾರವನ್ನು ಸರಿಯಾಗಿ ಅಂಟಿಸಿದರೂ ಆಗುತ್ತದೆ.
2. ಮಕ್ಕಳಿಗೆ ಅವರು ಬರೆದ ವ್ಯಕ್ತಿ ಚಿತ್ರಗಳನ್ನು ವಿವರಿಸಲು ಹೇಳಿ.

---

**ಚಟುವಟಿಕೆ 2**

## ಪಿನ್ ಮೆನ್ ಮಾಡುವದು

### ಕಲಿಕಾ ಬೋಧನಾ ಸಾಮಗ್ರಿಗಳು

- 3 ಗಾತ್ರದಲ್ಲಿ ಕತ್ತರಿಸಿದ ಸ್ಟ್ರಾಗಳು/ಬೆಂಕಿಕಡ್ಡಿಗಳು, ಅದರ ತಲೆ ತೆಗೆದಿರಬೇಕು – ಕೆಲವನ್ನು ಎರಡು ಚೂರು ಮಾಡಿ, ಕೆಲವು ಇಡಿಯಾಗಿಯೇ ಇರಲಿ
- ಕಾಲುಗಳು ಮತ್ತು ಕೈಗಳು ವಿವಿಧ ಭಂಗಿಯಲ್ಲಿ ಇರುವ ಪಿನ್ ಮೆನ್ ಕ್ಯೂ ಕಾರ್ಡುಗಳು
- ಸೀಮೆಸುಣ್ಣ

### ಸೂಚನೆಗಳು

1. ಮನುಷ್ಯರು, ಮನೆ ಇತ್ಯಾದಿಗಳ ಸರಳವಾದ ರೇಖಾ ಚಿತ್ರಗಳನ್ನು ನೆಲದ ಮೇಲೆ ಬಿಡಿಸಿರಿ ಮತ್ತು ಮಕ್ಕಳಿಗೆ ಸ್ಟ್ರಾಗಳು ಮತ್ತು ಬೆಂಕಿಕಡ್ಡಿಗಳನ್ನು ಹೊರರೇಖೆಯ ಮೇಲೆ ಇಡಲು ಹೇಳುವುದು.
2. ಕ್ಯೂ ಕಾರ್ಡುಗಳನ್ನು ಮಕ್ಕಳಿಗೆ ತೋರಿಸಿ, ವಿವಿಧ ಗಾತ್ರದ ಕಡ್ಡಿಗಳನ್ನು ಬಳಸಿಕೊಂಡು ಕ್ಯೂ ಮೆನ್‌ಗಳನ್ನು ನಕಲು ಮಾಡಲು ತಿಳಿಸಿ, ಅವರಿಗೆ ಮಾಡಲು ಬೆಂಬಲಿಸುವುದು.

## ಚಟುವಟಿಕೆ 1

## ದೇಹದ ವಿವಿಧ ಭಾಗಗಳನ್ನು ಅಲ್ಲಾಡಿಸುವುದು ಅಥವಾ ಓಲಾಡಿಸುವುದು

1. ಮಕ್ಕಳನ್ನು ತರಗತಿಕೋಣೆಯಲ್ಲಿ ವಿವಿಧ ಭಂಗಿಗಳಲ್ಲಿ ನಿಲ್ಲುವಂತೆ ಮಾರ್ಗದರ್ಶನ ಮಾಡುವುದು.
2. ಶಿಕ್ಷಕರು ಹೀಗೆ ಸೂಚನೆ ಕೊಡಬೇಕು: "ನಮ್ಮ ದೇಹದಲ್ಲಿ ಹಲವಾರು ತುಂಟ ಭಾಗಗಳಿದ್ದು ಅವಕ್ಕೆ ಓಲಾಡಬೇಕು ಅನ್ನಿಸುತ್ತದೆ. ದೇಹದ ವಿವಿಧ ಭಾಗಗಳನ್ನು ಹೇಗೆ ಚಲಿಸುವುದು ಅಂತ ಈಗ ನೋಡೋಣ. ನಾವು ವಿವಿಧ ಭಾಗಗಳನ್ನು ಹೆಸರಿಸಿ, ಅವನ್ನು ಬೇರೆ ಬೇರೆ ರೀತಿ ಅಲ್ಲಾಡಿಸೋಣ ಮತ್ತು ಅವನ್ನು ನಮ್ಮ ದೈನಂದಿನ ಬದುಕಿನಲ್ಲಿ ಹೇಗೆ ಬಳಸಿಕೊಳ್ಳುವುದು ಅಂತ ನೋಡೋಣ.
3. ಮಕ್ಕಳು ನೆಲದ ಮೇಲೆ ತಮ್ಮ ಕಾಲುಗಳನ್ನು ಮುಂದೆ ಚಾಚಿ ಕುಳಿತುಕೊಳ್ಳಬೇಕು. ಅಂದರೆ ಅವರ ದೇಹದೊಂದಿಗೆ ಎಲ್ ಆಕಾರದಲ್ಲಿ ಕೂರಬೇಕು.
4. ಮಕ್ಕಳು ತಮ್ಮ ಕಾಲ್ಬೆರಳುಗಳತ್ತ ಬೆರಳು ಮಾಡಿ, ಆ ಭಾಗವನ್ನು ಹೆಸರಿಸುವುದು (ಕಾಲ್ಬೆರಳು) ಮತ್ತು ಅದನ್ನು ಅಲ್ಲಾಡಿಸುವುದು. ಮಕ್ಕಳು ಮತ್ತು ಶಿಕ್ಷಕರು ಕಾಲ್ಬೆರಳನ್ನು ಅಲ್ಲಾಡಿಸುವ ವಿವಿಧ ವಿಧಾನಗಳನ್ನು ಪ್ರಯತ್ನಿಸಬೇಕು (ಕೆಳಗೆ ಬಾಗಿಸುವುದು, ನೇರವಾಗಿರಿಸುವುದು ಇತ್ಯಾದಿ). ಈ ಚಟುವಟಿಕೆಗೆ ಆಆಆಆ, ಊಊಊಊ, ಕೂಕೂಕೂ ಇತ್ಯಾದಿ ಸದ್ದುಗಳನ್ನು ಸೇರಿಸಿ, ಮಾಡುವ ಮೂಲಕ ಇನ್ನಷ್ಟು ತಮಾಷೆಯಾಗಿ ಮಾಡುವುದು.
5. ಮಕ್ಕಳಿಗೆ ಅವರ ಅಂಗಾಲಿನತ್ತ ಬೆರಳು ತೋರಿಸಿ, ಅದನ್ನು ಹೆಸರಿಸಲು ಹೇಳಿ (ಅಂಗಾಲು) ಮತ್ತು ಅದನ್ನು ಅಲ್ಲಾಡಿಸುವುದು. ಮಕ್ಕಳು ಮತ್ತು ಶಿಕ್ಷಕರು ಕಾಲುಗಳನ್ನು ಅಲ್ಲಾಡಿಸುವ ವಿವಿಧ ವಿಧಾನಗಳನ್ನು ಪ್ರಯತ್ನಿಸಬೇಕು (ವೃತ್ತಗಳನ್ನು ಮಾಡುವುದು, ವಿ ಆಕಾರ ಮಾಡುವುದು, ಎರಡೂ ಅಂಗಾಲಗಳನ್ನು ಜೋಡಿಸುವುದು, ಅಂಗಾಲನ್ನು ಅಗಲಿಸುವುದು, ಬಾಗಿಸುವುದು, ಹಿಮ್ಮಡಿ ಎತ್ತರಿಸುವುದು ಇತ್ಯಾದಿ)
6. ಮಕ್ಕಳಿಗೆ ಅವರ ಮೊಣಕಾಲಿನತ್ತ ಬೆರಳು ತೋರಿಸಿ, ಅದನ್ನು ಹೆಸರಿಸಲು ಹೇಳಿ (ಮೊಣಕಾಲು) ಮತ್ತು ಅದನ್ನು ಅಲ್ಲಾಡಿಸುವುದು. ಮಕ್ಕಳು ಮತ್ತು ಶಿಕ್ಷಕರು ಮೊಣಕಾಲನ್ನು ಅಲ್ಲಾಡಿಸುವ ವಿವಿಧ ವಿಧಾನಗಳನ್ನು ಪ್ರಯತ್ನಿಸಬೇಕು. (ವೃತ್ತಗಳನ್ನು ಮಾಡುವುದು, ಮೊಣಕಾಲನ್ನು ಎತ್ತುವುದು, ಕೆಳಗಿಳಿಸುವುದು, ಎರಡೂ ಮೊಣಕಾಲನ್ನು ಹತ್ತಿರ ತರುವದು, ದೂರ ಮಾಡುವುದು, ಅಂಗಾಲನ್ನು ಹತ್ತಿರವಿಟ್ಟುಕೊಂಡು, ಮೊಣಕಾಲನ್ನು ಅಗಲಿಸುವುದು ಇತ್ಯಾದಿ)
7. ಮಕ್ಕಳಿಗೆ ಅವರ ಕಾಲಿನತ್ತ ಬೆರಳು ತೋರಿಸಿ, ಅದನ್ನು ಹೆಸರಿಸಲು ಹೇಳಿ (ಕಾಲು) ಮತ್ತು ಅದನ್ನು ಅಲ್ಲಾಡಿಸುವುದು. ಮಕ್ಕಳು ಮತ್ತು ಶಿಕ್ಷಕರು ಕಾಲನ್ನು ಅಲ್ಲಾಡಿಸುವ ವಿವಿಧ ವಿಧಾನಗಳನ್ನು ಪ್ರಯತ್ನಿಸಬೇಕು. (ಕಾಲುಗಳನ್ನು ಒಂದರ ನಂತರ ಇನ್ನೊಂದನ್ನು ಎತ್ತುವುದು, ಕಾಲನ್ನು ಮೇಲೆತ್ತಿ ಕತ್ತರಿಯಾಕಾರ ಮಾಡುವುದು, ಕಾಲಿನಿಂದ ಸೈಕಲ್ ತುಳಿಯುವಂತೆ ಮಾಡುವುದು, ಈಜುವಂತೆ ಮಾಡುವುದು, ಎರಡೂ ಕಾಲುಗಳನ್ನು ಹತ್ತಿರ ತರುವುದು, ದೂರವಿಡುವುದು, ನಡೆಯುವುದು, ಓಡುವುದು, ಕುಣಿಯುವುದು, ನೆಗೆಯುವುದು ಇತ್ಯಾದಿ.) ಈ ಎಲ್ಲವನ್ನು ಮಾಡುವಾಗ ಲಲಾಲಲಾಲಾ, ತಾತಾತಾತಾ... ಮಾಮಾಮಾಮಾ... ಕಾಕಾಕಾಕಾ ಇತ್ಯಾದಿ ಸದ್ದುಗಳನ್ನು ಮಾಡುತ್ತ ಇಡೀ ಚಟುವಟಿಕೆಯನ್ನು ಮೋಜಿನಿಂದ ಮಾಡಬಹುದು.
8. ಮಕ್ಕಳನ್ನು ಅವರಿರುವ ಜಾಗದಲ್ಲಿಯೇ ಎದ್ದು ನಿಲ್ಲಲು ಹೇಳಬೇಕು.
9. ಮಕ್ಕಳಿಗೆ ಅವರ ಸೊಂಟದತ್ತ ಬೆರಳು ತೋರಿಸಿ, ಅದನ್ನು ಹೆಸರಿಸಲು ಹೇಳಿ (ಸೊಂಟ) ಮತ್ತು ಅದನ್ನು ಅಲ್ಲಾಡಿಸುವುದು. ಮಕ್ಕಳು ಮತ್ತು ಶಿಕ್ಷಕರು ಕಾಲನ್ನು ಅಲ್ಲಾಡಿಸುವ ವಿವಿಧ ವಿಧಾನಗಳನ್ನು ಪ್ರಯತ್ನಿಸಬೇಕು. (ಅಕ್ಕಪಕ್ಕ ಅಲ್ಲಾಡಿಸುವುದು, ಸೊಂಟವನ್ನು ಬಾಗಿಸುವುದು, ವೃತ್ತಾಕಾರ ಮಾಡುವುದು, ಹಿಂದೆ ಮುಂದೆ ಬಾಗಿಸುವುದು ಇತ್ಯಾದಿ)

## ದೇಹದ ವಿವಿಧ ಭಾಗಗಳನ್ನು ಅಲ್ಲಾಡಿಸುವುದು ಅಥವಾ ಓಲಾಡಿಸುವುದು

ಇದೇ ರೀತಿ ಶಿಕ್ಷಕರು ಮತ್ತು ಮಕ್ಕಳು ಈ ಕೆಳಗಿನ ಭಾಗಗಳನ್ನು ಹೆಸರಿಸಿ, ಅಲ್ಲಾಡಿಸಿ, ವಿವಿಧ ರೀತಿಯಲ್ಲಿ ಅಲ್ಲಾಡಿಸಲು ಪ್ರಯತ್ನಿಸಬೇಕು.

1. ಹೊಟ್ಟೆ (ಹೊಟ್ಟೆಯನ್ನು ಒಳಗೆ ಎಳೆದುಕೊಳ್ಳುವುದು, ಮತ್ತು ಹೊರಗೆ)
2. ಬೆನ್ನು (ಮುಂದೆ ಬಾಗುವುದು, ಹಿಂದೆ ಬಾಗುವುದು, ನೆಲದ ಮೇಲೆ ಮಲಗುವುದು)
3. ಬೆರಳುಗಳು (ಮಡಚುವುದು, ತೆರೆಯುವುದು, ಹಿಡಿಯುವುದು, ಬರೆಯುವುದು, ಚಪ್ಪಾಳೆ ಹಾಕುವುದು, ತಟ್ಟುವುದು ಇತ್ಯಾದಿ)
4. ಮಣಿಕಟ್ಟು (ವೃತ್ತಾಕಾರದ ಚಲನೆ)
5. ಮೊಣಕೈ (ಮೇಲೆ, ಕೆಳಗೆ ಮಾಡುವುದು, ವೃತ್ತಾಕಾರ ಮಾಡುವುದು)
6. ಕೈಗಳು (ಬೇರೆಯವರತ್ತ ಕೈ ಬೀಸುವುದು, ಬೇರೆಬೇರೆ ದಿಕ್ಕಿನಲ್ಲಿ ಕೈ ತಿರುಗಿಸುವದುಮ ಈಜುವುದು, ವೃತ್ತಾಕಾರ ಮಾಡುವುದು, ಹೂವು, ಹಾವು ಚಿಟ್ಟೆ ಇತ್ಯಾದಿ ಆಕಾರ ಮಾಡುವುದು.
7. ಭುಜಗಳು (ಮೇಲೆ ಕೆಳಗೆ ಮಾಡುವುದು, ಹಿಂದೆ ಮತ್ತು ಮುಂದೆ ಮಾಡುವುದು)
8. ಎದೆ – ಚೆಂಡಿನ ಹಾಗೆ ಮುದುಡಿಸುವುದು, ಎದೆಯುಬ್ಬಿಸುವುದು, ಉಸಿರನ್ನು ಆಳವಾಗಿ ಒಳಗೆಳೆದುಕೊಳ್ಳುವುದು, ಹೊರಗೆ ಬಿಡುವುದು ಇತ್ಯಾದಿ.
9. ಕುತ್ತಿಗೆ (ವೃತ್ತಾಕಾರ ಚಲನೆ, ಬಾಗಿಸುವುದು, ಹಿಂದೆ, ಮುಂದೆ, ಎಡಕ್ಕೆ ಬಲಕ್ಕೆ, ಅರ್ಧ ವೃತ್ತಾಕಾರ ಮಾಡುವುದು ಇತ್ಯಾದಿ)
10. ಕಣ್ಣುಗಳು (ಕಣ್ಣುಗಳನ್ನು ಸುತ್ತ ತಿರುಗಿಸುವುದು, ಅಕ್ಕಪಕ್ಕ ಅಲ್ಲಾಡಿಸುವುದು, ಮೇಲೆ ಕೆಳಗೆ ನೋಡುವುದು ಇತ್ಯಾದಿ)
11. ತಲೆ (ತಲೆ ಅತ್ತ ಇತ್ತ ಅಲ್ಲಾಡಿಸುವುದು, ಅಕ್ಕ ಪಕ್ಕ ತಿರುಗಿಸುವುದು, ಮೇಲೆ ಕೆಳಗೆ ಮಾಡುವುದು)
12. ಮೂಗು (ಉಸಿರು ಒಳಗೆ ತೆಗೆದುಕೊಳ್ಳುವುದು, ಸೀನುವುದು, ಮೂಗಿನ ಹೊರಳೆಗಳನ್ನು ಅಗಲಿಸುವುದು)
13. ಬಾಯಿ (ಬಾಯಿ ತೆರೆಯುವುದು, ಮುಚ್ಚುವುದು, ನಾಲಿಗೆ ಹೊರಗೆ ಬಿಡುವುದು, ಆಹ್ ಎನ್ನುವುದು, ಓಹ್ ಎನ್ನುವುದು, ಸೊಟ್ಟ ಬಾಯಿ ಮಾಡುವುದು ಇತ್ಯಾದಿ)
14. ಕೂದಲು (ಕೂದಲಲ್ಲಿ ಬೆರಳು ಆಡಿಸುವುದು, ಮೃದುಗೊಳಿಸುವುದು, ಉದ್ದ ಕೂದಲಿದ್ದರೆ ಮೇಲೆ ಕೆಳಗೆ ಮಾಡುವುದು ಇತ್ಯಾದಿ)
15. ಕೆನ್ನೆ (ಕೆನ್ನೆ ಉಬ್ಬಿಸುವುದು, ಒಳಗೆ ಎಳೆದುಕೊಳ್ಳುವುದು)

ಮೇಲೆ ಹೇಳಿದ ಉದಾಹರಣೆಗಳು ಕೇವಲ ಆರಂಭದ ಸಾಧ್ಯತೆಗಳು ಮಾತ್ರ. ದಯವಿಟ್ಟು ಮಕ್ಕಳಿಗೆ ಅವರ ದೇಹವನ್ನು ಬಳಸಿಕೊಂಡು ಇನ್ನಷ್ಟು ಈ ರೀತಿಯ ಚಟುವಟಿಕೆ ಮಾಡಲು ಪ್ರೋತ್ಸಾಹಿಸಿ.

ಚಟುವಟಿಕೆ 2

## ದೇಹದ ಭಾಗಗಳನ್ನು ಮುಟ್ಟುವುದು

### ಕಲಿಕಾ ಬೋಧನಾ ಸಾಮಗ್ರಿಗಳು

ಸಂಗೀತ ಮತ್ತು ಮ್ಯೂಸಿಕ್ ಸಿಸ್ಟಮ್

### ಸೂಚನೆಗಳು

- ಮಕ್ಕಳಿಗೆ ಅವರ ಜೊತೆಗಾರರನ್ನು ಕಂಡುಕೊಳ್ಳುವಂತೆ ಮಾರ್ಗದರ್ಶನ ಮಾಡುವುದು.
- ಮಕ್ಕಳಿಗೆ 'ನಡೆ ಮತ್ತು ನಿಲ್ಲು (ವಾಕ್ & ಫ್ರೀಜ್)' ಮಾಡಲು ಕೆಳಗಿನಂತೆ ಸೂಚನೆಗಳನ್ನು ನೀಡುವುದು.
- ತರಗತಿ ಕೋಣೆಯಲ್ಲಿ ಎಲ್ಲೆಂದರಲ್ಲಿ ಜೊತೆಗಾರರನ್ನು ನಿಲ್ಲಿಸಿ. ಸಂಗೀತವನ್ನು ಹಾಕುವುದು. ಜೊತೆಗಾರರು ತರಗತಿ ಕೋಣೆಯ ಲಭ್ಯವಿರುವ ಜಾಗದಲ್ಲಿಯೇ ಬೇರೆ ಬೇರೆ ರೀತಿಯಲ್ಲಿ ನಡೆದಾಡುತ್ತಿರಲಿ. ಸಂಗೀತ ನಿಂತೊಡನೆ ಮಕ್ಕಳು ಅವರು ಇರುವ ಜಾಗದಲ್ಲಿಯೇ ಅಲ್ಲಾಡದೇ ನಿಲ್ಲಬೇಕು. ಇದು ಒಂದು ಸಾರಿ ಅಂದರೆ ಒಂದು ಸೈಕಲ್. ಹೀಗೆ ಪ್ರತೀ ಸಾರಿ (ಪ್ರತೀ ಸೈಕಲ್) ಮಾಡುವುದನ್ನು 'ನಡೆ ಮತ್ತು ನಿಲ್ಲು (ವಾಕ್ & ಫ್ರೀಜ್)' ಎನ್ನಲಾಗುತ್ತದೆ. ಇದನ್ನು ಹಲವು ಸಲ ಪುನರಾವರ್ತನೆ ಮಾಡಬೇಕು.

**ಮಕ್ಕಳಿಗೆ ಈ ಕೆಳಗಿನ ಸೂಚನೆಗಳನ್ನು ನೀಡುವುದು**

- ಸಂಗೀತವು ಇದ್ದಾಗ ಅವರು ಕೋಣೆಯ ಒಳಗೆ ನಡೆದಾಡುತ್ತಿರಬೇಕು.
- ವೃತ್ತಾಕಾರದಲ್ಲಿ ನಡೆದಾಡಬೇಡಿ, ಕೋಣೆಯ ಎಲ್ಲ ಜಾಗದಲ್ಲಿಯೂ ಆರಾಮಾಗಿ ನಿಮಗೆ ಬೇಕಿರುವಂತೆ ನಡೆದಾಡಿ, ಆದರೆ ಪರಸ್ಪರ ಮುಟ್ಟುವುದು, ಹಿಡಿದುಕೊಳ್ಳುವುದು, ದಬ್ಬುವುದು ಮಾಡಬೇಡಿ, ಯಾರಿಗೂ ನೋವು ಮಾಡಬೇಡಿ.
- ಸಂಗೀತವು ಶುರುವಾದಾಗ ನಡೆದಾಡಿ ಮತ್ತು ಸಂಗೀತವು ನಿಂತಾಗ ಕಲ್ಲಿನಂತೆ ಎಲ್ಲಿದ್ದಾರೆಯೋ ಅಲ್ಲಿಯೇ ನಿಲ್ಲಬೇಕು. ನಿಮ್ಮ ಗೆಳೆಯರ ಅಥವಾ ಶಿಕ್ಷಕರ ಹತ್ತಿರ ಹೋಗಬೇಡಿ, ನೀವು ಎಲ್ಲಿದ್ದೀರೋ ಅಲ್ಲಿಯೇ ನಿಂತುಕೊಳ್ಳಿ.

'ನಡೆ ಮತ್ತು ನಿಲ್ಲು (ವಾಕ್ & ಫ್ರೀಜ್)' ಇದನ್ನು ಮೂರು ಸಲ ಪುನರಾವರ್ತನೆ ಮಾಡಿದ ನಂತರ, ಶಿಕ್ಷಕರು ಈ ನಿರ್ದಿಷ್ಟ ಸೂಚನೆಯನ್ನು ಅವರು ಜೊತೆಗಾರರೊಂದಿಗೆ ಕಲ್ಲಿನಂತೆ ನಿಂತಾಗ ಹೀಗೆ ಮಾಡಬೇಕು ಎಂದು ಹೇಳಿ:

1. ನೀವು ಜೊತೆಗಾರರೊಂದಿಗೆ ಕಲ್ಲಿನಂತೆ ನಿಲ್ಲುವಾಗ, ನಿಮ್ಮ ಮೊಣಕಾಲನ್ನು ನಿಮ್ಮ ಜೊತೆಗಾರರ ಮೊಣಕಾಲಿಗೆ ತಾಕಿಸಿ.
2. ನೀವು ಜೊತೆಗಾರರೊಂದಿಗೆ ಕಲ್ಲಿನಂತೆ ನಿಲ್ಲುವಾಗ, ನಿಮ್ಮ ಕೈ ಬೆರಳುಗಳನ್ನು ನಿಮ್ಮ ಜೊತೆಗಾರರ ಕೈ ಬೆರಳುಗಳಿಗೆ ತಾಕಿಸಿ.
3. ನೀವು ಜೊತೆಗಾರರೊಂದಿಗೆ ಕಲ್ಲಿನಂತೆ ನಿಲ್ಲುವಾಗ, ನಿಮ್ಮ ಮೊಣಕೈಯನ್ನು ನಿಮ್ಮ ಜೊತೆಗಾರರ ಮೊಣಕೈಗೆ ತಾಕಿಸಿ.
4. ನೀವು ಜೊತೆಗಾರರೊಂದಿಗೆ ಕಲ್ಲಿನಂತೆ ನಿಲ್ಲುವಾಗ, ನಿಮ್ಮ ಬೆನ್ನನ್ನು ನಿಮ್ಮ ಜೊತೆಗಾರರ ಬೆನ್ನಿಗೆ ತಾಕಿಸಿ.
5. ನೀವು ಜೊತೆಗಾರರೊಂದಿಗೆ ಕಲ್ಲಿನಂತೆ ನಿಲ್ಲುವಾಗ, ನಿಮ್ಮ ಹಣೆಯನ್ನು ನಿಮ್ಮ ಜೊತೆಗಾರರ ಹಣೆಗೆ ತಾಕಿಸಿ.
6. ನೀವು ಜೊತೆಗಾರರೊಂದಿಗೆ ಕಲ್ಲಿನಂತೆ ನಿಲ್ಲುವಾಗ, ನಿಮ್ಮ ಅಂಗಾಲನ್ನು ನಿಮ್ಮ ಜೊತೆಗಾರರ ಅಂಗಾಲಿಗೆ ತಾಕಿಸಿ.

**ಮಕ್ಕಳು ಸಂಗೀತದ ಜೊತೆ ಹೆಜ್ಜೆ ಹಾಕಿ, ನಂತರ ನಿಂತುಕೊಂಡ ನಂತರ, ಇನ್ನೊಂದು ಮುಂದಿನ ಚಟುವಟಿಕೆ ಶುರು ಮಾಡುವ ಮೊದಲು ಪೂರ್ಣಗೊಳಿಸಿದ ಪ್ರತೀ ಅಂಶವನ್ನೂ ಗುರುತಿಸಿಕೊಳ್ಳಿ.**

ಚಟುವಟಿಕೆ 1

## ವಾಸು ಹೇಳ್ತಾನೆ...

**ಕಲಿಕಾ ಬೋಧನಾ ಸಾಮಗ್ರಿಗಳು:** ಏನೂ ಇಲ್ಲ

### ಸೂಚನೆಗಳು

1. ನಾವೀಗ 'ವಾಸು ಹೇಳ್ತಾನೆ...' ಅಂತ ಒಂದು ತಮಾಷೆಯ ಆಟ ಆಡೋಣ ಎಂದು ಹೇಳುವುದು.
2. ನೀವು ಸರಿಯಾಗಿ ಕಾಣುವಂತೆ ಮತ್ತು ನಿಮ್ಮ ಮಾತು ಕೇಳುವ ರೀತಿಯಲ್ಲಿ ನಿಂತುಕೊಳ್ಳಲು ಮಕ್ಕಳಿಗೆ ಹೇಳುವುದು.
3. 'ನಾವೀಗ ಒಂದು ತಮಾಶೆಯ ಆಟವನ್ನು ಆಡೋಣ. ನಿಮಗೆ ಏನೋ ಮಾಡಲು ಹೇಳುತ್ತೇನೆ, ನೀವು ನಾನು 'ವಾಸು ಹೇಳ್ತಾನೆ' ಅಂತ ಹೇಳಿದಾಗ ಮಾತ್ರ ಮಾಡಬೇಕು.
4. 'ವಾಸು ಹೇಳ್ತಾನೆ... ನಿನ್ನ ಮೂಗು ಮುಟ್ಟು!' ಎಂದು ಹೇಳಿ, ಉತ್ಸಾಹದಿಂದ ನಿಮ್ಮ ಮೂಗು ಮುಟ್ಟಿಕೊಳ್ಳಿ, ಎಲ್ಲ ಮಕ್ಕಳೂ ತಮ್ಮ ಮೂಗು ಮುಟ್ಟಿಕೊಳ್ಳುವುದನ್ನು ಗಮನಿಸಿ.
5. 'ಎರಡು ಸಲ ಚಪ್ಪಾಳೆ ತಟ್ಟಿ!' ಎಂದು ಹೇಳಿ, ಯಾವುದಾದರೂ ಮಗು ಚಪ್ಪಾಳೆ ತಟ್ಟಿದರೆ, ನಕ್ಕು ಹೇಳಿ, 'ನಾನು ವಾಸು ಹೇಳ್ತಾನೆ ಅಂತ ಹೇಳಲಿಲ್ಲ!' ಎಂದು ಹೇಳಿ, ಅವರಿಗೆ ಕುಳಿತುಕೊಳ್ಳಲು ಹೇಳಿ. ಚಪ್ಪಾಳೆ ತಟ್ಟದೇ ಸುಮ್ಮನಿರುವ ಮಗು, ನಿಂತುಕೊಂಡು, ಆಟದಲ್ಲಿ ಮುಂದುವರೆಯಬಹುದು.
6. ಮಕ್ಕಳಿಗೆ ಹೀಗೆ ಏನಾದರೂ ಮಾಡಲು ಸೂಚನೆಗಳನ್ನು ಕೊಡುತ್ತಲೇ ಇರಿ, ಕೆಲವೊಮ್ಮೆ 'ವಾಸು ಹೇಳ್ತಾನೆ' ಎಂದು ಶುರು ಮಾಡಿ, ಕೆಲವೊಮ್ಮೆ ಹಾಗೆ ಹೇಳದೆಯೇ. ಇದನ್ನು 15 ನಿಮಿಷಗಳವರೆಗೆ ಮಾಡಿ ಅಥವಾ ಯಾವುದಾದರೂ ಮಗು ಕೊನೆಯವರೆಗೂ ನಿಲ್ಲುವವರೆಗೆ ಮಾಡಿ. ನಿಮ್ಮ ಧ್ವನಿಯ ಏರಿಳಿತದೊಂದಿಗೆ, ತಮಾಷೆಯಾಗಿ ಇದನ್ನು ಮಾಡಿ, ಸುಮ್ಮನೇ ಅವರಿಗೆ ಆಜ್ಞೆಗಳನ್ನು ಕೊಡುವಂತೆ ಅಲ್ಲ.
7. ಹಲವಾರು ಸಲ ಹೀಗೆ ಮುಟ್ಟಲು ಅಥವಾ ಬೇರೆ ಏನಾದರೂ ಹೇಳುತ್ತ ದೇಹದ ಪ್ರಮುಖ ಭಾಗಗಳು ನಿಮ್ಮ ಈ ಆಟದಲ್ಲಿ ಬರುವಂತೆ ನೋಡಿಕೊಳ್ಳಿ.

ಚಟುವಟಿಕೆ 2

## ಸ್ಟೋನ್ ರೇಸ್

**ಕಲಿಕಾ ಬೋಧನಾ ಸಾಮಗ್ರಿಗಳು:** ಕಲ್ಲುಗಳು

### ಸೂಚನೆಗಳು

1. ತರಗತಿಯಲ್ಲಿ 6 ಮಕ್ಕಳನ್ನು ಒಂದು ಗುಂಪು ಮಾಡಿ.
2. ಐದು ಕಲ್ಲುಗಳನ್ನು ಒಂದು ನೇರವಾದ ಗೆರೆಯಲ್ಲಿ ಸುಮಾರು 3–5 ಅಡಿ ಅಂತರದಲ್ಲಿ ಇರುವಂತೆ ಇಡುವುದು.
3. ಪ್ರತೀ ಗುಂಪಿನ ಕಲ್ಲುಗಳನ್ನು ಸುಮಾರು 20 ಅಡಿಗಳ ದೂರದಲ್ಲಿ ಮೊದಲ ಸಾಲು ಶುರುವಾಗುವಂತೆ ಜೋಡಿಸುವುದು.
4. ನೀವು 'ಹೋಗಿ'/'ಗೋ' ಎಂದು ಹೇಳಿದಾಗ ಮೊದಲ ಪ್ರತೀ ಸಾಲಿನ ಮಗು ಓಡಿಹೋಗಿ, ಕಲ್ಲುಗಳನ್ನು ಆಯ್ದುಕೊಂಡು ಬರಬೇಕು.
5. ಎಲ್ಲ ಐದು ಕಲ್ಲುಗಳನ್ನು ಎತ್ತಿಕೊಂಡು ಬರುವ ಮಗುವಿನ ತಂಡವು ಒಂದು ಪಾಯಿಂಟ್ ಗಳಿಸುತ್ತದೆ.
6. ಕಲ್ಲುಗಳನ್ನು ಬದಲಿಸಿ ಮತ್ತು ಮುಂದಿನ ಜೋಡಿ ಮಕ್ಕಳ ಜೊತೆ ಇದೇ ರೇಸ್ ಆಡುವುದು.
7. ಗರಿಷ್ಠ ಪಾಯಿಂಟ್‌ಗಳನ್ನು ಗಳಿಸಿದ ತಂಡವು ರೇಸ್ ಗೆಲ್ಲುವುದು.

ಚಟುವಟಿಕೆ 3

## ಮ್ಯೂಸಿಕಲ್ ಛೇರ್

### ಕಲಿಕಾ ಬೋಧನಾ ಸಾಮಗ್ರಿಗಳು:

ಕುರ್ಚಿಗಳು ಮತ್ತು ಸಂಗೀತದ/ಮ್ಯೂಸಿಕ್ ವ್ಯವಸ್ಥೆ

### ಸೂಚನೆಗಳು

1. ಕುರ್ಚಿಗಳನ್ನು ವೃತ್ತಾಕಾರವಾಗಿ, ಅವುಗಳ ಮುಖ ಹೊರಗೆ ಇರುವಂತೆ ಜೋಡಿಸುವುದು. ಒಟ್ಟು ಮಕ್ಕಳ ಸಂಖ್ಯೆಗಿಂತ ಒಂದು ಕುರ್ಚಿ ಕಡಿಮೆ ಇರಬೇಕು. ಒಬ್ಬರು ಹೆಚ್ಚುವರಿ ಆಟಗಾರರು ಅಗತ್ಯವಿದ್ದು, ಅವರು ಸಂಗೀತದ ವ್ಯವಸ್ಥೆ ನೋಡಿಕೊಳ್ಳಬೇಕು.
2. ಸಂಗೀತ ಶುರುವಾದೊಡನೆ, ಆಟಗಾರರು ಕುರ್ಚಿಯ ಸುತ್ತಲೂ ನಡೆಯುತ್ತಿರಬೇಕು.
3. ಸಂಗೀತ ನಿಂತೊಡನೆ, ಮಕ್ಕಳು ಹತ್ತಿರದ ಕುರ್ಚಿಯಲ್ಲಿ ತಟ್ಟನೆ ಕೂರಬೇಕು.
4. ಕುರ್ಚಿ ಸಿಗದೇ ಇರುವ ಒಂದು ಮಗು ಔಟ್, ಆಟದಿಂದ ಹೊರಗೆ ಹೋಗುವುದು.
5. ಆಗ ಒಂದು ಕುರ್ಚಿ ತೆಗೆದು, ಮತ್ತೆ ಆಟವನ್ನು ಮುಂದುವರೆಸಬೇಕು. ಇದೇ ರೀತಿ ಒಂದೊಂದು ಮಗು ಔಟ್ ಆದಾಗಲೂ ಒಂದೊಂದು ಕುರ್ಚಿ ತೆಗೆದಿಟ್ಟು, ಆಟವನ್ನು ಮುಂದುವರೆಸಬೇಕು. ಕೊನೆಗೆ ಉಳಿದಿರುವ ಇಬ್ಬರು ಮಕ್ಕಳಲ್ಲಿ ಕುರ್ಚಿಯ ಮೇಲೆ ಕುಳಿತುಕೊಳ್ಳುವ ಮಗು, ಗೆದ್ದಂತೆ.

---

ಚಟುವಟಿಕೆ 4

## ಬಾಗಿಲಲ್ಲಿ ಯಾರು ಇದ್ದಾರೆ?

### ಕಲಿಕಾ ಫಲಿತಗಳು

ಮಕ್ಕಳು ತಮ್ಮ ಸಹಪಾಠಿಯ ಧ್ವನಿಯನ್ನು ಗುರುತಿಸುತ್ತಾರೆ.

**ಕಲಿಕಾ ಬೋಧನಾ ಸಾಮಗ್ರಿಗಳು:** ಏನೂ ಇಲ್ಲ.

### ಸೂಚನೆಗಳು

1. ಎಲ್ಲ ಮಕ್ಕಳನ್ನೂ ಅರ್ಧವೃತ್ತಾಕಾರವಾಗಿ ಕೂರಿಸುವುದು ಮತ್ತು ಒಂದು ಮಗುವಿಗೆ ನಾಯಕಿ/ಲೀಡರ್ ಆಗುವಂತೆ ಹೇಳುವುದು.
2. ಆ ಮಗು ಉಳಿದ ಎಲ್ಲ ಮಕ್ಕಳ ಬೆನ್ನ ಹಿಂದೆ ಆ ಕಡೆ ಮುಖ ಮಾಡಿ ನಿಲ್ಲಬೇಕು.
3. ಶಿಕ್ಷಕರು ಒಂದು ಮಗುವನ್ನು ತಟ್ಟುವುದು ಮತ್ತು ಆ ಮಗು ಎದ್ದು ನಿಂತು, ನೆಲದ ಮೇಲೆ ಇಟ್ಟಿರುವ ಕಡ್ಡಿಯೊಂದನ್ನು ತಟ್ಟುವುದು ಅಥವಾ ಮೇಜನ್ನು ಒಮ್ಮೆ ಬಡಿಯುವುದು.
4. ನಾಯಕಿ 'ಬಾಗಿಲಿನಲ್ಲಿ ಯಾರಿದ್ದಾರೆ' ಎಂದು ಕೇಳುವುದು. ನೆಲವನ್ನು ತಟ್ಟಿದ ಮಗು, 'ನಾನಿದ್ದೇನೆ, ಬಾಗಿಲು ತೆಗೆ' ಎಂದು ಹೇಳಬೇಕು.
5. ಆಗ ನಾಯಕಿಯು ಯಾರು ಬಾಗಿಲಲ್ಲಿ ನಿಂತ ಅತಿಥಿ ಎಂದು ಧ್ವನಿಯನ್ನು ಊಹಿಸಿ ಹೇಳುವುದು.
6. ಮೂರು ಸಲ ಅವಕಾಶ ಕೊಡಬೇಕು, ಮೂರನೇ ಸಲವೂ ಆಕೆ ಸರಿಯಾಗಿ ಊಹಿಸಲು ಸೋತರೆ, ಅತಿಥಿಯಾಗಿದ್ದ ಮಗುವು ನಾಯಕಿ ಆಗುವುದು. ಆಟವನ್ನು ಹೀಗೆಯೇ ಮುಂದುವರೆಸಬೇಕು.

## ಸಂಪೂರ್ಣ ದೈಹಿಕ ಪ್ರತಿಕ್ರಿಯೆ (ಟೋಟಲ್ ಫಿಸಿಕಲ್ ರೆಸ್ಪಾನ್ಸ್ – ಟಿಪಿಆರ್)

# ನನ್ನ ದೇಹ

### ಕಲಿಕಾ ಫಲಿತಗಳು

ಮೊದಲ ತಿಂಗಳಿನ ಕೊನೆಯಲ್ಲಿ ಮಕ್ಕಳು ಈ ಕೆಳಗಿನ 6 ಇಂಗ್ಲೀಷ್ ಸರಳ ಸೂಚನೆಗಳಿಗೆ ಪ್ರತಿಕ್ರಯಿಸಲು ಮತ್ತು ಅವನ್ನು ಅನುಸರಿಸಲು ಸಮರ್ಥರಾಗುತ್ತಾರೆ.

### ಕಲಿಕಾ ಬೋಧನಾ ಸಾಮಗ್ರಿಗಳು

ಶಿಕ್ಷಕರ ಕಾರ್ಡುಗಳು





## ನಾನು ಮತ್ತು ನನ್ನ ಸುತ್ತಲಿರುವುದು

# ನನ್ನ ಕುಟುಂಬ







# ಕಲಿಕಾ ಫಲಿತಗಳು

## ಉಪವಿಷಯ 1.3: ನನ್ನ ಕುಟುಂಬ

| 3–4 ವರ್ಷಗಳು | 4–5 ವರ್ಷಗಳು | 5–6 ವರ್ಷಗಳು |
|---|---|---|
| 1 ತಮ್ಮ ಅಪ್ಪ, ಅಮ್ಮನ ಹಿರಿಯ ಮತ್ತು ಕಿರಿಯ ಒಡಹುಟ್ಟಿದವರೂ ಸೇರಿದಂತೆ, ಕುಟುಂಬದ ವಿವಿಧ ಸದಸ್ಯರನ್ನು ಗುರುತಿಸಿ, ಹೆಸರಿಸುತ್ತಾರೆ. | 1 ಕುಟುಂಬದ ಸದಸ್ಯರ (ಪೋಷಕರು ಮತ್ತು ಒಡಹುಟ್ಟಿದವರು) ಮತ್ತು ಅಜ್ಜ, ಅಜ್ಜಿಯರ ಹೆಸರೂ ಸೇರಿದಂತೆ ವಿಸ್ತರಿತ ಕುಟುಂಬದ ಸದಸ್ಯರ ಹೆಸರುಗಳನ್ನು ಗುರುತಿಸುತ್ತಾರೆ ಮತ್ತು ತಮ್ಮ ಕುಟುಂಬದ ಕುರಿತು 2–3 ವಾಕ್ಯಗಳಲ್ಲಿ ವಿವರಿಸಬಲ್ಲರು. | 1 ಚಿಕ್ಕಪ್ಪ, ಚಿಕ್ಕಮ್ಮ, ದೊಡ್ಡಪ್ಪ, ದೊಡ್ಡಮ್ಮ, ಅತ್ತೆ, ಮಾವಂದಿರು ಸೇರಿದಂತೆ ವಿಸ್ತರಿತ ಕುಟುಂಬದ ಸದಸ್ಯರ ಹೆಸರುಗಳನ್ನು ಗುರುತಿಸುತ್ತಾರೆ. |
| 2 ಪೋಷಕರ ಹೆಸರು ತಿಳಿದಿರುವುದು ಏಕೆ ಮುಖ್ಯವಾದ ಮಾಹಿತಿ ಎಂದು ಅರಿಯುತ್ತಾರೆ. | 2 ಕುಟುಂಬದ ವಿವಿಧ ಸದಸ್ಯರು ವಹಿಸುವ ಪಾತ್ರಗಳನ್ನು ಮತ್ತು ಅವರ ಜವಾಬ್ದಾರಿಗಳನ್ನು ತಿಳಿದಿರುತ್ತಾರೆ. | 2 ಕುಟುಂಬಗಳು ವಿವಿಧ ಸದಸ್ಯರು ಮತ್ತು ಗಾತ್ರಗಳನ್ನು ಹೊಂದಿರಬಹುದು ಎಂದು ಅರ್ಥ ಮಾಡಿಕೊಳ್ಳುತ್ತಾರೆ. |
| | 3 ಪೋಷಕರು ತಮ್ಮ ಮಕ್ಕಳ ಕುರಿತು ಕಾಳಜಿ ಮಾಡುತ್ತಾರೆ ಮತ್ತು ಪ್ರೀತಿಸುತ್ತಾರೆ ಎಂಬುದನ್ನು ಅರ್ಥ ಮಾಡಿಕೊಳ್ಳುತ್ತಾರೆ ಮತ್ತು ಮೆಚ್ಚುತ್ತಾರೆ. | 3 ಹಿರಿಯರಿಗೆ ಗೌರವವನ್ನು ಮತ್ತು ಬೇರೆಯವರ ವಸ್ತುಗಳಿಗೆ ಗೌರವವನ್ನು ತೋರಿಸಲು ಕಲಿಯುತ್ತಾರೆ ಮತ್ತು ಕುಟುಂಬದ ಸದಸ್ಯರನ್ನು ಸ್ವಾಗತಿಸುತ್ತಾರೆ. |
| | 4 ಕುಟುಂಬದ ಸದಸ್ಯರಾಗಿ ತಮ್ಮ ಪಾತ್ರಗಳನ್ನು ಮತ್ತು ಅವರ ಜವಾಬ್ದಾರಿಗಳನ್ನು ತಿಳಿದಿರುತ್ತಾರೆ. | |

ಉಪವಿಷಯ 1.3

# ನನ್ನ ಕುಟುಂಬ



## ಕಲಿಕಾ ಉದ್ದೇಶಗಳು

ಈ ಅಧ್ಯಾಯದ ಕೊನೆಯಲ್ಲಿ ಮಕ್ಕಳು ಈ ಕೆಳಗಿನ ಸಾಮರ್ಥ್ಯಗಳನ್ನು ಗಳಿಸಿರುತ್ತಾರೆ –

- ಕುಟುಂಬದ ಸದಸ್ಯರ (ಪೋಷಕರು ಮತ್ತು ಒಡಹುಟ್ಟಿದವರು) ಮತ್ತು ಅಜ್ಜ, ಅಜ್ಜಿಯರ ಹೆಸರೂ ಸೇರಿದಂತೆ ವಿಸ್ತರಿತ ಕುಟುಂಬದ ಸದಸ್ಯರ ಹೆಸರುಗಳನ್ನು ಗುರುತಿಸುತ್ತಾರೆ ಮತ್ತು ತಮ್ಮ ಕುಟುಂಬದ ಕುರಿತು 2–3 ವಾಕ್ಯಗಳಲ್ಲಿ ವಿವರಿಸಬಲ್ಲರು.
- ಕುಟುಂಬದ ವಿವಿಧ ಸದಸ್ಯರು ವಹಿಸುವ ಪಾತ್ರಗಳನ್ನು ಮತ್ತು ಅವರ ಜವಾಬ್ದಾರಿಗಳನ್ನು ತಿಳಿದಿರುತ್ತಾರೆ.
- ಪೋಷಕರು ತಮ್ಮ ಮಕ್ಕಳ ಕುರಿತು ಕಾಳಜಿ ಮಾಡುತ್ತಾರೆ ಮತ್ತು ಪ್ರೀತಿಸುತ್ತಾರೆ ಎಂಬುದನ್ನು ಅರ್ಥ ಮಾಡಿಕೊಳ್ಳುತ್ತಾರೆ ಮತ್ತು ಮೆಚ್ಚುತ್ತಾರೆ.
- ಕುಟುಂಬದ ಸದಸ್ಯರಾಗಿ ತಮ್ಮ ಪಾತ್ರಗಳನ್ನು ಮತ್ತು ಅವರ ಜವಾಬ್ದಾರಿಗಳನ್ನು ತಿಳಿದಿರುತ್ತಾರೆ.

ಸಂಭಾಷಣೆ 1

## ಕುಟುಂಬದ ಪಾತ್ರಗಳು ಮತ್ತು ಜವಾಬ್ದಾರಿಗಳು



### ಕಲಿಕಾ ಫಲಿತಗಳು

- ಮಕ್ಕಳು ಕುಟುಂಬದ ಪರಿಕಲ್ಪನೆಯನ್ನು ಅರಿಯುತ್ತಾರೆ ಮತ್ತು ತಮ್ಮ ಪೋಷಕರ, ಒಡಹುಟ್ಟಿದವರ ಹೆಸರುಗಳನ್ನು ತಿಳಿಯುತ್ತಾರೆ.
- ಮಕ್ಕಳು ತಮ್ಮ ಕುಟುಂಬದ ಪ್ರತಿಯೊಂದು ಸದಸ್ಯರು ಹೇಗೆ ಪರಸ್ಪರ ಸಹಾಯ ಮಾಡುತ್ತಾರೆ ಅಥವಾ ಪರಸ್ಪರ ಏನು ಮಾಡುತ್ತಾರೆ ಎಂದು ಹೇಳಬಲ್ಲರು.

**ಕಲಿಕಾ ಬೋಧನಾ ಸಾಮಗ್ರಿಗಳು:** ಏನೂ ಇಲ್ಲ

### ಶಿಕ್ಷಕರ ಪೂರ್ವಸಿದ್ಧತೆ

ತರಗತಿ ಶುರುವಾಗುವುದಕ್ಕೆ ಮೊದಲು ಸಂಭಾಷಣೆಯ ಪ್ರಶ್ನೆಗಳನ್ನು ಅಭ್ಯಾಸ ಮಾಡಿಕೊಳ್ಳುವುದು.

### ಸೂಚನೆಗಳು

ಹಂತ 1: **ನಾನು ಯಾರು**?

1. ಒಂದು ಊಹಿಸುವ ಆಟ ಆಡುವುದು: ಉದಾ – 'ನಂಗೆ ಶಾಲೆಗೆ ಹೋಗಲಿಕ್ಕೆ ಸಿದ್ಧವಾಗೋದಕ್ಕೆ ಸಹಾಯ ಮಾಡೋ ಒಬ್ಬರು ಕುಟುಂಬದ ಸದಸ್ಯರ ಬಗ್ಗೆ ನಾನು ಯೋಚಿಸ್ತಾ ಇದ್ದೀನಿ, ನಂಗೆ ಸ್ನಾನ ಮಾಡಿಸಿ, ಹಲ್ಲು ತಿಕ್ಕೋದಕ್ಕೆ ಸಹಾಯ ಮಾಡೋವ್ರು, ಅಡುಗೆ ಮಾಡೋವ್ರು... ಯಾರು ಅವರು ಹೇಳಿ?
2. ಒಬ್ಬರು ದಿನದಲ್ಲಿ ತುಂಬ ಹೊತ್ತು ಮಲಗಿರ್ತಾರೆ, ಹಸಿವೆಯಾಗ್ತಿದೆ ಅಂತ ಅಳ್ತಾರೆ, ಅವ್ರಿಗೆ ಅಮ್ಮನೇ ಊಟ ಮಾಡಿಸ್ಬೇಕು, ಅವ್ರು ಯಾರು ಹೇಳಿ?
3. ಇದೇ ರೀತಿ ತಂದೆ, ಸಹೋದರರು, ಸಹೋದರಿಯರು, ಅಜ್ಜ, ಅಜ್ಜಿ, ಇವರೆಲ್ಲರಿಗೆ ಹೊಂದುವ ವಿವರಣೆಯನ್ನು ಇಟ್ಟುಕೊಂಡು, ಯಾರು ಹೇಳಿ ಎಂದು ಕೇಳುವುದು.
4. ಮನೆಯಲ್ಲಿ ಬೇರೆ ಬೇರೆ ಸದಸ್ಯರು ವಿಭಿನ್ನ ಕೆಲಸ ಮಾಡುತ್ತಿರೋದ್ರಿಂದ, ಇದರಲ್ಲಿ ಯಾವುದೂ ಸರಿ, ತಪ್ಪು ಎನ್ನುವ ಉತ್ತರಗಳಿಲ್ಲ. ಮಗು ನನ್ನ ತಾಯಿ ಅಥವಾ ತಂದೆ ಎಂದು ಹೇಳುತ್ತಿರುವ ಹಾಗೆ, ನಿಮ್ಮ ತಾಯಿ ಮತ್ತೇನು ಮಾಡುತ್ತಾರೆ ಎಂದು ಸಾಕಷ್ಟು ಮಕ್ಕಳಿಗೆ ಉತ್ತರ ಹೇಳಲು ಆಸ್ಪದ ಕೊಡುವುದು. ಎಷ್ಟು ಜನರ ಮನೆಯಲ್ಲಿ ಅಜ್ಜ, ಅಜ್ಜಿ ಅವರೊಂದಿಗೆ ಇದ್ದಾರೆ ಎಂದು ಕೇಳುವುದು. ಎಲ್ಲ ಮಕ್ಕಳು ಉತ್ತರಿಸಲು ಅವಕಾಶ ಸಿಗುವಂತೆ ಸಂಭಾಷಣೆಯನ್ನು ವಿಸ್ತರಿಸಿ.
5. ಮಕ್ಕಳು ಹೇಳಿದ ಕುಟುಂಬದ ಎಲ್ಲ ಸದಸ್ಯರನ್ನು ಹೆಸರಿಸುತ್ತ, ಅವರು ಮಗುವಿಗೆ ನೀಡುವ ಕಾಳಜಿ, ಪ್ರೀತಿಯೂ ಸೇರಿದಂತೆ ಅವರೆಲ್ಲರ ಪಾತ್ರಗಳ ಕುರಿತು ಹೇಳುತ್ತ, ಸಂಭಾಷಣೆಯನ್ನು ಸಾರಾಂಶೀಕರಿಸಿ. ಯಾವುದೇ ಲಿಂಗಕ್ಕೆ ಇಂಥದ್ದೇ ಕೆಲಸ ಮಾಡಬೇಕು ಎಂಬುದಿಲ್ಲ ಎನ್ನುವುದನ್ನು ನೆನಪಿಸಿ, ತಂದೆ ಅಡುಗೆ ಮಾಡಬಹುದು, ಬಟ್ಟೆ ಒಗೆಯಬಹುದು, ಪಾತ್ರೆ ತೊಳೆಯಬಹುದು. ಏನೇ ಕೆಲಸ ಮಾಡಿದರೂ ಪರವಾಗಿಲ್ಲ ಎಂದು ಶಿಕ್ಷಕಿ ಎನ್ನಬೇಕು, ಆದರೆ 'ಓ, ಹಾಗಿದ್ರೆ ನಿಮ್ಮ ತಾಯಿ ಏನು ಮಾಡುತ್ತಾರೆ' ಎಂದೆಲ್ಲ ಕೇಳಬಾರದು. ಲಿಂಗಬೇಧವಿಲ್ಲದೇ ಎಲ್ಲರೂ ಮನೆಗೆಲಸದಲ್ಲಿ ತೊಡಗಿಕೊಳ್ಳಬೇಕು ಎಂಬುದನ್ನು ಮಕ್ಕಳಿಗೆ ಎಳೆವೆಯಿಂದಲೇ ಕಲಿಸುವುದು ಬಹುಮುಖ್ಯ. ಅಪ್ಪ/ಪುರುಷರು ಮನೆಗೆಲಸ ಮಾಡಬಾರದು, ಹೆಂಗಸರು ಮಾತ್ರ ಮನೆಗೆಲಸ ಮಾಡಬೇಕು ಎಂಬ ರೂಢಿಗತವಾದ ಭಾವನೆಯನ್ನು ಮಕ್ಕಳ ಮನಸ್ಸಿನಲ್ಲಿ ಕೂರಿಸಬಾರದು.

ಹಂತ 2: **ನನ್ನ ಕುಟುಂಬಕ್ಕೆ/ಮನೆಗೆ ನಾನು ಹೇಗೆ ಸಹಾಯ ಮಾಡುವುದು**?

1. ಕುಟುಂಬದ ಸದಸ್ಯರು ಅವರಿಗೆ ಸಹಾಯ ಮಾಡುವಂತೆ ಅವರೂ ಕೂಡ ಕುಟುಂಬದವರಿಗೆ ಏನಾದರೂ ಮಾಡಬೇಕು ಎಂದು ಮಕ್ಕಳಿಗೆ ಹೇಳುವುದು.
2. ಮನೆಗೆ ಹೋದ ನಂತರ ಕುಟುಂಬದವರಿಗೆ ಏನಾದರೂ ಕೆಲಸ ಮಾಡಿಕೊಡಲು ಮಕ್ಕಳಿಗೆ ಹೇಳುವುದು – ತಮ್ಮ ತಾಯಿ ಅಥವಾ ತಂದೆ ಅಥವಾ ತಮ್ಮ, ತಂಗಿಗೆ ಏನಾದರೂ ಸಹಾಯ ಮಾಡಲು ಹೇಳುವುದು. (ಸಾಧ್ಯವಿದ್ದೆಡೆ ಪೋಷಕರಿಗೂ ಮನೆಗೆಲಸಕ್ಕೆ ಮಗು ಸಹಾಯ ಮಾಡುವುದರ ಕುರಿತು ಹೇಳಿ)
3. ಮರುದಿನ ಪ್ರತಿಯೊಂದು ಮಗುವಿಗೆ ಅವರು ಮನೆಯಲ್ಲಿ ಏನು ಸಹಾಯ ಮಾಡಿದರು ಎಂದು ನೆನಪಿಸಿಕೊಂಡು ಹೇಳುವಂತೆ ಕೇಳುವುದು.
4. ಮಕ್ಕಳು ಪ್ರತಿಕ್ರಿಯೆಗಳನ್ನು ಕೇಳಿದ ನಂತರ, ಅವರು ಏನಾದರೂ ಬಿಟ್ಟಿದ್ದರೆ ಅದನ್ನು ಸೇರಿಸುತ್ತ ಸಾರಾಂಶಗೊಳಿಸುವುದು.


## ಮುಕ್ತ ಮತ್ತು ಮಾರ್ಗದರ್ಶಿತ ಸಂಭಾಷಣೆ

### ಸಂಭಾಷಣೆ 2

## ಮನೆ ಕುಟುಂಬ ಮತ್ತು ಸಂಬಂಧಗಳು

### ಕಲಿಕಾ ಫಲಿತಗಳು

ಮಕ್ಕಳು ತಮ್ಮ ಕುಟುಂಬವನ್ನು 2–3 ವಾಕ್ಯಗಳಲ್ಲಿ ವಿವರಿಸುತ್ತಾರೆ. ಮನೆಯಲ್ಲಿರುವ ವಿವಿಧ ವ್ಯಕ್ತಿಗಳ ನಡುವಣ ಸಂಬಂಧವನ್ನು ಅರ್ಥ ಮಾಡಿಕೊಂಡು, ಅವನ್ನು ಹೆಸರಿಸುತ್ತಾರೆ. ಸಂಬಂಧಗಳನ್ನು ಆಧರಿಸಿ, ವ್ಯಕ್ತಿಗಳನ್ನು ಏನೆಂದು ಕರೆಯುವುದು ಎಂದು ಅರಿಯುತ್ತಾರೆ.




### ಕಲಿಕಾ ಬೋಧನಾ ಸಾಮಗ್ರಿಗಳು

ಸಂಭಾಷಣೆ ಚಾರ್ಟ್ – ಕುಟುಂಬದ ಚಿತ್ರ, ಕೆಲವು ಸಾಕುಪ್ರಾಣಿಗಳು, ಅಕ್ಕಪಕ್ಕದವರು ಮತ್ತು ಬೀದಿಯಲ್ಲಿ ಮಾರುವವರು ಇರುವ ಒಂದು ಫೋಟೋ.

### ಶಿಕ್ಷಕರ ಪೂರ್ವಸಿದ್ಧತೆ

ಕಲಿಕಾ ಸಾಮಗ್ರಿಯನ್ನು ಸಿದ್ಧವಾಗಿಟ್ಟುಕೊಳ್ಳುವುದು.

### ಸೂಚನೆಗಳು

**ಹಂತ 1: ಮನೆಯ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳುವುದು**

1. ಮಕ್ಕಳಿಗೆ ಹಿಂದಿನ ಸಂಭಾಷಣೆಯನ್ನು ನೆನಪಿಸುತ್ತ, ಅವರ ಮನೆಯಲ್ಲಿ ಅವರೊಂದಿಗೆ ಯಾರ‍್ಯಾರು ಇರುತ್ತಾರೆ ಎಂದು ಕೇಳುವುದು.
2. ಈಗ ಮಕ್ಕಳಿಗೆ ಇಂತಹ ಪ್ರಶ್ನೆಗಳನ್ನು ಕೇಳುವುದು – ನಿಮ್ಮ ಮನೆಯಲ್ಲಿ ಯಾವುದಾದರೂ ಪ್ರಾಣಿ ಇದೆಯಾ? ಯಾರ‍್ಯಾರ ಮನೆಯಲ್ಲಿ ಪ್ರಾಣಿ ಇದೆ? ಅವುಗಳ ಬಗ್ಗೆ ಹೇಳ್ತೀರಾ? ಮಕ್ಕಳಿಗೆ ಮನೆಯಲ್ಲಿರುವ ಸಾಕು ಪ್ರಾಣಿಗಳ ಬಗ್ಗೆ ಮಾತನಾಡಲು ಬಿಡಿ.
3. ಇಬ್ಬರು ಮಕ್ಕಳನ್ನು ಮುಂದೆ ತನ್ನಿ, ನಂತರ ಕೇಳಿ, "ಇವ್ರು ಇಬ್ಬರೂ ಒಂದೇ ಮನೆಯಲ್ಲಿ ಇರುತ್ತಾರಾ?" ಯಾಕೆ ಇಲ್ಲ? ಮಕ್ಕಳಿಗೆ ಉತ್ತರಗಳನ್ನು ಹೇಳಲು ಅಸ್ಪದ ಕೊಡುವುದು. ಅವರಿಗೆ ಇನ್ನೂ ಪ್ರಶ್ನೆಗಳನ್ನು ಕೇಳುವುದು, "ನಿಮ್ಮ ಗೆಳತಿಯ ತಾಯಿ ನಿಮ್ಮ ಮನೆಯಲ್ಲಿ ಇರುತ್ತಾರಾ?" ಯಾಕೆ ಇಲ್ಲ? ಮಕ್ಕಳಿಗೆ ಅವರದೇ ಉತ್ತರಗಳನ್ನು ಹೇಳಲು ಆಸ್ಪದ ಕೊಡುವುದು. ಅವರ ಉತ್ತರಗಳನ್ನು ಸಾರಾಂಶೀಕರಿಸುತ್ತ, ಒಂದು ಕುಟುಂಬದ ಸದಸ್ಯರು ಮಾತ್ರ ಒಂದು ಮನೆಯಲ್ಲಿ ಒಟ್ಟಿಗೆ ಇರುತ್ತಾರೆ ಎಂದು ವಿವರಿಸುವುದು.
4. ಮಕ್ಕಳಿಗೆ ಸಂಭಾಷಣೆ ಕಾರ್ಡು ತೋರಿಸುವುದು ಮತ್ತು ಕಾರ್ಡಿನಲ್ಲಿರುವ ವ್ಯಕ್ತಿ/ಪ್ರಾಣಿಗಳನ್ನು ಗಮನಿಸಿ, ಹೆಸರಿಸಲು ಹೇಳುವುದು, ಯಾರು ಒಂದು ಮನೆಯಲ್ಲಿ ಒಟ್ಟಿಗೇ ಇರಬಹುದು ಎಂದು ಕೇಳುವುದು. ಚಿತ್ರದಲ್ಲಿ ಇನ್ನುಳಿದ ವ್ಯಕ್ತಿಗಳನ್ನು ತೋರಿಸುತ್ತ, ಈ ವ್ಯಕ್ತಿ ಈ ಮನೆಯವರೊಂದಿಗೆ ಇರಬಹುದೇ, ಎಂದು ಕೇಳುತ್ತ ಹೋಗಿ. ಏಕೆ ಇರಬಹುದು ಅಥವಾ ಏಕೆ ಇರಬಾರದು ಎಂದು ಕೇಳುವುದು.

**ಹಂತ 2: ಅವರ ಕುಟುಂಬದ ಕುರಿತು ಮಾತನಾಡುವುದು**

1. ನಿಮ್ಮ ಕುಟುಂಬವನ್ನು ಎರಡು ಮೂರು ವಾಕ್ಯಗಳಲ್ಲಿ ವಿವರಿಸುತ್ತ ಸಂಭಾಷಣೆ ಶುರು ಮಾಡುವುದು.
2. ಈಗ ಮಕ್ಕಳಿಗೆ ಅವರ ಕುಟುಂಬದ ಬಗ್ಗೆ 2–3 ವಾಕ್ಯಗಳಲ್ಲಿ ಹೇಳುವಂತೆ ತಿಳಿಸುವುದು.

ಸಂಭಾಷಣೆ 3

# ಕುಟುಂಬದ ಗಾತ್ರ ಮತ್ತು ಹೆಸರುಗಳು




## ಕಲಿಕಾ ಫಲಿತಗಳು

ಮಕ್ಕಳು ವಿಸ್ತರಿತ ಕುಟುಂಬದ ಪರಿಕಲ್ಪನೆಯನ್ನು ಮತ್ತು ಕುಟುಂಬದ ಸದಸ್ಯರ ಕುರಿತು ಅರಿಯುತ್ತಾರೆ.

## ಕಲಿಕಾ ಬೋಧನಾ ಸಾಮಗ್ರಿಗಳು

**ಸಂಭಾಷಣೆ ಚಾರ್ಟ್ – 3 ರೀತಿಯ** ಕುಟುಂಬಗಳು ಫೋಟೋಗೆ ನಿಂತಿರುವುದು – ಸಣ್ಣ ವಿಭಕ್ತ ಕುಟುಂಬ, ಅಜ್ಜ, ಅಜ್ಜಿ ಇರುವ ವಿಸ್ತರಿತ ಕುಟುಂಬ ಮತ್ತು ಚಿಕ್ಕಪ್ಪ, ದೊಡ್ಡಪ್ಪ, ಚಿಕ್ಕಮ್ಮ, ದೊಡ್ಡಮ್ಮ, ಮುದ್ದಿನ ಪ್ರಾಣಿಗಳು ಇರುವ ದೊಡ್ಡ ಕುಟುಂಬ

## ಶಿಕ್ಷಕರ ಪೂರ್ವಸಿದ್ಧತೆ

ತರಗತಿ ಶುರುವಾಗುವುದಕ್ಕೆ ಮೊದಲು ಸಂಭಾಷಣೆಯ ಪ್ರಶ್ನೆಗಳನ್ನು ಅಭ್ಯಾಸ ಮಾಡಿಕೊಳ್ಳುವುದು.

## ಸೂಚನೆಗಳು

### ಹಂತ 1

1. ಕುಟುಂಬದ ಚಾರ್ಟ್ ತೋರಿಸಿ. ಮಕ್ಕಳಿಗೆ ಇವು ಒಂದು ಮನೆಯಲ್ಲಿ ವಾಸಿಸುತ್ತಿರುವ ಕುಟುಂಬಗಳು, ಬೇರೆ ಬೇರೆ ಸದಸ್ಯರು ಇರುವ ಫೋಟೋಗಳು ಇವೆ. ಈ ಕುಟುಂಬಗಳ ನಡುವೆ ಏನು ವ್ಯತ್ಯಾಸವಿದೆ? ಮಕ್ಕಳಿಗೆ ಅವರದೇ ಉತ್ತರಗಳನ್ನು ಹೇಳಲು ಆಸ್ಪದ ನೀಡುವುದು – ಹೆಚ್ಚು ಜನ ಇದಾರೆ/ ದೊಡ್ಡ ಕುಟುಂಬ ಇತ್ಯಾದಿ.
2. ನಂತರ ಪ್ರತಿಯೊಂದು ಕುಟುಂಬದ ಚಿತ್ರಕ್ಕೆ ಹೋಗುವುದು. ಮೊದಲು ವಿಭಕ್ತ ಕುಟುಂಬದಿಂದ ಶುರು ಮಾಡಿ, ಮಕ್ಕಳಿಗೆ ಫೋಟೋದಲ್ಲಿರುವ ವ್ಯಕ್ತಿಗಳನ್ನು ಹೆಸರಿಸಲು, ಅವರು ಯಾರೆಂದು ಕೇಳುವುದು. ಪ್ರತೀ ಸದಸ್ಯರನ್ನು ಹೆಸರಿಸಲು ಕೇಳುವುದು.
3. ಇದೇ ಚಟುವಟಿಕೆಯನ್ನು ವಿಸ್ತರಿತ ಕುಟುಂಬಕ್ಕೂ ಮಾಡುವುದು. ಮಕ್ಕಳಿಗೆ ಅಜ್ಜ, ಅಜ್ಜಿ ಸೇರಿದಂತೆ ಪ್ರತಿಯೊಂದು ಸದಸ್ಯರನ್ನು ಹೆಸರಿಸಲು ಹೇಳುವುದು. ವಿಭಕ್ತ ಮತ್ತು ವಿಸ್ತರಿತ ಕುಟುಂಬದ ನಡುವಣ ವ್ಯತ್ಯಾಸಗಳ ಕುರಿತು ಮತ್ತು ವಿಸ್ತರಿತ ಕುಟುಂಬದಲ್ಲಿ ಹೆಚ್ಚುವರಿಯಾಗಿ ಯಾರಿದ್ದಾರೆ ಎಂದು ಚರ್ಚಿಸುವುದು.
4. ದೊಡ್ಡ ಅವಿಭಕ್ತ ಕುಟುಂಬದ ಫೋಟೋ ತೋರಿಸಿ, ಅದರಲ್ಲಿ ಯಾರೆಲ್ಲ ಇದ್ದಾರೆ, ಅದರಲ್ಲಿರುವ ಕುಟುಂಬದ ಸದಸ್ಯರನ್ನು ಯಾರು ಎಂದು ಹೆಸರಿಸಲು ಕೇಳುವುದು. ಅವರು ವಿಭಕ್ತ ಮತ್ತು ವಿಸ್ತರಿತ ಕುಟುಂಬದ ಸದಸ್ಯರನ್ನು ಹೆಸರಿಸಿದ ನಂತರ, ಹೆಚ್ಚುವರಿ ಸದಸ್ಯರು ಯಾರಿದ್ದಾರೆ ಎಂದು ಊಹಿಸಿ ಎಂದು ಕೇಳುವುದು. ಮಕ್ಕಳು ಅವರದೇ ಅನುಭವದ ಆಧಾರದ ಮೇಲೆ (ಚಿಕ್ಕಪ್ಪ, ದೊಡ್ಡಮ್ಮ, ಚಿಕ್ಕಮ್ಮ, ಮಾವ, ಅತ್ತೆ, ಇತ್ಯಾದಿ)ಸಂಬಂಧಗಳನ್ನು ಹೇಳಬಹುದು. ಕೆಲವೊಮ್ಮೆ ಕುಟುಂಬದಲ್ಲಿ ಹೆಚ್ಚು ಜನರಿರಬಹುದು, ಚಿಕ್ಕಪ್ಪ/ದೊಡ್ಡಪ್ಪ, ಚಿಕ್ಕಮ್ಮ/ದೊಡ್ಡಮ್ಮ ಇವರೆಲ್ಲ ಇರಬಹುದು ಎಂದು ಹೇಳುತ್ತ ಅವರ ಪ್ರತಿಕ್ರಿಯೆಗಳನ್ನು ಸಾರಾಂಶೀಕರಿಸುವುದು.

### ಹಂತ 2

ಕುಟುಂಬದ ಸದಸ್ಯರನ್ನು ಹೆಸರಿಸಿ

### ಹಂತ 3

ಮಕ್ಕಳಿಗೆ ಶಿಶುಗೀತೆಯನ್ನು ಹಾಡಲು ಹೇಳುವುದು – ಜೋಡಿ ಜೋಡಿಸು ಎಂದು ಅವರ ಹೆಸರನ್ನು, ಅವರ ತಂದೆ ಮತ್ತು ತಾಯಿಯ ಹೆಸರಿನೊಂದಿಗೆ ಜೋಡಿಸಿ ಹಾಡುವುದು (ಉದಾ: ಮಗುವಿನ ಹೆಸರು ಪ್ರಿಯ, ತಂದೆಯ ಹೆಸರು ಮೋಹನ್, ತಾಯಿಯ ಹೆಸರು ಮೇರಿ ಆದರೆ –) ಪ್ರಿಯಾ ಜೋಡಿಸು... ಅಪ್ಪಾ ಮೋಹನ್ ಜೋಡಿಸು.... ಅಮ್ಮಾ ಮೇರಿ ಜೋಡಿಸು...

## ಕುಟುಂಬದ ಸಂಬಂಧಗಳ ಚಪಾತಿ ನಕ್ಷೆ ಬಿಡಿಸುವುದು

### ಕಲಿಕಾ ಫಲಿತಗಳು

- ಮಕ್ಕಳು ಹತ್ತಿರದ ಕುಟುಂಬದ ಸದಸ್ಯರು ತಮಗೆ ಅತ್ಯಂತ ಪ್ರೀತಿಪಾತ್ರರು ಎಂದು ಅರಿಯುತ್ತಾರೆ.
- ಸಮಸ್ಯೆಯಿರುವ ಕುಟುಂಬ ಅಥವಾ ಕುಟುಂಬದ ಸದಸ್ಯರೊಂದಿಗೆ ಮಗುವಿನ ಸಂಬಂಧದಲ್ಲಿ ಸಮಸ್ಯೆಗಳಿರುವುದರ ಬಗ್ಗೆ ಶಿಕ್ಷಕರಿಗೆ ಜಾಗೃತಿಯುಂಟಾಗುತ್ತದೆ.

### ಕಲಿಕಾ ಬೋಧನಾ ಸಾಮಗ್ರಿಗಳು

ಸುದ್ದಿಪತ್ರಿಕೆಗಳು, ವೃತ್ತಾಕಾರದ ಮುಖಗಳನ್ನು ಮಾಡಲು ಎ4 ಹಾಳೆಗಳು, ಕ್ರೆಯಾನ್‌ಗಳು, ಫೆವಿಕಾಲ್

### ಶಿಕ್ಷಕರ ಪೂರ್ವಸಿದ್ಧತೆ

ಎಲ್ಲ ಕಲಿಕಾ ಸಾಮಗ್ರಿಗಳನ್ನು ಸಿದ್ಧವಾಗಿಟ್ಟುಕೊಳ್ಳುವುದು.

### ಸೂಚನೆಗಳು

1. ಪ್ರತೀ ಮಗುವಿಗೆ ವೃತ್ತಾಕಾರದ (ದೊಡ್ಡ, ಸಣ್ಣ ಮತ್ತು ಮಧ್ಯಮ ಗಾತ್ರದ) ಕಾಗದದ ತುಣಕುಗಳನ್ನು ತೋರಿಸುವುದು ಮತ್ತು ಮಗುವೂ ಸೇರಿದಂತೆ ಅವರ ಮನೆಯಲ್ಲಿರುವ ಎಲ್ಲ ಜನರ ಮುಖಗಳನ್ನು ಎಳೆಯಲು ಬೇರೆ ಬೇರೆ ಗಾತ್ರದ ಆ ವೃತ್ತಾಕಾರದ ಕಾಗದದ ತುಣಕುಗಳನ್ನು ಆಯ್ಕೆ ಮಾಡಿಕೊಳ್ಳುವಂತೆ ಹೇಳುವುದು.
2. ಮಕ್ಕಳು ದೊಡ್ಡ ಚೌಕಾಕಾರದ ಹಾಳೆಯ ಮೇಲೆ ಆ ಎಲ್ಲರ ಮುಖಗಳನ್ನು ಅಂಟಿಸುವುದು, ತಮಗೆ ತುಂಬ ಪ್ರೀತಿಯ ವ್ಯಕ್ತಿಗಳ ಮುಖಗಳನ್ನು ತಮ್ಮ ಮುಖದ ತುಂಬ ಹತ್ತಿರ ಅಂಟಿಸುವುದು. (ಉದಾಹರಣೆಗೆ – ಮಗು ತನ್ನ ತಾಯಿ, ಅಣ್ಣನ ಮುಖವನ್ನು ಹತ್ತಿರ ಅಂಟಿಸಿಕೊಳ್ಳಬಹುದು, ಇನ್ನೊಂದು ಮಗು ತನ್ನ ತಂದೆ, ತಾಯಿ ಮತ್ತು ಅಕ್ಕನ ಮುಖವನ್ನು ತನಗೆ ತೀರ ಹತ್ತಿರದಲ್ಲಿ ಅಂಟಿಸಿಕೊಳ್ಳಬಹುದು). ತಮ್ಮ ಇಷ್ಟ ಮತ್ತು ಹೆಚ್ಚು ಇಷ್ಟವಿಲ್ಲ ಎನ್ನುವುದನ್ನು ಆಧರಿಸಿ, ಮಗು ಮುಖಗಳನ್ನು ಅಂಟಿಸುತ್ತ ಹೋಗುವುದು. ಇದು ಮಕ್ಕಳಿಗೆ ಕುಟುಂಬದ ಸಂಬಂಧಗಳಿಗೆ ಒಂದು ಮುಖವನ್ನು ಕೊಡಲು ಸಾಧ್ಯವಾಗುತ್ತದೆ.
3. ಪ್ರತೀ ಮಗುವಿನ ಚಿತ್ರವನ್ನು ಮಗುವಿಗೆ ಅದನ್ನು ವಿವರಿಸಲು ಹೇಳುತ್ತ, ಅವರೊಂದಿಗೆ ಚರ್ಚಿಸಿ. ಹೆಚ್ಚಿನ ಮುಖಗಳು ತುಂಬ ಹತ್ತಿರದಲ್ಲಿರಬಹುದು, ಕೆಲವು ತುಸು ದೂರದಲ್ಲಿರಬಹುದು, ಯಾಕೆ ಅಷ್ಟು ದೂರವಿದೆ ಎಂದು ಕೇಳುವುದು (ಯಾಕೆ ನಿಮಗಿಷ್ಟವಿಲ್ಲ ಎಂದು ಕೇಳಬಾರದು)
4. ಕೊನೆಯಲ್ಲಿ ಒಂದು ಅಥವಾ ಎರಡು ಚಿತ್ರಗಳನ್ನು ಆಯ್ಕೆ ಮಾಡಿಕೊಂಡು, ಇಡೀ ತರಗತಿಯಲ್ಲಿ ಅದನ್ನು ಚರ್ಚಿಸುವುದು ನಾವು ಹೆಚ್ಚಾಗಿ ನಮ್ಮ ತಂದೆ, ತಾಯಿ ಇಬ್ಬರನ್ನೂ ಸಮಾನವಾಗಿ ಪ್ರೀತಿಸುತ್ತೇವೆ ಎಂಬುದನ್ನು ಬೆರಳು ಮಾಡಿ ತೋರುವುದು.

# ಶಿಶುಗೀತೆಯ ಸೂಚನೆಗಳು

## ಕಲಿಕಾ ಫಲಿತಗಳು

ಈ ಅಧ್ಯಾಯದ ಕೊನೆಯಲ್ಲಿ ಮಕ್ಕಳು **"ಅಂದದ ಚಂದದ ಪುಟ್ಟ ಮನೆ'** ಕವನವನ್ನು ಸರಿಯಾದ ಪದಗಳು, ಉಚ್ಚಾರ ಮತ್ತು ಅಭಿನಯದೊಂದಿಗೆ ಹಾಡಲು ಅಥವಾ ಹೇಳಲು ಸಮರ್ಥರಾಗುತ್ತಾರೆ. (ಚಿಲಿಪಿಲಿ ಪುಟ ಸಂಖ್ಯೆ 70ರಲ್ಲಿ ಇರುವ ಕವನವನ್ನು ತೆಗೆದುಕೊಳ್ಳುವುದು)

## ಸೂಚನೆಗಳು

1. ಶಿಶುಗೀತೆಯನ್ನು ಪರಿಚಯಿಸಿ, ಅದು ಯಾವುದರ ಕುರಿತಾಗಿದೆ ಎಂದು ವಿವರಿಸುವುದು.
2. ಶಿಶುಗೀತೆಯನ್ನು ಅಭಿನಯ, ಹಾವಭಾವ ಮತ್ತು ಧ್ವನಿಯ ಏರಿಳಿತಗಳೊಂದಿಗೆ ಹೇಳುವುದು.
3. ಮುಖ್ಯವಾದ ಪದಗಳನ್ನು ವಿವರಿಸುವುದು ಮತ್ತು ಮಕ್ಕಳು ಅದರರ್ಥವನ್ನು ಅರ್ಥಮಾಡಿಕೊಳ್ಳುವುದನ್ನು ಖಾತ್ರಿಪಡಿಸಿಕೊಳ್ಳುವುದು. ವಿವರಣೆಯನ್ನು ಹಾವಭಾವ, ಆಂಗಿಕ ಅಭಿನಯಕ್ಕೆ ಹೊಂದಿಸಿ, ಆಗ ಪದ್ಯದ ಅರ್ಥವು ಇನ್ನಷ್ಟು ಸ್ಪಷ್ಟವಾಗುತ್ತದೆ.
4. ಶಿಶುಗೀತೆಯ ಒಂದೊಂದೇ ಸಾಲುಗಳನ್ನು ಅಭಿನಯದೊಂದಿಗೆ ಹೇಳುತ್ತ, ಮಕ್ಕಳು ಅನುಸರಿಸುವಂತೆ ಮಾಡುವುದು.
5. ಉಚ್ಚಾರ, ಸ್ಪಷ್ಟತೆ ಮತ್ತು ಅಭಿನಯದ ಮೇಲೆ ಗಮನವಿರಲಿ.
6. ಮಕ್ಕಳ 3–4 ಗುಂಪುಗಳನ್ನು ಮಾಡಿ, ಗೀತೆಯನ್ನು ಹೇಳಿಸುವುದು, ಯಾರಿಗೆ ಹೇಳಲು ಕಷ್ಟವಾಗುತ್ತಿದೆ, ಉಚ್ಚಾರ ತಪ್ಪುತ್ತಿದೆ ಅಥವಾ ಪದಗಳನ್ನು ಅಭಿನಯದೊಂದಿಗೆ ಹೊಂದಿಸಿ ಹೇಳಲು ಆಗುತ್ತಿಲ್ಲ, ಅಂತಹ ಮಕ್ಕಳನ್ನು ಗುರುತಿಸಿ, ಅವರಿಗೆ ಇನ್ನೂ ಹೆಚ್ಚು ಅಭ್ಯಾಸ ಮಾಡಿಸುವುದು.

## ಶಿಶುಗೀತೆ 1

## ಅಂದದ ಚಂದದ ಪುಟ್ಟ ಮನೆ

# ಅಂದದ ಚೆಂದದ ಪುಟ್ಟ ಮನೆ

ನಮ್ಮ ಮನೆ ನಮ್ಮ ಮನೆ
ಅಂದದ ಚೆಂದದ ಪುಟ್ಟ ಮನೆ
ಅಜ್ಜ ಅಜ್ಜಿ ಇರುವ ಮನೆ
ಅಪ್ಪ ಅಮ್ಮನ ಪ್ರೀತಿಯ ಮನೆ
ಅಕ್ಕ ತಂಗಿ ಬೆಳೆವ ಮನೆ
ಅಣ್ಣ ತಮ್ಮ ಕುಣಿವ ಮನೆ

ನಮ್ಮ ಮನೆ ನಮ್ಮ ಮನೆ
ಅಂದದ ಚೆಂದದ ಪುಟ್ಟ ಮನೆ
ಬಂಧು ಬಳಗ ಬರುವ ಮನೆ
ಎಲ್ಲರೂ ಕೂಡಿ ನಲಿವ ಮನೆ
ನಮ್ಮ ಮನೆ ನಮ್ಮ ಮನೆ
ಅಂದದ ಚೆಂದದ ಪುಟ್ಟ ಮನೆ



ಶಿಶುಗೀತೆ ೨

# Family

## Family

Families are big
Families are small
Families have fathers
Families have mothers
Some have brothers
And some have sisters
Families are different
And we love them all



## ಪೂರಿ ಪುಟ್ಟಿ



### ಕಲಿಕಾ ಫಲಿತಗಳು


ಮಕ್ಕಳು **'ಪೂರಿ ಪುಟ್ಟಿ'** ಕಥೆಯನ್ನು ಅರ್ಥ ಮಾಡಿಕೊಳ್ಳಲು ಮತ್ತು ಸರಳ ಪ್ರಶ್ನೆಗಳನ್ನು ಉತ್ತರಿಸಲು, ಕಥೆಯನ್ನು ತಮ್ಮದೇ ಪದಗಳಲ್ಲಿ ನಿರೂಪಿಸಲು ಸಮರ್ಥರಾಗುತ್ತಾರೆ.

### ಕಲಿಕಾ ಬೋಧನಾ ಸಾಮಗ್ರಿಗಳು

ಪೂರಿ ಪುಟ್ಟಿ ಕಥೆಯನ್ನು ಚಿತ್ರಿಸುವ 4 ಸ್ಟೋರಿ/ಕಥಾ ಕಾರ್ಡುಗಳು

### ಶಿಕ್ಷಕರ ಪೂರ್ವಸಿದ್ಧತೆ

ತರಗತಿಯಲ್ಲಿ ಕಥೆಯನ್ನು ಹೇಳುವ ಮೊದಲು ಒಂದೆರಡು ಸಲ ಧ್ವನಿಯ ಏರಿಳಿತಗಳೊಂದಿಗೆ ಹೇಳುವುದನ್ನು ಅಭ್ಯಾಸ ಮಾಡಿಕೊಳ್ಳುವುದು.




### ಕಥೆ

**ಪೂರಿ ಪುಟ್ಟಿ**

ಒಂದಿನ ಒಬ್ಬರು ಅಜ್ಜಿ ಪೂರಿ ಮಾಡ್ತಾ ಇದ್ರು. ಪೂರಿಗಳು ದೊಡ್ಡಕೆ, ದುಂಡಗೆ ಇದ್ದವು, ಎಲ್ಲ ಪೂರಿಗಳು ಉಬ್ಬಿಕೊಂಡಿದ್ದವು.

ಅಜ್ಜಿ ಮಾಡಿದ ಪೂರಿಗಳಲ್ಲಿ ಒಂದು ಪೂರಿ ಪುಟ್ಟಿಯೂ ಇತ್ತು.

ಪೂರಿ ಪುಟ್ಟಿಗೆ ಇಡೀ ಹಳ್ಳಿಯನ್ನು ನೋಡೋಣ ಎನ್ನಿಸಿತು, ಅದಕ್ಕೇ ಅವಳು ಎಣ್ಣೆ ಬಾಣಲೆಯಿಂದ ಹೊರಗೆ ಜಿಗಿದಳು. ಕೆಳಗೆ ಉರುಳುತ್ತ ಕೋಣೆಯನ್ನೆಲ್ಲ ನೋಡಿದಳು. ಆಮೇಲೆ ಮೆಟ್ಟಿಲಿನ ಮೇಲಿಂದ ಕೆಳಗೆ ಅಂಗಳಕ್ಕೆ ಬಿದ್ದಳು. ಅಲ್ಲಿಂದ ಗೇಟಿನ ಹತ್ರ ಉರುಳಿಕೊಂಡು ಹೋದಳು. ಆಮೇಲೆ ಪೂರಿ ಪುಟ್ಟಿ ಗೇಟಿನ ಸಂಧಿಯಲ್ಲಿ ತೂರಿಕೊಂಡು, ರಸ್ತೆಗೆ ಹೋದಳು, ಅಲ್ಲಿಂದ ಪೂರಿ ಪುಟ್ಟಿ ಪೇಟೆಗೆ ಉರುಳಿಕೊಂಡು ಹೋದಳು. ಅಲ್ಲಿ ಬೇರೆ ಬೇರೆ ಹಣ್ಣುಗಳು, ಸಿಹಿತಿಂಡಿಗಳು, ತರಕಾರಿಗಳ ರುಚಿ ನೋಡಿದಳು. ಅವಳು ತುಂಬಾ ದಪ್ಪ ಆದಳು, ಪೂರಿ ಪುಟ್ಟಿ ರಸ್ತೆಯಲ್ಲಿ ಹಂಗೇ ಉರುಳುತ್ತ, ಇನ್ನಷ್ಟು ಸಾಹಸ ಮಾಡೋಣ ಎಂದುಕೊಂಡಳು.

ಸ್ವಲ್ಪ ಹೊತ್ತಿಗೆ ಅವಳಿಗೆ ಸುಸ್ತಾಯಿತು, ಸರಿ, ತುಸು ಹೊತ್ತು ವಿಶ್ರಾಂತಿ ತೆಗೆದುಕೊಳ್ಳೋಣ ಅಂತ ರಸ್ತೆ ಪಕ್ಕದಲ್ಲಿ ನಿಂತಳು. ಶುಂಠಿ ಅಂತ ಒಂದು ನಾಯಿ, ಅದು ಪೂರಿ ಪುಟ್ಟಿಯನ್ನು ನೋಡಿತು. ಅವಳನ್ನು ತಿನ್ನೋಣ ಅಂತ ಅದಕ್ಕೆ ಅನ್ನಿಸಿತು. ಅದಕ್ಕೇ ಶುಂಠಿ ಒಂದು ಉಪಾಯ ಮಾಡಿತು. ಅದು ಪೂರಿ ಪುಟ್ಟಿಯ ಹತ್ತಿರ ಹೋಗಿ, ಅವಳು ನಡೆಯೋದರ ಬದಲಿಗೆ ತನ್ನ ಬೆನ್ನಿನ ಮೇಲೆ ಕೂತು ಸವಾರಿ ಮಾಡಬಹುದು ಎಂದಿತು.

ಸರಿ ಅಂತ ಪೂರಿ ಪುಟ್ಟಿ ಶುಂಠಿಯ ಬೆನ್ನಿನ ಮೇಲೆ ಕೂತಳು. ಸ್ವಲ್ಪ ದೂರ ಹೋಗುತ್ತಿದ್ದಂತೆ, 'ನನ್ನ ಮೂಗಿನ ಮೇಲೆ ಕೂತ್ರೆ ನಿಂಗೆ ರಸ್ತೆ ಇನ್ನೂ ಚೆನ್ನಾಗಿ ಕಾಣುತ್ತೆ' ಅಂತ ಶುಂಠಿ ಹೇಳಿತು. ಪೂರಿ ಪುಟ್ಟಿ ನಾಯಿಯ ಮೂಗಿನ ಮೇಲೆ ಕೂತಳು. ಇನ್ನೂ ಸ್ವಲ್ಪ ಮುಂದೆ ಹೋಗುತ್ತಿದ್ದಂತೆ, 'ನನ್ನ ಮೂಗು ತುಂಬ ಚಿಕ್ಕದು, ನೀನು ಅಲ್ಲಾಡಿ ಬಿದ್ದು ಹೋಗ್ತೀಯ. ನೀನು ನನ್ನ ನಾಲಿಗೆ ಹಿಡ್ಕೊಂಡ್ರೆ, ಗಟ್ಟಿಯಾಗಿ ಕೂರಬಹುದು, ಇರು ನಾನು ನಾಲಿಗೆ ಚಾಚ್ತೀನಿ' ಅಂತ ಶುಂಠಿ ಹೇಳಿತು. ಶುಂಠಿ ನಾಲಿಗೆ ಚಾಚಿತು. ಆಮೇಲೆ ಏನಾಯಿತು? ಪೂರಿ ಪುಟ್ಟಿ ನಾಲಿಗೆ ಹಿಡಿಯೋದಕ್ಕೆ ಮುಂದೆ ಬಾಗಿದಾಗ ಏನಾಯಿತು?

ಅಯ್ಯೋ... ಪೂರಿ ಪುಟ್ಟಿಯನ್ನು ಶುಂಠಿ ಒಂದೇ ಸಲಕ್ಕೆ ನುಂಗಿಬಿಟ್ಟಿತು! ಗುಳುಂ, ಗುಳುಂ, ಗುಳುಂ!

## ಪೂರಿ ಪುಟ್ಟಿ



### ಸೂಚನೆಗಳು

**ಹಂತ 1:** ಕಥೆಯ ಪರಿಚಯ: ಮಕ್ಕಳೊಂದಿಗೆ ವಿಷಯದ ಕುರಿತು ಚರ್ಚೆ, ಅದನ್ನು ಅವರ ಬದುಕಿನ ಅನುಭವಗಳಿಗೆ ಸಂಬಂಧಿಸುತ್ತ ಮತ್ತು ಕಥೆಯ ಮುಖ ಪುಟವನ್ನು ತೋರಿಸಿ, ಕಥೆಯು ಯಾವುದರ ಬಗ್ಗೆ ಇರಬಹುದು ಎಂದು ಸ್ವಲ್ಪ ಚರ್ಚೆ ಮಾಡುವುದು.

**ಹಂತ 2:** ಕಥೆಯನ್ನು ನಿಮ್ಮದೇ ಪದಗಳಲ್ಲಿ ಧ್ವನಿಯ ಏರಿಳಿತ ಹಾಗೂ ಹಾವಭಾವ, ಮುಖಭಾವದೊಂದಿಗೆ ಹೇಳುವುದು.

**ಹಂತ 3:** ಕಥೆಯನ್ನು ಮತ್ತೊಮ್ಮೆ ಓದುತ್ತ, ಮುಖ್ಯ ಪಾತ್ರಗಳನ್ನು, ಘಟನೆಗಳನ್ನು ಮತ್ತು ಮುಖ್ಯವಾದ ಪದಗಳನ್ನು ವಿವರಿಸುತ್ತ, ಮರು ಪ್ರಶ್ನೆಗಳನ್ನು ಕೇಳುವುದು, ಅಂದರೆ ಮಕ್ಕಳು ಕಥೆಯನ್ನು ಅರ್ಥಮಾಡಿಕೊಂಡಿದ್ದಾರೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದು. ಇಲ್ಲಿ ಮರುತ್ತರ ಪಡೆಯುವ ಕೆಲವು ಉದಾಹರಣೆ ಪ್ರಶ್ನೆಗಳಿವೆ: (ಇವು ಕೇವಲ ಕೆಲವು ಉದಾಹರಣೆಗಳು ಮಾತ್ರ, ಈ ರೀತಿಯ ಪ್ರಶ್ನೆಗಳನ್ನು ಕಥೆಯ ಉದ್ದಕ್ಕೂ ಕೇಳುತ್ತಿರಬೇಕು)

- ಒಂದಿನ ಅಜ್ಜಿ ಪೂರಿ ಮಾಡ್ತಾ ಇದ್ದಳು. ಯಾರು ಪೂರಿ ಮಾಡ್ತಾ ಇದ್ರು?
- ಪೂರಿ ಪುಟ್ಟಿಗೆ ಇಡೀ ಹಳ್ಳಿ ನೋಡೋಣ ಎನ್ನಿಸಿತು, ಅದಕ್ಕೇ ಅವಳು ಎಣ್ಣೆ ಬಾಣಲೆಯಿಂದ ಹೊರಗೆ ಜಿಗಿದಳು. ಪೂರಿ ಪುಟ್ಟಿ ಏನು ಮಾಡಿದಳು?
- ಪೂರಿ ಪುಟ್ಟಿ ಪೇಟೆಗೆ ಉರುಳಿಕೊಂಡು ಹೋದಳು. ಅಲ್ಲಿ ಬೇರೆ ಬೇರೆ ಹಣ್ಣುಗಳು, ಸಿಹಿತಿಂಡಿಗಳು, ತರಕಾರಿಗಳ ರುಚಿ ನೋಡಿದಳು. ಅವಳು ತುಂಬಾ ದಪ್ಪ ಆದಳು. ಅವಳು ತುಂಬಾ ತಿಂದಾಗ ಏನು ಆದಳು?
- ಶುಂಠಿ ಅಂತ ಒಂದು ನಾಯಿ, ಅದು ಪೂರಿ ಪುಟ್ಟಿಯನ್ನು ನೋಡಿತು. ಅವಳನ್ನು ತಿನ್ನೋಣ ಅಂತ ಅದಕ್ಕೆ ಅನ್ನಿಸಿತು. ಯಾರಿಗೆ ಪೂರಿ ಪುಟ್ಟಿಯನ್ನು ತಿನ್ನೋಣ ಅಂತ ಅನ್ನಿಸಿತು?

**ಹಂತ 4:** ಕಥೆಯ ಕೊನೆಯಲ್ಲಿ, ಗ್ರಹಣಶಕ್ತಿ ಮತ್ತು ಸ್ಮರಣಶಕ್ತಿಯನ್ನು ಪರೀಕ್ಷಿಸಲು ಕೆಲವು ಸರಳವಾದ ಪ್ರಶ್ನೆಗಳನ್ನು ಕೇಳುವುದು. ಸ್ಮರಣಶಕ್ತಿ ಪರೀಕ್ಷಿಸಲು ಕೆಲವು ಉದಾಹರಣೆ ಪ್ರಶ್ನೆಗಳು:

- ಪೂರಿ ಪುಟ್ಟಿ ಎಲ್ಲೆಲ್ಲಿ ಹೋದಳು?
- ಪೂರಿ ಪುಟ್ಟಿ ಮೊದಲು ಎಲ್ಲಿ ಕುಳಿತಳು?
- ಪೂರಿ ಪುಟ್ಟಿ ಆಮೇಲೆ ಎಲ್ಲಿ ಕುಳಿತಳು?
- ಪೂರಿ ಪುಟ್ಟಿ ಏನನ್ನು ಹಿಡಿದುಕೊಂಡು ಕೂರಲು ನೋಡಿದಳು?
- ಶುಂಠಿ ಏನು ಮಾಡಿತು ಕೊನೆಗೆ?

**ಹಂತ 5:** ಮಕ್ಕಳಿಗೆ ತೀರ್ಮಾನ ಮಾಡುವುದು ಅಗತ್ಯವಿರುವ ಪ್ರಶ್ನೆಗಳನ್ನು ಕೇಳುವುದು.

- ಪೂರಿ ಪುಟ್ಟಿ ಪೇಟೆಯಿಂದ ವಾಪಸು ಹೊರಟಾಗ ಹೇಗೆ ಕಾಣುತ್ತಿದ್ದಳು ಎಂದು ನೀವು ಯೊಚಿಸುತ್ತೀರಿ?
- ಪೂರಿ ಪುಟ್ಟಿ ಬಾಣಲೆಯಿಂದ ಹೊರಗೆ ಜಿಗಿದಿರಲಿಲ್ಲ ಎಂದರೆ ಅವಳನ್ನು ಯಾರು ತಿನ್ನುತ್ತಿದ್ದರು?

**ಹಂತ 6:** ಮಕ್ಕಳು ತಮ್ಮದೇ ನಾಲ್ಕಾರು ವಾಕ್ಯಗಳಲ್ಲಿ ಈ ಕಥೆಯನ್ನು ಹೇಳಲು ಬೆಂಬಲ ನೀಡುವುದು.

## ಚಟುವಟಿಕೆ 1

## ಆಲೂಗಡ್ಡೆ ಕುಟುಂಬ

### ಕಲಿಕಾ ಬೋಧನಾ ಸಾಮಗ್ರಿಗಳು

- ದೊಡ್ಡ, ಮಧ್ಯಮ ಮತ್ತು ಸಣ್ಣ ಗಾತ್ರದ ಆಲೂಗಡ್ಡೆಗಳು. ಆಲೂಗಡ್ಡೆಗಳನ್ನು ಅರ್ಧಕ್ಕೆ ಕತ್ತರಿಸಿ, ಅದು ಪ್ರಿಂಟ್/ಮುದ್ರಿಸಲು ಬ್ಲಾಕ್ ಆಗುತ್ತದೆ. (4 ಬೇರೆ ಬೇರೆ ಗಾತ್ರದ ಬ್ಲಾಕ್ ಮಾಡಿಕೊಳ್ಳುವುದು)
- ಬಣ್ಣದ ಪೇಂಟ್
- ಬಣ್ಣದ ಪೆನ್ಸಿಲ್ಲುಗಳು ಅಥವಾ/ಮತ್ತು ಕ್ರೇಯಾನ್‌ಗಳು

### ಶಿಕ್ಷಕರ ಪೂರ್ವಸಿದ್ಧತೆ

- ಮಕ್ಕಳನ್ನು 4 ಗುಂಪುಗಳಾಗಿ ಮಾಡುವುದು, ಆಗ ಒಬ್ಬರಿಗೊಬ್ಬರು ಕಸಿದುಕೊಳ್ಳದೇ ಹಂಚಿಕೊಳ್ಳಬಹುದು.
- ಪ್ರತೀ ಗುಂಪಿಗೂ ಬಣ್ಣದ ಪೆನ್ಸಿಲ್ಲುಗಳು ಮತ್ತು ಕ್ರೇಯಾನ್‌ಗಳನ್ನು ಕೊಡುವುದು.

### ಸೂಚನೆಗಳು

1. ಮಕ್ಕಳಿಗೆ ದೊಡ್ಡ/ಮಧ್ಯಮ/ಸಣ್ಣ ಆಲೂಗಡ್ಡೆಗಳನ್ನು ತೆಗೆದುಕೊಂಡು, ಕುಟುಂಬದ ಎಲ್ಲ ಸದಸ್ಯರ ಮುಖಗಳನ್ನು ಮಾಡಲು ಹೇಳುವುದು (ಅಗತ್ಯಬಿದ್ದರೆ ಮಾಡಿ ತೋರಿಸುವುದು)
2. ಅವರು ನಂತರ ಕಣ್ಣು, ಮೂಗು, ಬಾಯಿ, ಕೂದಲು, ಬಿಂದಿ ಇತ್ಯಾದಿಯನ್ನು ಬಿಡಿಸಬಹುದು.
3. ಮಕ್ಕಳಿಗೆ ಮನೆಯವರನ್ನು ವಿವರಿಸಲು ಮತ್ತು ಏನಾದರೂ ವಿಶೇಷ ಲಕ್ಷಣಗಳಿದ್ದರೆ ಅದನ್ನೂ ವಿವರಿಸಲು ಹೇಳುವುದು. ಯಾರಿಗೆ ತುಂಬ ದೊಡ್ಡ ಮುಖವಿದೆ, ಯಾರಿಗೆ ತುಂಬ ಸಣ್ಣ ಮುಖವಿದೆ, ಎಂದು ಕೇಳಿ (ತಂದೆಯ ಮುಖವೇ ದೊಡ್ಡದು ಇರಬೇಕು ಎಂದೇನಿಲ್ಲ, ಆದರೆ ಮಕ್ಕಳಿಗೆ ಯಾರದು ದೊಡ್ಡ ಮುಖ ಮತ್ತು ಯಾರದು ಚಿಕ್ಕ ಮುಖ ಎಂದು ಹೇಳಲು ಆಗಬೇಕು ಅಷ್ಟೆ)

## ಚಟುವಟಿಕೆ 2

## ಕುಟುಂಬದ ಪುಟ

### ಕಲಿಕಾ ಬೋಧನಾ ಸಾಮಗ್ರಿಗಳು

ಹಾಳೆ, ಬಣ್ಣದ ಪೇಂಟ್, ಬಣ್ಣದ ಪೆನ್ಸಿಲ್ಲುಗಳು

### ಸೂಚನೆಗಳು

1. ಎಲ್ಲ ಮಕ್ಕಳಿಗೆ ಹಾಳೆ, ಬಣ್ಣದ ಪೆನ್ಸಿಲ್ಲುಗಳನ್ನು ಕೊಡುವುದು.
2. ಅವರಿಗೆ ಹಾಳೆಯ ಮೇಲೆ ಅವರ ಕುಟುಂಬವನ್ನು ಬಿಡಿಸಲು ಹೇಳುವುದು.
3. ಮಕ್ಕಳಿಗೆ ಅವರೇ ಕುಟುಂಬದ ಎಲ್ಲರನ್ನು ಹೆಸರಿಸಲು ಆಸ್ಪದ ಕೊಡುವುದು. ನೀವು ಚರ್ಚಿಸುತ್ತಿರುವಂತೆ, ಗಾತ್ರಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವುದು. ಯಾರು ನಿಮ್ಮ ಮನೆಯಲ್ಲಿ ತುಂಬ ದೊಡ್ಡಕ್ಕೆ ಇದ್ದಾರೆ? ಯಾರು ಸಣ್ಣ ಇದ್ದಾರೆ? ಚಿತ್ರವನ್ನು ಹೆಸರಿಸುವುದು ಮತ್ತು ಆ ಮಗುವಿನ ಹೆಸರಿನೊಂದಿಗೆ ಮಗುವಿನ ಕೃತಿಸಂಪುಟ (ಪೋರ್ಟ್‌ಫೋಲಿಯೋ)ದಲ್ಲಿ ಹಾಕಿಡುವ ಮೊದಲು ಒಂದೆರಡು ದಿನ ನೇತುಹಾಕಬಹುದು/ಪಿನ್ ಮಾಡಬಹುದು.

**ಚಟುವಟಿಕೆ 1**

# ಕುಟುಂಬದ ಮೂಲೆಗಳು

## ಸೂಚನೆಗಳು

1. ಮಕ್ಕಳು ತರಗತಿಕೋಣೆಯ ಬೇರೆ ಬೇರೆ ಭಾಗಗಳಲ್ಲಿ ಹೇಗಾದರೂ ನಿಲ್ಲುವುದು.
2. ಕೋಣೆಯ ನಾಲ್ಕು ಮೂಲೆಗಳನ್ನು ಅಪ್ಪ (ಮೂಲೆ 1), ಅಮ್ಮ (ಮೂಲೆ 2), ಮಕ್ಕಳು (ಮೂಲೆ 3), ಮತ್ತು ಅಜ್ಜ, ಅಜ್ಜಿ (ಮೂಲೆ 4) ಎಂದು ಗುರುತು ಮಾಡುವುದು.
3. ನೀವು ತರಗತಿಕೋಣೆಯ ಮಧ್ಯದಲ್ಲಿ ನಿಲ್ಲುವುದು ಮತ್ತು ನಿಮ್ಮ ಕಣ್ಣು ಮುಚ್ಚಿ 10ರಿಂದ 0ವರೆಗೆ ಹಿಂದಿನಿಂದ ಎಣಿಸುವುದು. ನೀವು ಎಣಿಸುತ್ತಿರುವ ಹಾಗೆ, ಮಕ್ಕಳು ಓಡಿ ಹೋಗಿ, ಯಾವುದಾದರೂ ಮೂಲೆಯನ್ನು ಆಯ್ಕೆ ಮಾಡಿಕೊಳ್ಳಬೇಕು.
4. ನೀವು ಎಣಿಸುವುದನ್ನು ಮಗಿಸಿದಾಗ, ನಿಮ್ಮ ಕಣ್ಣನ್ನು ಮುಚ್ಚಿಕೊಂಡೇ ಯಾವುದಾದರೂ ಮೂಲೆಯತ್ತ ಬೆರಳು ತೋರಿಸಬೇಕು.
5. ನೀವು ಬೆರಳು ಮಾಡಿದ ಮೂಲೆಯ ಮಕ್ಕಳು ಆಟದಿಂದ ಔಟ್ ಎಂದು. ನೀವು ಬೆರಳು ತೋರಿಸಿದ ಮೂಲೆಯಲ್ಲಿ ಯಾರೂ ಮಕ್ಕಳು ಇರದಿದ್ದರೆ, ಮತ್ತೆ ಮಕ್ಕಳು ಆಟ ಶುರು ಮಾಡುವುದು.
6. ಎಲ್ಲ ಮಕ್ಕಳು ಮತ್ತೆ ಮಧ್ಯಕ್ಕೆ ಬರುವುದು.
7. ಮಕ್ಕಳು ಒಂದು ಮೂಲೆಯನ್ನು ಆಯ್ಕೆ ಮಾಡಿಕೊಂಡು, ಆಟವನ್ನು ಮತ್ತೆ ಶುರು ಮಾಡುವುದು.
8. ಕೊನೆಯಲ್ಲಿ ನಾಲ್ಕು ಮಕ್ಕಳು ಉಳಿದಾಗ, ಅವರಲ್ಲಿ ಒಬ್ಬೊಬ್ಬರೂ ಬೇರೆ ಬೇರೆ ಮೂಲೆಯನ್ನು ಆಯ್ಕೆ ಮಾಡಿಕೊಳ್ಳುವುದು.
9. ಕೊನೆಯಲ್ಲಿ ಯಾವುದಾದರೂ ಮೂಲೆಯಲ್ಲಿ ಉಳಿದ ಮಗು ಗೆದ್ದ ಹಾಗೆ, ಆ ಮಗು ಎಣಿಸಿಕೊಂಡು, ಮೂಲೆಯನ್ನು ಆಯ್ಕೆ ಮಾಡಿಕೊಳ್ಳಬಹುದು.

ಚಟುವಟಿಕೆ 2

## ಕುಟುಂಬದ ಸದಸ್ಯರ ಕ್ರಿಯೆಗಳು

### ಕಲಿಕಾ ಬೋಧನಾ ಸಾಮಗ್ರಿಗಳು

ಸಂಗೀತ ಮತ್ತು ಮ್ಯೂಸಿಕ್ ಸಿಸ್ಟಮ್

### ಸೂಚನೆಗಳು

ಇಬ್ಬಿಬ್ಬರು ಮಕ್ಕಳನ್ನು ಜೋಡಿ ಮಾಡುವುದು ಮತ್ತು ತರಗತಿಕೋಣೆಯಲ್ಲಿ ಎಲ್ಲೆಂದರಲ್ಲಿ ಈ ಜೋಡಿಗಳನ್ನು ನಿಲ್ಲಿಸುವುದು. ಸಂಗೀತವನ್ನು ಹಾಕುವುದು. ಜೊತೆಗಾರರು ತರಗತಿ ಕೋಣೆಯ ಲಭ್ಯವಿರುವ ಜಾಗದಲ್ಲಿಯೇ ಬೇರೆಬೇರೆ ರೀತಿಯಲ್ಲಿ ನಡೆದಾಡುತ್ತಿರಲಿ. ಸಂಗೀತ ನಿಂತೊಡನೆ ಮಕ್ಕಳು ಅವರು ಇರುವ ಜಾಗದಲ್ಲಿಯೇ ಅಲ್ಲಾಡದೇ ನಿಲ್ಲಬೇಕು. ಇದು ಒಂದು ಸಾರಿ ಅಂದರೆ ಒಂದು ಸೈಕಲ್. ಹೀಗೆ ಪ್ರತೀ ಸಾರಿ (ಪ್ರತೀ ಸೈಕಲ್) ಮಾಡುವುದನ್ನು 'ನಡೆ ಮತ್ತು ನಿಲ್ಲು (ವಾಕ್ & ಫ್ರೀಜ್)' ಎನ್ನಲಾಗುತ್ತದೆ. ಇದನ್ನು ಹಲವು ಸಲ ಪುನರಾವರ್ತನೆ ಮಾಡಬೇಕು.

ಮಕ್ಕಳಿಗೆ ಈ ಕೆಳಗಿನ ಸೂಚನೆಗಳನ್ನು ನೀಡುವುದು:

1. ಸಂಗೀತವು ಶುರು ಇದ್ದಾಗ ಅವರು ಕೋಣೆಯ ಒಳಗೆ ನಡೆದಡುತ್ತಿರಬೇಕು.
2. ವೃತ್ತಾಕಾರದಲ್ಲಿ ನಡೆದಾಡಬೇಡಿ, ಕೋಣೆಯ ಎಲ್ಲ ಜಾಗದಲ್ಲಿಯೂ ನಿಮಗೆ ಬೇಕಿರುವಂತೆ ನಡೆದಾಡಿ, ಆದರೆ ಪರಸ್ಪರ ಮುಟ್ಟುವುದು, ಹಿಡಿದುಕೊಳ್ಳುವುದು, ದಬ್ಬುವುದು ಮಾಡಬೇಡಿ, ಯಾರಿಗೂ ನೋವು ಮಾಡಬೇಡಿ.
3. ಸಂಗೀತವು ಶುರುವಾದಾಗ ನಡೆದಾಡಿ ಮತ್ತು ಸಂಗೀತವು ನಿಂತಾಗ ಕಲ್ಲಿನಂತೆ ಎಲ್ಲಿದ್ದಾರೆಯೋ ಅಲ್ಲಿಯೇ ನಿಲ್ಲಬೇಕು. ನಿಮ್ಮ ಗೆಳೆಯರ ಅಥವಾ ಶಿಕ್ಷಕರ ಹತ್ತಿರ ಹೋಗಬೇಡಿ, ನೀವು ಎಲ್ಲಿದ್ದೀರೋ ಅಲ್ಲಿಯೇ ನಿಂತುಕೊಳ್ಳಿ.

'ನಡೆ ಮತ್ತು ನಿಲ್ಲು (ವಾಕ್ & ಫ್ರೀಜ್)' ಕೊನೇಪಕ್ಷ 3 ಸಲ ಪುನರಾವರ್ತನೆ ಆದ ನಂತರ, ಜೋಡಿಗಳಿಗೆ ಈ ನಿರ್ದಿಷ್ಟ ಸೂಚನೆಗಳನ್ನು ನೀಡಿ:

1. ನೀವು ನಿಂತಾಗ, ನಿಮ್ಮ ತಂದೆ ಮಾಡುವ ಏನಾದರೂ ಒಂದು ಕ್ರಿಯೆ/ಕೆಲಸವನ್ನು ನೆನಪಿಸಿಕೊಂಡು, ಅವರಂತೆಯೇ ಮಾಡಿ.
2. ನೀವು ನಿಂತಾಗ, ನಿಮ್ಮ ತಾಯಿ ಮಾಡುವ ಏನಾದರೂ ಒಂದು ಕ್ರಿಯೆ/ಕೆಲಸವನ್ನು ನೆನಪಿಸಿಕೊಂಡು, ಅವರಂತೆಯೇ ಮಾಡಿ.
3. ನೀವು ನಿಂತಾಗ, ನಿಮ್ಮ ಅಜ್ಜ ಮಾಡುವ ಏನಾದರೂ ಒಂದು ಕ್ರಿಯೆ/ಕೆಲಸವನ್ನು ನೆನಪಿಸಿಕೊಂಡು, ಅವರಂತೆಯೇ ಮಾಡಿ.
4. ನೀವು ನಿಂತಾಗ, ನಿಮ್ಮ ಅಜ್ಜಿ ಮಾಡುವ ಏನಾದರೂ ಒಂದು ಕ್ರಿಯೆ/ಕೆಲಸವನ್ನು ನೆನಪಿಸಿಕೊಂಡು, ಅವರಂತೆಯೇ ಮಾಡಿ.
5. ನೀವು ನಿಂತಾಗ, ಯಾವುದಾದರೂ ಮಗು ಮಾಡುವ ಏನಾದರೂ ಒಂದು ಕ್ರಿಯೆ/ಕೆಲಸವನ್ನು ನೆನಪಿಸಿಕೊಂಡು, ಅವರಂತೆಯೇ ಮಾಡಿ.
6. ನೀವು ನಿಂತಾಗ, ಮನೆಯಲ್ಲಿ ನೀವು ಮಾಡೋದಕ್ಕೆ ತುಂಬ ಇಷ್ಟಪಡೋ ಏನಾದರೂ ಒಂದು ಕ್ರಿಯೆ/ಕೆಲಸವನ್ನು ನೆನಪಿಸಿಕೊಂಡು, ಅವರಂತೆಯೇ ಮಾಡಿ.
7. ನೀವು ನಿಂತಾಗ, ಮನೆಯಲ್ಲಿ ನೀವು ಎಲ್ಲರ ಜೊತೆಗೆ ಮಾಡೋದಕ್ಕೆ ತುಂಬ ಇಷ್ಟಪಡೋ ಏನಾದರೂ ಒಂದು ಕ್ರಿಯೆ/ಕೆಲಸವನ್ನು ನೆನಪಿಸಿಕೊಂಡು, ಅವರಂತೆಯೇ ಮಾಡಿ.

**ಟಿಪ್ಪಣಿ:** ಪ್ರತಿಯೊಂದೂ ಅಂಶವನ್ನು ಹೇಳಿದ ನಂತರ, ಮಕ್ಕಳು ಸಂಗೀತದ ಜೊತೆ ನಡೆಯುತ್ತಿರುವುದು ಮತ್ತು ನೀವು ಮುಂದಿನ ಕ್ರಿಯೆ / ಸೂಚನೆಯನ್ನು ಹೇಳುವ ಮೊದಲು ಅವರು ನಿಲ್ಲುವುದು. ತರಗತಿಕೋಣೆಯಲ್ಲಿ ನಡೆದಾಡುತ್ತ, ಅವರು ಮಾಡುತ್ತಿರುವ ಕ್ರಿಯೆ/ಕೆಲಸವನ್ನು ವಿವರಿಸುವಂತೆ ಕೆಲವು ಮಕ್ಕಳನ್ನು ಕೇಳುವುದು.

ಚಟುವಟಿಕೆ 1

## ಒಳಗೆ ಹೊರಗೆ



### ಸೂಚನೆಗಳು

#### ಹಂತ 1

1. ನೆಲದ ಮೇಲೆ ಸೀಮೆಸುಣ್ಣದಿಂದ ಒಂದು ವೃತ್ತವನ್ನು ಎಳೆಯುವುದು. 2. ಎಳೆದಿರುವ ವೃತ್ತದ ಮೇಲೆ ಎಲ್ಲ ಮಕ್ಕಳನ್ನು ನಿಲ್ಲಿಸುವುದು.
3. ನೀವು ಒಳಗೆ/ಇನ್‌ಸೈಡ್ ಎಂದು ಹೇಳಿದಾಗ, ಅವರು ವೃತ್ತದ ಒಳಗೆ/ಇನ್‌ಸೈಡ್ ಜಿಗಿಯಬೇಕು ಮತ್ತು ನೀವು ಹೊರಗೆ/ಔಟ್‌ಸೈಡ್ ಎಂದು ಹೇಳಿದಾಗ, ಅವರು ವೃತ್ತದ ಹೊರಗೆ ಜಿಗಿಯಬೇಕು.
4. ಸೂಚನೆಗಳನ್ನು ಪಾಲಿಸದೇ ಇರುವ ಮಗು, ಆಟದಿಂದ ಔಟ್ ಮತ್ತು ಆಟದಿಂದ ಹೊರಗೆ ಉಳಿಯುವುದು.
5. ಸೂಚನೆಗಳನ್ನು ಬೇರೆ ಬೇರೆ ಧ್ವನಿಯಲ್ಲಿ, ಬೇರೆ ರೀತಿಯಾಗಿ ಹೇಳುತ್ತ ಮಕ್ಕಳಿಗೆ ಸವಾಲೆನ್ನಿಸುವ ಹಾಗೆ ಮಾಡುವುದು.

#### ಹಂತ 2

1. ಮಕ್ಕಳು ಈಗ ನೀವು ನೀಡಿದ ಸೂಚನೆಯ ವಿರುದ್ಧ ಮಾಡಬೇಕು. ಅಂದರೆ ನೀವು ಒಳಗೆ/ಇನ್‌ಸೈಡ್ ಎಂದಾಗ ಅವರು ಹೊರಗೆ/ಔಟ್‌ಸೈಡ್ ಜಿಗಿಯಬೇಕು ಮತ್ತು ನೀವು ಹೊರಗೆ/ಔಟ್‌ಸೈಡ್ ಎಂದಾಗ ಅವರು ಒಳಗೆ/ಇನ್‌ಸೈಡ್ ಜಿಗಿಯುವುದು.

---

ಚಟುವಟಿಕೆ 2

## ಬ್ಲಾಕ್ ರೇಸ್

**ಕಲಿಕಾ ಬೋಧನಾ ಸಾಮಗ್ರಿಗಳು:** ಬ್ಲಾಕ್‌ಗಳು

### ಸೂಚನೆಗಳು

1. ತರಗತಿಯ ಮಕ್ಕಳನ್ನು 6 ಗುಂಪುಗಳಾಗಿ ಮಾಡುವುದು, ಸಾಲಾಗಿ ನಿಲ್ಲಿಸುವುದು.
2. 5 ಬ್ಲಾಕ್‌ಗಳನ್ನು ಲಂಬಾಕಾರದಲ್ಲಿ ಗೋಪುರದ ಹಾಗೆ ಮಾಡುವುದು.
3. ಅಂತಿಮ ಫಿನಿಶಿಂಗ್ ಲೈನಿನಿಂದ 20 ಅಡಿ ದೂರದಲ್ಲಿ ಆರಂಭದ ಸ್ಟಾರ್ಟ್ ಲೈನ್ ಎಳೆಯುವುದು.
4. ನೀವು 'ಗೋ' ಎಂದಾಗ ಪ್ರತೀ ಸಾಲಿನ ಮೊದಲು ಮಗು ಓಡಿ ಹೋಗಿ, ಮೊದಲ ಬ್ಲಾಕ್ ಅನ್ನು ಎತ್ತಿಕೊಂಡು ಓಡಿ ಬರಬೇಕು, ಇಡಬೇಕು. (ಬ್ಲಾಕ್ ಗೋಪುರ ಬಿದ್ದರೆ, ಆ ಗುಂಪು ಔಟ್)
5. ಮೊದಲ ಮಗು ಮರಳಿ ಬಂದೊಡನೆ, ಎರಡನೇ ಮಗು ಓಡಬೇಕು. ಇನ್ನೊಂದು ಬ್ಲಾಕ್ ಎತ್ತಿಕೊಂಡು ಓಡಿ ಬಂದು, ಮೊದಲ ಮಗು ಇಟ್ಟ ಬ್ಲಾಕ್ ಮೇಲೆ ಇಡಬೇಕು. ಹೀಗೆಯೇ ಮುಂದುವರೆಸಬೇಕು.
6. ಯಾವ ಗುಂಪು ಅಂತಿಮ/ಫಿನಿಶಿಂಗ್ ಗೆರೆಯಿಂದ ಆರಂಭದ ಗೆರೆಗೆ ಎಲ್ಲ ಬ್ಲಾಕ್‌ಗಳನ್ನು ತಂದು ಇಡುವುದೋ ಆ ಗುಂಪು ಗೆದ್ದ ಹಾಗೆ.

(ಎಲ್ಲ ಮಕ್ಕಳಿಗೂ ಸಾಲುವಷ್ಟು ಬ್ಲಾಕ್‌ಗಳು ಇಲ್ಲದಿದ್ದರೆ, ಮಕ್ಕಳು ಸರದಿ ಪ್ರಕಾರ ಆಡುವುದು)

---

ಚಟುವಟಿಕೆ 2

## ರನ್.... ಸ್ಟ್ಯಾಚ್ಯೂ

### ಸೂಚನೆಗಳು

1. ಮಕ್ಕಳಿಗೆ ಓಡುತ್ತಿರುವಂತೆ ಹೇಳುವುದು.
2. ಶಿಕ್ಷಕರು 'ಸ್ಟ್ಯಾಚ್ಯೂ' ಎಂದಾಗ ಮಕ್ಕಳು ತಟ್ಟನೆ ನಿಲ್ಲಬೇಕು. ಒಂದಿಷ್ಟು ಅಲ್ಲಾಡಿದರೂ, ಆ ಮಗು ಔಟ್!
3. ಒಂದೇ ಒಂದು ಮಗು ಔಟಾಗದೇ ಉಳಿಯುವವರೆಗೆ ಆಟವನ್ನು ಮುಂದುವರೆಸಿ.

ಸಂಪೂರ್ಣ ದೈಹಿಕ ಪ್ರತಿಕ್ರಿಯೆ (ಟೋಟಲ್ ಫಿಸಿಕಲ್ ರೆಸ್ಪಾನ್ಸ್ – ಟಿಪಿಆರ್)

# ನನ್ನ ಕುಟುಂಬ

## ಕಲಿಕಾ ಫಲಿತಗಳು

ಮೊದಲ ತಿಂಗಳಿನ ಕೊನೆಯಲ್ಲಿ ಮಕ್ಕಳು ಈ ಕೆಳಗಿನ 6 ಇಂಗ್ಲೀಷ್ ಸರಳ ಸೂಚನೆಗಳಿಗೆ ಪ್ರತಿಕ್ರಿಯಿಸಲು ಮತ್ತು ಅವನ್ನು ಅನುಸರಿಸಲು ಸಮರ್ಥರಾಗುತ್ತಾರೆ.

## ಕಲಿಕಾ ಬೋಧನಾ ಸಾಮಗ್ರಿಗಳು

ಶಿಕ್ಷಕರ ಕಾರ್ಡುಗಳು



## ನನ್ನ ಕುಟುಂಬ



### ಸೂಚನೆಗಳು

**ಹಂತ 1**

- 'ಮಕ್ಕಳೆ, ಇಂದು ನಾವು ಹೊಸದೇನನ್ನೋ ಕಲಿಯೋಣ. ಹೊಸ ಪದಕ್ಕೆ ಹೇಗೆ ಪ್ರತಿಕ್ರಯಿಸೋದು ಅಂತ ನೋಡೋಣ. ನಾನು ಏನೋ ಒಂದು ಇಂಗ್ಲೀಷಿನಲ್ಲಿ ಹೇಳಿದಾಗ ನೀವು ನಾನು ಹೇಳಿದ್ದನ್ನು ಮಾಡಬೇಕು.' ಎನ್ನುತ್ತ ಸಂಭಾಷಣೆ ಶುರು ಮಾಡಿ.
- 'ನಾನು ಏನೋ ಹೇಳಿ, ಮಾಡಿ ತೋರಿಸಿದ ನಂತರ ನೀವೂ ಹಾಗೆಯೇ ಮಾಡಬೇಕು. ನಾನು ಹೇಗೆ ಮಾಡೋದು ಅಂತ ತೋರಿಸ್ತೀನಿ'.
- ಮೊದಲು 'ಬಾಯ್–ಬಾಯ್' ಎಂದು ಕೈ ಬೀಸಿ ತೋರಿಸಿ, ಮಕ್ಕಳಿಗೆ ಅವರ ಕೈ ಬೀಸಲು ಹೇಳಿ. ಪ್ರತೀ ದಿನ ಸಂಜೆ ಶಾಲೆಯಿಂದ ಹೋಗುವಾಗ ಇದನ್ನು ಮಾಡಲು ಹೇಳುವುದು.

**ಹಂತ 2:** ಈಗ ಟಿಪಿಆರ್ ತರಗತಿಯನ್ನು ಆರಂಬಿಸುವುದು.

- ಮಕ್ಕಳಿಗೆ ಹೀಗೆ ಹೇಳುವುದು, "ಈಗ ನಾನೇನು ಹೇಳ್ತೀನಿ ಅಂತ ಗಮನವಿಟ್ಟು ಕೇಳಿ. ಆಮೇಲೆ ನಾನೇನು ಮಾಡ್ತೀನಿ ನೋಡಿಕೊಂಡು, ನಾನು ಮಾಡಿದ್ದನ್ನೇ ಮಾಡಬೇಕು, ಆಯ್ತಾ ಮಕ್ಕಳೇ. ಆವಾಗ್ಲೇ ಮಾಡಿದೆವಲ್ಲ, ಹಂಗೇ ಮಾಡಬೇಕು' ಎಂದು ಹೇಳುವುದು. ಈ ಇಂಗ್ಲೀಷ್ ಪದಗಳನ್ನು ಅಥವಾ ಕ್ರಿಯೆಯನ್ನು ಕನ್ನಡದಲ್ಲಿ ವಿವರಿಸಬೇಡಿ.

ಹೀಗೆ ಹೇಳಿದ ನಂತರ, ಮೊದಲ 3 ಆಜ್ಞೆ/ಕಮಾಂಡ್‌ಗಳನ್ನು ನೀವು ಮಾಡಿ ತೋರಿಸುತ್ತ, ನಿಮ್ಮ ಕೈಯಲ್ಲಿಯೂ ತೋರಿಸುತ್ತ, ಹೇಳುವುದು. ಅವೆಂದರೆ:

**1.** ಜಂಪ್ ಇನ್. **2.** ಜಂಪ್ ಔಟ್. **3.** ಜಂಪ್ ಅಪ್ ಆಂಡ್ ಡೌನ್.

('ಜಂಪ್ ಇನ್' ಎಂದು ಹೇಳಿ – ಮಾಡಿ ತೋರಿಸಿ, ಮಕ್ಕಳಿಗೆ ನಿಮ್ಮಂತೆಯೇ ಮಾಡುವಂತೆ ತಿಳಿಸುವುದು. ನಂತರ 'ಜಂಪ್ ಔಟ್' ಎಂದು ಹೇಳಿ ಮಾಡಿ ತೋರಿಸಿ, ಮಕ್ಕಳು ನಿಮ್ಮಂತೆಯೇ ಮಾಡುವುದು. ಈಗ 'ಜಂಪ್ ಅಪ್ ಆಂಡ್ ಡೌನ್' ಎಂದು ಹೇಳಿ, ಮಕ್ಕಳು ನಿಮ್ಮಂತೆಯೇ ಮಾಡುವುದು.) ಇದನ್ನು 4–5 ಸಲ ಮಾಡುವುದು.

**ಹಂತ 3:** ಮಕ್ಕಳು ಆರಾಮಾಗಿ ಮಾಡುತ್ತಿದ್ದಾರೆ ಎನ್ನಿಸಿದಾಗ, ನೀವು ಮಾಡಿ ತೋರಿಸುವುದನ್ನು ನಿಲ್ಲಿಸುವುದು. ಈಗ ಒಂದು ಕಡೆ ನಿಂತು, ಬರೀ ಆಜ್ಞೆ ಕೊಡುವುದು – 'ಜಂಪ್ ಇನ್', 'ಜಂಪ್ ಔಟ್' 'ಜಂಪ್ ಅಪ್ ಆಂಡ್ ಡೌನ್'.

ಮಕ್ಕಳು ನಿಮ್ಮ ಆಜ್ಞೆಯಂತೆ ಮಾಡುತ್ತಿದ್ದಾರಾ ಎಂದು ಗಮನಿಸುವುದು. ಸರಿಯಾಗಿ ಮಾಡದಿದ್ದರೆ, ಮತ್ತೆ ನೀವು ಮಾಡಿ ತೋರಿಸುವುದು. ಅವರು ಮಾಡಬಲ್ಲರು ಎಂದಾದರೆ, ಪುನಃ 5 ಸಲ ಮಾಡುವುದು.


**ಹಂತ 4:** ಈಗ ಮುಂದಿನ 3 ಆಜ್ಞೆ/ಕಮಾಂಡ್‌ಗಳನ್ನು ಪರಿಚಯಿಸಿ, ಹಂತ 2 ಮತ್ತು 3ರಲ್ಲಿ ಹೇಳಿದಂತೆಯೇ ಮಾಡುವುದು. ಅವೆಂದರೆ:

**1.** ವೇವ್ ಯುವರ್ ಹ್ಯಾಂಡ್ಸ್. **2.** ಸ್ನಾಪ್ ಯುವರ್ ಫಿಂಗರ್ಸ್. **3.** ಕ್ಲಾಪ್ ಯುವರ್ ಹ್ಯಾಂಡ್ಸ್.

**ಹಂತ 5:** ಈಗ ಎಲ್ಲ 6 ಆಜ್ಞೆಗಳನ್ನು ಅದೇ ಅನುಕ್ರಮದಲ್ಲಿ ಒಟ್ಟಿಗೇ ಹೇಳುವುದು. (ನೀವು ಮಾಡಿ ತೋರಿಸುವುದು ಬೇಡ). ಮಕ್ಕಳು ಮಾಡಲು ಸಮರ್ಥರಾದರೆ, ಕೊನೆಯ ಹಂತಕ್ಕೆ ಹೋಗುವುದು. ಇಲ್ಲವಾದರೆ ಇನ್ನೊಮ್ಮೆ ಮಾಡಿಸುವುದು.


**ಹಂತ 6:** ಈಗ ಎಲ್ಲ 6 ಆಜ್ಞೆಗಳನ್ನು ಬೇರೆ ಬೇರೆ ಅನುಕ್ರಮದಲ್ಲಿ ಹೇಳುವುದು. ಮಕ್ಕಳು ಹೇಗೆ ಮಾಡುತ್ತಾರೆ ಎಂದು ಗಮನಿಸಿ, ಯಾರಿಗಾದರೂ ಗೊಂದಲವಿದ್ದರೆ, ಸರಿಯಾಗಿ ಮಾಡುತ್ತಿಲ್ಲ ಎನ್ನಿಸಿದರೆ, ಆ ಮಕ್ಕಳನ್ನು ಹೊರಗೆ ಕರೆದು, ಅವರಿಗೆ ಪ್ರತ್ಯೇಕವಾಗಿ ಇನ್ನೊಮ್ಮೆ ಮಾಡಿಸಿ, ಅವರು ಎಲ್ಲ ಆಜ್ಞೆಗಳನ್ನು ಬೇರೆ ಬೇರೆ ಅನುಕ್ರಮದಲ್ಲಿ ಸರಿಯಾಗಿ ಮಾಡುವವರೆಗೂ ಅಭ್ಯಾಸ ಮಾಡಿಸಿ.

ಒಂದು ತಿಂಗಳಿನವರೆಗೆ ಈ 6 ಆಜ್ಞೆಗಳನ್ನು ಆಗಾಗ ಮಾಡಿಸುತ್ತಿರುವುದು.



## ನಾನು ಮತ್ತು ನನ್ನ ಸುತ್ತಲಿರುವುದು

# ಗಾತ್ರದ ಬಗ್ಗೆ ತಿಳಿಯುವುದು






# ಕಲಿಕಾ ಫಲಿತಗಳು

## ಗಾತ್ರದ ಬಗ್ಗೆ ತಿಳಿಯುವುದು

| 3–4 ವರ್ಷಗಳು | 4–5 ವರ್ಷಗಳು | 5–6 ವರ್ಷಗಳು |
| --- | --- | --- |
| 1 ಗಾತ್ರದ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳುವುದು | 1 ಪರಸ್ಪರ ಗಾತ್ರಗಳನ್ನು ವಿವರಿಸಲು ದೊಡ್ಡದು, ಸಣ್ಣದು ಇತ್ಯಾದಿ ಭಾಷೆಯನ್ನು ಬಳಸುವುದು. | 1 2 ಆಯಾಮ ಬಳಸಿಕೊಂಡು, ಅದರಲ್ಲಿ ಒಂದು ಗಾತ್ರ, ವಸ್ತುಗಳನ್ನು ವರ್ಗೀಕರಿಸುವುದು (ಗಾತ್ರ ಮತ್ತು ಬಣ್ಣ, ಅಥವಾ ಗಾತ್ರ ಮತ್ತು ಆಕಾರ) |
| 2 ದೊಡ್ಡ ಹಾಗೂ ಸಣ್ಣ, ದಪ್ಪ ಹಾಗೂ ತೆಳು, ಎತ್ತರ ಹಾಗೂ ಗಿಡ್ಡ – ಇಂತಹ ಲಕ್ಷಣಗಳನ್ನು ವಿವರಿಸುವುದು. | 2 ವಸ್ತುಗಳನ್ನು ಗಾತ್ರದ ಆಧಾರದ ಮೇಲೆ ವರ್ಗೀಕರಿಸುವುದು. | 2 ವಸ್ತುಗಳ ಗಾತ್ರಗಳನ್ನು ಪರಸ್ಪರ ಹೋಲಿಸುವರು ಮತ್ತು ವಸ್ತುಗಳ ಗಾತ್ರವನ್ನು ಆಧರಿಸಿ 5 ಹಂತಗಳವರೆಗೆ ಅನುಕ್ರಮವಾಗಿ ಇಡುವುದು. |
| 3 ವಸ್ತುಗಳನ್ನು ಗಾತ್ರದ ಆಧಾರದ ಮೇಲೆ ಬೇರೆಮಾಡುವುದು (ವಿಂಗಡಿಸುವುದು ಮತ್ತು ಹೊಂದಿಸುವುದು) | 3 ವಸ್ತುಗಳನ್ನು 3 ಹಂತಗಳವರೆಗೆ ಅನುಕ್ರಮವಾಗಿ ಇಡಲು ಪರಸ್ಪರ ವಸ್ತುಗಳ ಗಾತ್ರಗಳನ್ನು ಹೋಲಿಕೆ ಮಾಡಿ, ಪ್ರತ್ಯೇಕಿಸುವುದು. | 3 ಒಂದು ಸರಣಿಯಲ್ಲಿ ಅಥವಾ ವಿನ್ಯಾಸದಲ್ಲಿ ಗುಂಪಿಗೆ ಸೇರದೇ ಇರುವುದನ್ನು ಗುರುತಿಸುವರು |
| 4 ಎಬಿ... ಎಬಿ (ಅಇ, ಅಇ ಇತ್ಯಾದಿ) ಈ ಬಗೆಯ ಸರಳ ವಿನ್ಯಾಸಗಳನ್ನು ಪುನರಾವರ್ತಿಸುವುದು (ದೊಡ್ಡದು, ಸಣ್ಣದು, ದೊಡ್ಡದು, ಸಣ್ಣದು) | 4 3–4 ಸಂಯೋಜನೆ ಇರುವಂತಹ ವಿನ್ಯಾಸದ ಪುನರಾವರ್ತನೆ ಮಾಡುವುದು<br>ಅ) ದೊಡ್ಡದು–ದೊಡ್ಡದು/ಸಣ್ಣದು–ಸಣ್ಣದು<br>ಆ) ದೊಡ್ಡದು–ಸಣ್ಣದು/ಸಣ್ಣದು–ದೊಡ್ಡದು<br>ಇ) ದೊಡ್ಡದು–ಸಣ್ಣದು/ಸಣ್ಣದು–ಸಣ್ಣದು/ಸಣ್ಣದು ದೊಡ್ಡದು ಹೀಗೆಯೇ ವಿಸ್ತರಿಸುವುದು | 4 ಸರಳವಾದ ಕ್ರಮವನ್ನು ತಿರುವು ಮುರುವು ಅಥವಾ ಉಲ್ಟಾ ಮಾಡುವುದು ಮತ್ತು ಉಲ್ಟಾ ಕ್ರಮದಲ್ಲಿ ಇಡುವುದು |
| 5 ಸರಳವಾದ ಪಜಲ್ ಬಿಡಿಸಲು ಗಾತ್ರ ಅಂದಾಜು ಮಾಡುವ ಪರಿಕಲ್ಪನೆಯನ್ನು ಬಳಸಿಕೊಳ್ಳುವುದು. | 5 ಗಾತ್ರ ಮತ್ತು ಸ್ಥಳಕ್ಕೆ ಸಂಬಂಧಿಸಿದಂತೆ ಅಂದಾಜುಗಳನ್ನು ಮಾಡುವುದು. | 5 ಮೊದಲಿನ, ನಂತರದ, ಮೇಲಿನ– ಹೀಗೆ ಸೂಚನೆಗಳನ್ನು ಅನುಸರಿಸಿ ಸರಳವಾದ ವಿನ್ಯಾಸಗಳನ್ನು ರಚಿಸುವುದು. |
| | | 6 ಅನೌಪಚಾರಿಕ ವಿಧಾನಗಳನ್ನು ಬಳಸಿಕೊಂಡು ಗಾತ್ರ, ಸ್ಥಳ ಮತ್ತು ಪರಿಮಾಣದ ಅಂದಾಜು ಮಾಡುವುದು (ಉದಾ: ಒಂದು ಗೋಡೆ ಮಾಡಲು ಬೇಕಾದ ಸಣ್ಣ ಮತ್ತು ದೊಡ್ಡ ಬ್ಲಾಕ್‌ಗಳ ಸಂಖ್ಯೆಯನ್ನು ಅಂದಾಜು ಮಾಡುವುದು) |

# ಗಾತ್ರದ ಬಗ್ಗೆ ತಿಳಿಯುವುದು



## ಕಲಿಕಾ ಉದ್ದೇಶಗಳು

ಈ ಅಧ್ಯಾಯದ ಕೊನೆಯಲ್ಲಿ ಮಕ್ಕಳು ಈ ಕೆಳಗಿನ ಸಾಮರ್ಥ್ಯಗಳನ್ನು ಗಳಿಸಿರುತ್ತಾರೆ –

- ಪರಸ್ಪರ ಗಾತ್ರಗಳನ್ನು ವಿವರಿಸಲು ದೊಡ್ಡದು, ಸಣ್ಣದು ಇತ್ಯಾದಿ ಭಾಷೆಯನ್ನು ಬಳಸುವುದು.
- ವಸ್ತುಗಳನ್ನು ಗಾತ್ರದ ಆಧಾರದ ಮೇಲೆ ವರ್ಗೀಕರಿಸುವುದು.
- ವಸ್ತುಗಳನ್ನು 3 ಹಂತಗಳವರೆಗೆ ಅನುಕ್ರಮವಾಗಿ ಇಡಲು ಪರಸ್ಪರ ವಸ್ತುಗಳ ಗಾತ್ರಗಳನ್ನು ಹೋಲಿಕೆ ಮಾಡಿ, ಪ್ರತ್ಯೇಕಿಸುವುದು.
- 3–4 ಸಂಯೋಜನೆ ಇರುವಂತಹ ವಿನ್ಯಾಸದ ಪುನರಾವರ್ತನೆ ಮಾಡುವುದು

  ಅ) ದೊಡ್ಡದು–ದೊಡ್ಡದು/ಸಣ್ಣದು–ಸಣ್ಣದು

  ಆ) ದೊಡ್ಡದು–ಸಣ್ಣದು/ಸಣ್ಣದು–ದೊಡ್ಡದು

  ಇ) ದೊಡ್ಡದು–ಸಣ್ಣದು/ಸಣ್ಣದು–ಸಣ್ಣದು/ಸಣ್ಣದು ದೊಡ್ಡದು ಹೀಗೆಯೇ ವಿಸ್ತರಿಸುವುದು
- ಗಾತ್ರ ಮತ್ತು ಸ್ಥಳಕ್ಕೆ ಸಂಬಂಧಿಸಿದಂತೆ ಅಂದಾಜುಗಳನ್ನು ಮಾಡುವುದು.

## ಸಿದ್ಧತಾ ಚಟುವಟಿಕೆ

### ಕಲಿಕಾ ಫಲಿತಗಳು

ವಸ್ತುಗಳ ಗಾತ್ರಗಳನ್ನು ವಿವರಿಸಲು ಸೂಕ್ತವಾದ ಭಾಷೆಯನ್ನು ಅಂದರೆ ದೊಡ್ಡದು, ಸಣ್ಣದು ಇತ್ಯಾದಿಯನ್ನು ಅರ್ಥಮಾಡಿಕೊಳ್ಳುವುದು ಮತ್ತು ಬಳಸುವುದು.

### ಕಲಿಕಾ ಸಾಮಗ್ರಿಗಳು

ಬ್ಲಾಕ್‌ಗಳು, ತರಕಾರಿಗಳ **CF1.1 1-3** ಫ್ಲಾಶ್ ಕಾರ್ಡುಗಳು / ನಿಜವಾದ ತರಕಾರಿಗಳು




**ಚಟುವಟಿಕೆ 1**

### ಸಂಖ್ಯೆಗಳ ಪರಿಚಯ

**ಏಕೆ ಹೀಗಿದೆ? ಶಿಶುಗೀತೆಯನ್ನು ಕಲಿಸುವುದು.**

*ನಂದು ಬಿಂದು*
*ನುಗ್ಗೆಕಾಯಿ ತೊಂಡೇಕಾಯಿ (ಉದ್ದ ಮತ್ತು ಗಿಡ್ಡ)*
*ಕುಂಬಳಕಾಯಿ ನಿಂಬೇಕಾಯಿ (ದೊಡ್ಡ ಮತ್ತು ಸಣ್ಣ)*
*ಟೊಮೆಟೋ ಮೆಣಸಿನಕಾಯಿ (ದಪ್ಪ ಮತ್ತು ತೆಳು)*

### ಸೂಚನೆಗಳು

1. ಈ ಮೇಲಿನ ಶಿಶುಗೀತೆಯನ್ನು ಮಕ್ಕಳಿಗೆ ಕಲಿಸುವುದು ಮತ್ತು ಚರ್ಚಿಸುವುದು.
2. ಶಿಶುಗೀತೆಯ ಆರಂಭದಲ್ಲಿ ಹೇಳಿದ ಎರಡು ತರಕಾರಿಗಳನ್ನು ಒಂದೇ ಸಲಕ್ಕೆ ತರುವುದು ಮತ್ತು ಮಕ್ಕಳಿಗೆ ಅವನ್ನು ಎಚ್ಚರಿಕೆಯಿಂದ ಗಮನಿಸಲು ಹೇಳುವುದು. ಅವರು ಅವನ್ನು ಈಗಾಗಲೇ ನೋಡಿದ್ದಾರೆಯೇ ಮತ್ತು ಏನೆಂದು ಕರೆಯುತ್ತಾರೆ ಎಂದು ಕೇಳುವುದು. ಅವರು ನೋಡಿದ್ದರೆ, ಇದನ್ನು ಏನೆಂದು ಕರೆಯುತ್ತಾರೆ, ಈ ಎರಡೂ ತರಕಾರಿಗಳು ನೋಡಲು ಯಾವ ರೀತಿಯಲ್ಲಿ ಪೂರ್ಣ ಬೇರೆಯಾಗಿ ಕಾಣುತ್ತದೆ ಎಂದು ಕೇಳುವುದು. (ಮಕ್ಕಳು ವ್ಯತ್ಯಾಸವನ್ನು ನೋಡಲು ನಿಜವಾದ ತರಕಾರಿಗಳನ್ನು ಅಥವಾ ತರಕಾರಿಯ ಚಿತ್ರಗಳನ್ನು ಗಮನಿಸುವಂತೆ ಮಾಡಬಹುದು. ಸಾಧ್ಯವಿದ್ದಷ್ಟೂ ನಿಜವಾದ ತರಕಾರಿಗಳನ್ನೇ ಬಳಸುವುದು)
3. ಮಕ್ಕಳಿಗೆ ಅವರಿಗೆ ಗೊತ್ತಿರುವ ಯಾವುದೇ ಪದಗಳನ್ನು ಬಳಸಲು ಆಸ್ಪದ ನೀಡುವುದು – (ಮಕ್ಕಳಿಗೆ ನೇರವಾಗಿ ಹೇಳಬಾರದು ಅಥವಾ ತಿದ್ದಬಾರದು). ಅವರು ಸುಮ್ಮನೇ ದೊಡ್ಡದು ಮತ್ತು ಸಣ್ಣದು ಎಂದು ಪ್ರತಿಯೊಂದೂ ವಸ್ತುವಿಗೆ ಹೇಳಬಹುದು.
4. ಬೇರೆ ಬೇರೆ ಗಾತ್ರಗಳನ್ನು ವಿವರಿಸಲು ಹೊಸ ಪದಗಳನ್ನು ಆಲೋಚಿಸುವಂತೆ, ಮನೆಯಲ್ಲಿ ಬಳಸುವ ಬೇರೆ ಪದಗಳನ್ನು ಹೇಳುವಂತೆ ಮಕ್ಕಳಿಗೆ ಗುಂಪಿನಲ್ಲಿ ಉತ್ತೇಜಿಸುವುದು. ಮಕ್ಕಳಿಗೆ ಪದ ಭಂಡಾರವನ್ನು ಪರಿಚಯಿಸಲು ಅಥವಾ ಅದನ್ನು ಪುನರ್‌ಬಲನಗೊಳಿಸಲು ಅವಕಾಶ ಸಿಗಬೇಕು.
5. ಮೊದಲ 2 ತರಕಾರಿಗಳನ್ನು ತೋರಿಸುವುದು ಮುಗಿಸಿದ ನಂತರ, ಅವುಗಳನ್ನು ಅಕ್ಕಪಕ್ಕ ಇಟ್ಟು, ಇದು 'ಉದ್ದವಿದೆ, ಇದು ಗಿಡ್ಡವಿದೆ' ಎಂದು ಹೇಳುವುದು.
6. ಎಲ್ಲ ಮೂರು ಜೋಡಿ ತರಕಾರಿಗಳ ಜೊತೆಗೂ ಹೀಗೆಯೇ ಮಾಡುವುದು
7. ಕೊನೆಯಲ್ಲಿ, ಎಲ್ಲ 6 ತರಕಾರಿಗಳನ್ನು ಜೋಡಿಯಾಗಿ ಒಂದರ ಪಕ್ಕ ಇಟ್ಟು, ಸರಿಯಾದ ಪದಗಳನ್ನು ಬಳಸಿಕೊಂಡು ಅವುಗಳನ್ನು ವಿವರಿಸುವುದು.

## ಅನ್ವೇಷಣಾ ಚಟುವಟಿಕೆ

### ಕಲಿಕಾ ಫಲಿತಗಳು

ದೈನಂದಿನ ಬದುಕಿನಲ್ಲಿ ತೋರುವಂತೆ ಪರಿಕಲ್ಪನೆಗಳನ್ನು ನಿರೂಪಿಸಲು ಮತ್ತು ಅದರ ಮೇಲೆ ನಿರ್ಣಯಗಳನ್ನು ಆಲೋಚಿಸಲು/ಅವಲೋಕಿಸಲು ಸಹಾಯ ಮಾಡುವುದು.

### ಕಲಿಕಾ ಸಾಮಗ್ರಿಗಳು

1. ತರಗತಿ ಕೋಣೆಯಲ್ಲಿರುವ ಬೇರೆ ಬೇರೆ ಗಾತ್ರದ ವಸ್ತುಗಳು
2. ಪತ್ರಿಕೆಯ ಅಥವಾ ಹಾಳೆಯ ಸಣ್ಣ ತುಂಡುಗಳು ಮತ್ತು ಸೀಮೆಸುಣ್ಣ
3. ಅಂಟು/ಗೋಂದು, ಗೋಧಿಹಿಟ್ಟು/ಜೇಡಿಮಣ್ಣು

### ಸೂಚನೆಗಳು

**ಚಟುವಟಿಕೆ 1**

1. ಮಕ್ಕಳನ್ನು ಸಣ್ಣ ಗುಂಪುಗಳನ್ನಾಗಿ ಮಾಡುವುದು
2. ಪ್ರತಿಯೊಂದೂ ಮಗುವಿಗೂ ಗೋಡೆಗೆ ತಾಕಿ ನಿಲ್ಲುವಂತೆ ಹೇಳಿ, ಮಗುವಿನ ಎತ್ತರವನ್ನು ತೆಗೆದುಕೊಳ್ಳುವುದು.
3. ಪ್ರತೀ ಮಗುವಿನ ಎತ್ತರವನ್ನು ಗೋಡೆಯ ಮೇಲೆ ಗುರುತು ಮಾಡಿ, ಹಾಳೆಯ/ಪತ್ರಿಕೆಯ ತುಣುಕನ್ನು ಅಂಟಿಸಿ.
4. ತುಣುಕಿನ ಮೇಲೆ ಮಗುವಿನ ಹೆಸರಿನ ಲೇಬಲ್ ಅಂಟಿಸುವುದು.
5. ಮಗುವಿಗೆ ಇವುಗಳನ್ನು ಗಮನಿಸಲು ಹೇಳುವುದು – 1) ಪ್ರತೀ ಗುಂಪಿನಲ್ಲಿ ಯಾರು ಎತ್ತರವಿದ್ದಾರೆ? 2) ಪ್ರತೀ ಗುಂಪಿನಲ್ಲಿ ಯಾರು ತುಂಬ ಗಿಡ್ಡವಿದ್ದಾರೆ? 3) ಇಬ್ಬರು ಮಕ್ಕಳ ಎತ್ತರವನ್ನು ಹೋಲಿಕೆ ಮಾಡಿ, ಯಾರು ಎತ್ತರವಿದ್ದಾರೆ ಮತ್ತು ಯಾರು ಗಿಡ್ಡವಿದ್ದಾರೆ – ಎಂದು ಹೇಳಲು ತಿಳಿಸುವುದು.
6. ಪ್ರತಿ ಮಗುವಿಗೂ ಇನ್ನೊಂದು ಮಗುವಿನ ಜೊತೆಗೆ ಅವರ ಎತ್ತರವನ್ನು ಹೋಲಿಕೆ ಮಾಡುವ ಅವಕಾಶ ಕೊಡಿ, ಹೆಚ್ಚು ಎತ್ತರ ಅಥವಾ ಗಿಡ್ಡ ಎಂಬ ಪದವನ್ನು ಬಳಸಿಕೊಂಡು, ವಿವರಿಸಲು ಹೇಳುವುದು.
7. ಚುಟುವಟಿಕೆಯ ಕೊನೆಯಲ್ಲಿ ಮಕ್ಕಳನ್ನು ಅವರ ಎತ್ತರಕ್ಕೆ ಅನುಸಾರವಾಗಿ ನಿಲ್ಲಿಸುವುದು.

**ಚಟುವಟಿಕೆ 2**

1. ಇಬ್ಬರು ಮಕ್ಕಳನ್ನು ಜೋಡಿ ಮಾಡುವುದು
2. ತರಗತಿ ಕೋಣೆಯಲ್ಲಿ ಒಮ್ಮೆ ಸುತ್ತಲೂ ನೋಡಿ, ಯಾವುದು ದೊಡ್ಡದಿದೆ ಮತ್ತು ಯಾವುದು ಚಿಕ್ಕದಿದೆ ಎಂದು ಕಂಡುಹಿಡಿದು, ಹೇಳುವಂತೆ ತಿಳಿಸುವುದು.
3. ಅವರಿಗೆ ತರಗತಿ ಕೋಣೆಯಲ್ಲಿ ಒಂದು ಸುತ್ತು ಹಾಕಿ, ಎರಡು ವಸ್ತುಗಳನ್ನು ಕೈಯಲ್ಲಿ ಹಿಡಿದು ಬಂದು, ವೃತ್ತಾಕಾರವಾಗಿ ಕುಳಿತುಕೊಳ್ಳುವಂತೆ ಹೇಳುವುದು ಮತ್ತು ಇದಕ್ಕೆ ಐದಾರು ನಿಮಿಷ ಸಮಯ ಕೊಡುವುದು
4. ಪ್ರತೀ ಜೋಡಿಯೂ ತಾವು ತಂದ ಎರಡು ವಸ್ತುಗಳನ್ನು ತೋರಿಸಿ, ಹೇಗೆ ಅವು ಎರಡೂ ಬೇರೆಬೇರೆಯಾಗಿವೆ ಎಂಬುದನ್ನು ವಿವರಿಸುವುದು.
5. ವ್ಯತ್ಯಾಸವನ್ನು ವಿವರಿಸಲು ಸರಿಯಾದ ಪದಗಳನ್ನು ಬಳಸುವಂತೆ ಅವರಿಗೆ ಸಹಾಯ ಮಾಡುವುದು (ಮಕ್ಕಳು ವ್ಯತ್ಯಾಸವನ್ನು ಹೇಳುವುದು ಬಹಳ ಮುಖ್ಯ. ಅವರು ಸರಿಯಾಗಿ ಆಯ್ಕೆ ಮಾಡಿಕೊಂಡಿರಬಹುದು, ಆದರೆ ಅವರು ವ್ಯತ್ಯಾಸವನ್ನು ವ್ಯಕ್ತಪಡಿಸಲು ಸಹಾಯ ಮಾಡಬೇಕು)

## ಅನ್ವೇಷಣಾ ಚಟುವಟಿಕೆ

**ಚಟುವಟಿಕೆ 3**

1. ಇಬ್ಬರು ಮಕ್ಕಳನ್ನು ಜೋಡಿ ಮಾಡುವುದು
2. ಜೇಡಿಮಣ್ಣನ್ನು (ಜೇಡಿಮಣ್ಣು ಸಿಗದಿದ್ದರೆ ಕಲೆಸಿದ ಗೋಧಿಹಿಟ್ಟು ಅಥವಾ ಕೆಸರಿನ ಉಂಡೆ (or mud dough) ಬಳಸಿ, ಆದರೆ ಸಾಕಷ್ಟು ಪ್ರಮಾಣದಲ್ಲಿ ಕೊಡಿ)
3. ಮಕ್ಕಳಿಗೆ ಇದನ್ನು ಬಳಸಿಕೊಂಡು, ದಪ್ಪ ಹಾಗೂ ತೆಳು, ದೊಡ್ಡ ಹಾಗೂ ಸಣ್ಣ, ಎತ್ತರ ಮತ್ತು ಗಿಡ್ಡ ಮಾದರಿಗಳನ್ನು ಮಾಡುವಂತೆ ತಿಳಿಸುವುದು.

**ಚಟುವಟಿಕೆ 4**

1. ಮಕ್ಕಳನ್ನು ಉದ್ಯಾನಕ್ಕೆ ಕರೆದುಕೊಂಡು ಹೋಗುವುದು. ಅಲ್ಲಿ ಸುತ್ತಲೂ ಇರುವ ವಸ್ತುಗಳನ್ನು ಗಮನಿಸುವಂತೆ ತಿಳಿಸುವುದು.
2. ಎತ್ತರವಾದ ಮರ ಅಥವಾ ಗಿಡ್ಡವಾಗಿರುವ ಗಿಡ/ಮರವನ್ನು ತೋರಿಸುವಂತೆ ಕೇಳುವುದು. ಈಗ ಅವರಿಗೆ ಒಂದು ಮನೆಯನ್ನು ತೋರಿಸುವಂತೆ ಹೇಳುವುದು.
3. ಮಗುವು ಒಂದು ಮನೆಯನ್ನು ತೋರಿಸಿದ ನಂತರ, ಅದಕ್ಕಿಂತ ದೊಡ್ಡ ಮನೆಯನ್ನು ತೋರಿಸುವಂತೆ ಹೇಳುವುದು. ಇನ್ನೊಂದು ಮಗು ಅದಕ್ಕಿಂತ ಸಣ್ಣದಿರುವ ಮನೆಯನ್ನು ತೋರಿಸಲಿ.
4. ಇದೇ ಪ್ರಕ್ರಿಯೆಯನ್ನು ಗಿಡಗಳು, ಕಿಟಕಿಗಳು, ಗೇಟು, ಎಲೆಗಳ ಜೊತೆಗೆ ಪುನರಾವರ್ತನೆ ಮಾಡುವುದು.
5. ಮಕ್ಕಳು ಸುಮ್ಮನೇ ಕೈ ತೋರಿಸುವುದು ಮಾತ್ರವಲ್ಲ, 'ಅದು ದೊಡ್ಡದಿದೆ ಅಥವಾ ಅದು ಸಣ್ಣದಿದೆ' ಎಂದು ಹೇಳಲು ಸಮರ್ಥರಾಗಬೇಕು.

**ಚಟುವಟಿಕೆ 5**

1. ಶಾಲೆಗೆ ಬರುವಾಗ ಒಂದೇ ಗಿಡದ ಎಲೆ, ಒಂದು ಕಡ್ಡಿ ಅಥವಾ ಕಲ್ಲುಗಳನ್ನು ಸಂಗ್ರಹಿಸಲು ಮಕ್ಕಳಿಗೆ ಹೇಳುವುದು. ಆರಂಭಿಕ ಹಂತಗಳಲ್ಲಿ ಮಕ್ಕಳಿಗೆ ಏನಾದರೂ ವಸ್ತುಗಳನ್ನು ತರಲು ಹೇಳಿದಾಗ, ಅವರು ತರಲು ಮರೆಯುತ್ತಾರೆ. ನೀವು ಎಲ್ಲ ಮಕ್ಕಳೂ ವಸ್ತುಗಳನ್ನು ತರುವವರೆಗೆ ಬೇರೆ ಚಟುವಟಿಕೆಗಳನ್ನು ಮುಂದುವರೆಸಬಹುದು. ಇದು ದಿನಚರಿಯ ವಾಡಿಕೆಯನ್ನು ಸಜ್ಜುಗೊಳಿಸಲು ಬಹಳ ಮುಖ್ಯ. ಚಟುವಟಿಕೆಗಳು 2–3 ದಿನ ಮುಂದುವರೆಯಬಹುದು ಅಥವಾ ಎಲ್ಲ ಮಕ್ಕಳೂ ವಸ್ತುಗಳನ್ನು ತರಲೂಬಹುದು.
2. ಮಕ್ಕಳು ತಾವೇನು ಸಂಗ್ರಹಿಸಿದ್ದೇವೆ ಎಂಬುದನ್ನು ತೋರಿಸಲಿ. ಅವರು ತಾವು ತಂದಿರುವ ವಸ್ತು ದೊಡ್ಡದು ಅಥವಾ ಚಿಕ್ಕದು, ಏನೆಂದು ಯೋಚಿಸುತ್ತಾರೆ ಎಂದು ಕೇಳುವುದು.
3. ತರಗತಿಯ ಒಂದು ಮೂಲೆಯಲ್ಲಿ ದೊಡ್ಡದೊಂದು ಬಾಕ್ಸ್ ಇಡಿ, ಮಕ್ಕಳು ತಂದಿರುವ ವಸ್ತುಗಳನ್ನು ಅದರಲ್ಲಿ ಹಾಕಲು ಆಸ್ಪದ ಕಲ್ಪಿಸುವುದು.

## ವಿಸ್ತರಣಾ ಚಟುವಟಿಕೆಗಳು

## ವರ್ಗೀಕರಣ – ವಿಂಗಡಿಸುವುದು ಮತ್ತು ಹೊಂದಿಸುವುದು

### ಕಲಿಕಾ ಫಲಿತಗಳು

ಮಕ್ಕಳಿಗೆ ವಸ್ತುಗಳನ್ನು ಅವುಗಳ ಗಾತ್ರವನ್ನು ಆಧರಿಸಿ ಬೇರೆಬೇರೆ ಮಾಡಲು (ವಿಂಗಡಿಸುವುದು ಮತ್ತು ಹೊಂದಿಸುವುದು) ಸಹಾಯ ಮಾಡುವುದು.




### ಕಲಿಕಾ ಸಾಮಗ್ರಿಗಳು

1. 100 ಡಾಮಿನೊ ಕಾರ್ಡ್‌ಗಳು – 20 ಕಾರ್ಡ್‌ಗಳು ಒಂದು ಸೆಟ್‌ನಲ್ಲಿ (ದೊಡ್ಡ ಹುಡುಗಿ/ಸಣ್ಣ ಹುಡುಗಿ) (ದೊಡ್ಡ ಮರ/ಸಣ್ಣ ಮರ) (ದೊಡ್ಡ ಪ್ರಾಣಿ/ಸಣ್ಣ ಪ್ರಾಣಿ) (ನುಗ್ಗೇಕಾಯಿ ಮತ್ತು ತೊಂಡೇಕಾಯಿ) ಮತ್ತು (ದೊಡ್ಡ ವೃತ್ತ/ಸಣ್ಣ ವೃತ್ತ) ಕಿಟ್‌ನಲ್ಲಿ ಕೊಟ್ಟಿರುವ ಈ ವಸ್ತುಗಳು ಅಥವಾ ಶಾಲೆಯ ದೊಡ್ಡ ಮಕ್ಕಳು ತಮ್ಮ ಕಲಾ ಅಭ್ಯಾಸದ ಭಾಗವಾಗಿ ಮಾಡಿರುವುದು
2. ಮಣಿಗಳು, ಗುಂಡಿಗಳು, ಕೋಲಾಟದ ಕೋಲುಗಳು, ಬ್ಲಾಕ್‌ಗಳು, ಬಾಟಲಿ ಮುಚ್ಚಳ, ಮೂರು ವಿಭಿನ್ನ ಗಾತ್ರದಲ್ಲಿರಬೇಕು ಮತ್ತು ಒಟ್ಟು 60 ಇರಲಿ.
3. ಬೇರೆ ಇನ್ನಿತರ ವಸ್ತುಗಳನ್ನು ತರಗತಿ ಕೋಣೆಯಲ್ಲಿಯೇ ತೆಗೆದುಕೊಳ್ಳಬಹುದು. ಬ್ಲಾಕ್‌ಗಳು/ಚೆಂಡುಗಳು/ಕೋಲಾಟದ ಕೋಲುಗಳು ಮತ್ತು ನಂತರ ಸಣ್ಣದಾದ ವಸ್ತುಗಳನ್ನು ಪರಿಗಣಿಸಬಹುದು.

### ಶಿಕ್ಷಕರ ಪೂರ್ವಸಿದ್ಧತೆ:

- ಪ್ರತೀ ಗುಂಪಿನಲ್ಲಿ ಯಾವ ಮಕ್ಕಳು ಇರುತ್ತಾರೆ ಎಂದು ಒಂದು ಪಟ್ಟಿ ಮಾಡಿ. ಇನ್ನು ಆ ತಿಂಗಳಿಡೀ ನಡೆಯುವ ಗುಂಪು ಚಟುವಟಿಕೆಗೆ ಇದೇ ಗುಂಪು ಮುಂದುವರೆಯುತ್ತದೆ ಎಂದು ಹೇಳುವುದು. ತಿಂಗಳ ಕೊನೆಯಲ್ಲಿ ಗುಂಪುಗಳನ್ನು ಬದಲಿಸಿ, ಆಗ ಎಲ್ಲ ಮಕ್ಕಳೂ ಪ್ರತೀ ತಿಂಗಳೂ ಬೇರೆಬೇರೆ ಗುಂಪುಗಳಲ್ಲಿ ಕೆಲಸ ಮಾಡುವ ಅವಕಾಶ ಪಡೆಯುತ್ತಾರೆ.
- ತರಗತಿ ಕೋಣೆಯ ಮೂಲೆಯಲ್ಲಿ ಈ ಎಲ್ಲ ವಸ್ತುಗಳ ಒಂದು ಸಣ್ಣ ರಾಶಿ/ಗುಡ್ಡೆಗಳನ್ನಾಗಿ ಮಾಡಿ. ಪ್ರತೀ ಗುಂಪಿಗೂ ಚಟುವಟಿಕೆ ಮಾಡಲು ಒಂದೊಂದು ಗುಡ್ಡೆ ಇರುತ್ತದೆ.

### ಸೂಚನೆಗಳು

**ಚಟುವಟಿಕೆ 1**

1. ಐದು ಮಕ್ಕಳ ಒಂದು ಗುಂಪು ಮಾಡುವುದು, ಪ್ರತೀ ಗುಂಪಿಗೂ ಮಣಿಗಳು, ಗುಂಡಿಗಳು, ಕೋಲಾಟದ ಕೋಲುಗಳು, ಕಲ್ಲುಗಳು, ಬಾಟಲಿ ಮುಚ್ಚಳಗಳು ಇತ್ಯಾದಿ (ಮಕ್ಕಳು ಸಂಗ್ರಹಿಸಿದ) ವಸ್ತುಗಳನ್ನು ಕೊಡುವುದು.
2. ಮಕ್ಕಳು ಆ ಎಲ್ಲ ವಸ್ತುಗಳನ್ನೂ ಗಾತ್ರದ ಆಧಾರದ ಮೇಲೆ ಮೂರು ಬೇರೆಬೇರೆ ಗುಂಪುಗಳಾಗಿ ವಿಂಗಡಿಸಬೇಕು ಎಂದು ಹೇಳುವುದು.
3. ಗುಂಪುಗಳು ವಿಂಗಡಿಸುವ ಕೆಲಸವನ್ನು ಮುಗಿಸಿದ ನಂತರ, (ಮುಗಿಸಿದವರು ಕೈ ಎತ್ತಬೇಕು ಎಂದು ಸೂಚನೆ ನೀಡಿ) ನೀವು ಗುಂಪಿನ ಸುತ್ತಲೂ ಒಮ್ಮೆ ಹೋಗುವುದು. ಮಕ್ಕಳು ತಾವು ಹೇಗೆ ವಸ್ತುಗಳನ್ನು ವಿಂಗಡಿಸಿದ್ದೇವೆ ಎಂದು ಪ್ರತಿಯೊಂದೂ ಗುಡ್ಡೆಯನ್ನು ತೋರಿಸುತ್ತ, ಸರಿಯಾದ ಪದಗಳನ್ನು ಬಳಸಿಕೊಂಡು ವಿವರಿಸುವುದು.
4. ಮಕ್ಕಳು ವಿಂಗಡಿಸುವ ಈ ಕೆಲಸವನ್ನು ಪೂರ್ಣಗೊಳಿಸಿದ ನಂತರ, ಬೇರೆಬೇರೆ ರೀತಿಯ ವಸ್ತುಗಳ ಜೊತೆಗೆ ಕೆಲಸ ಮಾಡಬಹುದು. ಕನಿಷ್ಠ ಐದು ಬೇರೆಬೇರೆ ಬಗೆಯ ವಸ್ತುಗಳನ್ನು ಗುಂಪುಗಳ ನಡುವೆ ಬದಲಾಯಿಸಿರಿ (ಮಣಿಗಳು, ಗುಂಡಿಗಳು, ಕೋಲಾಟದ ಕೋಲುಗಳು, ಕಲ್ಲುಗಳು, ಬಾಟಲಿ ಮುಚ್ಚಳಗಳು, ಬ್ಲಾಕ್‌ಗಳು ಇತ್ಯಾದಿ). ಅವರು ವಸ್ತುಗಳನ್ನು ಮೂರು ಗುಂಪುಗಳಾಗಿ ವಿಂಗಡಿಸುವುದು.

## ವರ್ಗೀಕರಣ – ವಿಂಗಡಿಸುವುದು ಮತ್ತು ಹೊಂದಿಸುವುದು

**ಚಟುವಟಿಕೆ 2**

1. ಮಕ್ಕಳು ಗುಂಪಿನಲ್ಲಿ ಬೇರೆಬೇರೆ ವಸ್ತುಗಳ ಜೊತೆ ಚಟುವಟಿಕೆಯ ಕೆಲಸ ಮಾಡಿದ ನಂತರ, ಪ್ರತಿಯೊಂದೂ ಗುಂಪಿನ ಬಳಿ ಇರುವ ಎಲ್ಲ ವಸ್ತುಗಳನ್ನೂ ಮತ್ತೆ ಗುಂಪುಗೂಡಿಸಿ, ಗುಡ್ಡೆ ಮಾಡುವುದು. ಪ್ರತೀ ಮಗುವೂ ಆ ವಸ್ತುಗಳ ರಾಶಿಯಿಂದ ಒಂದೇ ಗಾತ್ರದ ವಸ್ತುಗಳನ್ನು ಹೋಲಿಕೆ ಮಾಡಿ, ಜೊತೆ ಮಾಡಬೇಕು (ಅಗತ್ಯವೆನ್ನಿಸಿದರೆ ಒಮ್ಮೆ ಮಾಡಿ ತೋರಿಸುವುದು). ಪ್ರತೀ ಮಗುವೂ ಎರಡು–ಮೂರು ಜೋಡಿ ವಸ್ತುಗಳನ್ನು ತೆಗೆದಿಡಬೇಕು.
2. ಪ್ರತೀ ಗುಂಪಿನ ಪಕ್ಕ ಹೋಗಿ, ಮಕ್ಕಳಿಗೆ ಅವರೇನು ಮಾಡಿದ್ದಾರೆ ಎಂದು ಮತ್ತು ಅವರು ತೆಗೆದಿರಿಸಿದ ಜೋಡಿ ವಸ್ತುಗಳನ್ನು ವಿವರಿಸಲು ಹೇಳುವುದು.
3. ಬೇರೆ ಗಾತ್ರದ ಒಂದು ವಸ್ತುವನ್ನು ಎತ್ತಿಕೊಂಡು, ಮಗುವಿಗೆ ಕೇಳುವುದು – ಇದು ಮತ್ತು ಗುಂಪಿನಲ್ಲಿರುವ ವಸ್ತು ಒಂದೇನಾ? ಯಾಕೆ ಅಲ್ಲ? ಯಾವ ರೀತಿಯಾಗಿ ಇದು ಬೇರೆ ಇದೆ? ಎಂದೆಲ್ಲ ಕೇಳುವುದು. ಮಕ್ಕಳು ಸರಿಯಾದ ಪದಪ್ರಯೋಗ ಮಾಡುತ್ತಾರೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದು – ದೊಡ್ಡದು–ಸಣ್ಣದು, ಎತ್ತರ–ಗಿಡ್ಡ, ದಪ್ಪ–ತೆಳು ಹೀಗೆ.

**ಚಟುವಟಿಕೆ 3**

1. ಇಬ್ಬರು ಮಕ್ಕಳು ಜೋಡಿಯಾಗಿ ಡಾಮಿನೋ ಕಾರ್ಡ್‌ಗಳ ಜೊತೆ ಕೆಲಸ ಮಾಡುತ್ತ, ಡಾಮಿನೋ ಸರಣಿಯನ್ನು ಮಾಡುವುದು.
2. ತರಗತಿಯಲ್ಲಿ ಓಡಾಡುತ್ತ, ಎರಡು ಕಾರ್ಡ್‌ಗಳನ್ನು ಹೇಗೆ ಹೊಂದಿಸಿದ್ದೀರ ಎಂದು ಮಕ್ಕಳಿಗೆ ಕೇಳುವುದು. ಅವರು ಸರಿಯಾಗಿ ಹೊಂದಿಸಿದ್ದಾರೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ಸರಿಯಾಗಿ ಪರೀಕ್ಷಿಸುವುದು.

**ಟಿಪ್ಪಣಿ:** ಇದು ಮೊದಲ ಹಂತ, ನಿಯಮಗಳನ್ನು ರೂಪಿಸಿ, ಮಕ್ಕಳು ಆ ನಿಯಮಗಳನ್ನು ಪಾಲಿಸುತ್ತಾರೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದು. ಒಂದು ಕೆಲಸವನ್ನು ಮಾಡಿ ಮುಗಿಸಿದ ನಂತರ, ಕೈಯನ್ನು ಮೇಲೆ ಎತ್ತಬೇಕು ಅಥವಾ ಜೋರಾಗಿ ಹೇಳಬೇಕು ಎಂದು ತಿಳಿಸುವುದು. ಅವರು ಮುಂದಿನ ಕೆಲಸವನ್ನು ಮಾಡಲು ಶುರು ಮಾಡುವ ಮೊದಲು, ಅವರು ಕೆಲಸವನ್ನು ಪರಿಶೀಲಿಸಿ, ಅವರು ವಿಂಗಡಿಸಲು ಕಾರಣಗಳು ಮತ್ತು ತತ್ವವನ್ನು ವಿವರಿಸುವಂತೆ ಮಾಡುವುದು.

## ಅನುಕ್ರಮಗೊಳಿಸುವುದು

### ಕಲಿಕಾ ಫಲಿತಗಳು

ಗಾತ್ರದ ಆಧಾರದ ಮೇಲೆ ವಸ್ತುಗಳನ್ನು ಅನುಕ್ರಮವಾಗಿ 3–5 ಹಂತದವರೆಗೆ ಇಡಲು ಮಕ್ಕಳಿಗೆ ಸಹಾಯ ಮಾಡುವುದು.

### ಕಲಿಕಾ ಸಾಮಗ್ರಿಗಳು

- ಮಣಿಗಳು, ಗುಂಡಿಗಳು, ಕೋಲಾಟದ ಕೋಲುಗಳು, ಬ್ಲಾಕ್‌ಗಳು, ಬಾಟಲಿ ಮುಚ್ಚಳ, ಮೂರು ವಿಭಿನ್ನ ಗಾತ್ರದಲ್ಲಿರುವುದು ಮತ್ತು ಒಟ್ಟು 60 ಇರಬೇಕು
- ಬೇರೆ ಇನ್ನಿತರ ವಸ್ತುಗಳನ್ನು ತರಗತಿಕೋಣೆಯಲ್ಲಿಯೇ ತೆಗೆದುಕೊಳ್ಳುವುದು
- ಬ್ಲಾಕ್‌ಗಳು/ಚೆಂಡುಗಳು/ಕೋಲಾಟದ ಕೋಲುಗಳು/ಮತ್ತು ನಂತರ ಸಣ್ಣದಾದ ವಸ್ತುಗಳನ್ನು ಪರಿಗಣಿಸುವುದು
- ಮಕ್ಕಳು ಶಾಲೆಗೆ ಬರುವಾಗ ಸಂಗ್ರಹಿಸಿದ ವಸ್ತುಗಳು (ಎಲೆಗಳು, ಕಡ್ಡಿಗಳು ಮತ್ತು ಕಲ್ಲುಗಳು)
- ಸಂಭಾಷಣೆ ಅವಧಿಯಲ್ಲಿ ಮಕ್ಕಳು ಮಾಡಿದ 'ದೇಹದ ಬಾಹ್ಯರೇಖಾಚಿತ್ರಗಳು (ಬಾಡಿ ಔಟ್‌ಲೈನ್‌ಗಳು)'

**ಶಿಕ್ಷಕರ ಪೂರ್ವಸಿದ್ಧತೆ:** ಏನೂ ಇಲ್ಲ

### ಸೂಚನೆಗಳು

1. ತರಗತಿಕೋಣೆಯ ಬೇರೆಬೇರೆ ಕಡೆಗಳಲ್ಲಿ ವಸ್ತುಗಳನ್ನು ಸಣ್ಣ ಗುಡ್ಡೆಯನ್ನಾಗಿ ಮಾಡಿ (ಎಲ್ಲ ಗಾತ್ರದ ವಸ್ತುಗಳನ್ನು ಮಿಶ್ರ ಮಾಡಿ), ಎಲ್ಲ ಮಕ್ಕಳ ಗುಂಪುಗಳೂ ಪರಸ್ಪರ ತೊಂದರೆ ಪಡಿಸದೆಯೇ ತಮ್ಮ ತಮ್ಮ ಗುಂಪುಗಳಲ್ಲಿ ಕುಳಿತು ಕೆಲಸ ಮಾಡುವುದು.
2. ಸಾಮಗ್ರಿಗಳನ್ನು ಮೊದಲು ತುಂಬ ದೊಡ್ಡದು, ಸಣ್ಣದು, ನಂತರ ತುಂಬ ಸಣ್ಣದು, ಹೀಗೆ ಒಂದು ಸಾಲಿನಲ್ಲಿ ಹೇಗೆ ಅನುಕ್ರಮವಾಗಿ ಇಡಬೇಕು ಎಂದು ತೋರಿಸುವುದು. ಅವರು ಹೀಗೆ ವಸ್ತುಗಳನ್ನು ತುಂಬ ದೊಡ್ಡದರಿಂದ ತುಂಬ ಸಣ್ಣದರವರೆಗೆ ಕ್ರಮವಾಗಿ ಸಾಲಿನಲ್ಲಿ ಇಡಬೇಕು ಎಂದು ವಿವರಿಸುವುದು.
3. ಮಕ್ಕಳು ಮಣಿಗಳನ್ನು, ಗುಂಡಿಗಳನ್ನು, ಬ್ಲಾಕ್‌ಗಳನ್ನು ಬಳಸಿಕೊಂಡು ಚಟುವಟಿಕೆ ಮಾಡುವುದು ಮತ್ತು ಅವುಗಳನ್ನು ದೊಡ್ಡದರಿಂದ ತುಂಬ ಸಣ್ಣದವರೆಗೆ ಒಂದು ಸಾಲಿನಲ್ಲಿ ಇಡುವುದು.
4. ಅವರು ಇದನ್ನು ಗುಂಪಿನಲ್ಲಿ ಮಾಡಿದ ನಂತರ, ಮಕ್ಕಳಿಗೆ ಜೋಡಿಯಲ್ಲಿ ಚಟುವಟಿಕೆ ಮಾಡಲು ಆಸ್ಪದ ಕಲ್ಪಿಸುವವುದು ಮತ್ತು ಹೀಗೆಯೇ ವಸ್ತುಗಳನ್ನು ದೊಡ್ಡದರಿಂದ ತುಂಬ ಸಣ್ಣದವರೆಗೆ ಒಂದು ಸಾಲಿನಲ್ಲಿ ಇಡುವುದು.
5. ಮಕ್ಕಳು ಜೋಡಿಯಲ್ಲಿ ಚಟುವಟಿಕೆ ಮಾಡಿ ಮುಗಿಸಿದ ನಂತರ, ಅವರಿಗೆ ಒಬ್ಬೊಬ್ಬರೇ ಕಲ್ಲುಗಳು, ಕಡ್ಡಿಗಳು, ಎಲೆಗಳು ಮತ್ತು ದೇಹದ ರೇಖಾಚಿತ್ರಗಳ ಸಂಗ್ರಹದಿಂದ ವಸ್ತುಗಳನ್ನು ತೆಗೆದುಕೊಂಡು ದೊಡ್ಡದರಿಂದ ತುಂಬ ಸಣ್ಣದವರೆಗೆ ಒಂದು ಸಾಲಿನಲ್ಲಿ ಇಡಲು ಹೇಳುವುದು.


## ವಿನ್ಯಾಸ ರಚಿಸುವುದು

### ಕಲಿಕಾ ಫಲಿತಗಳು

ಒಂದು ವಿನ್ಯಾಸವನ್ನು ಗುರುತಿಸಿ, ಅದನ್ನು ಮುಂದುವರೆಸಲು ತಾರ್ಕಿಕ ಕ್ರಮವನ್ನು ವಿಸ್ತರಿಸುವುದು ಮತ್ತು ಸರಳ ವಿನ್ಯಾಸಗಳನ್ನು ರಚಿಸುವುದು.

### ಕಲಿಕಾ ಸಾಮಗ್ರಿಗಳು

1. ಕೋಲಾಟದ ಕೋಲುಗಳು ಹಾಗೂ ಪೆನ್ಸಿಲ್‌ಗಳು/ಚಮಚೆಗಳು–ಟೀ ಸ್ಪೂನ್‌ಗಳು/ ಮೊಂಬತ್ತಿಗಳು ಹಾಗೂ ಗಿಡ್ಡ ಸೀಮೆಸುಣ್ಣ/ 2 ಗಾತ್ರದ ಅಂದರೆ ದೊಡ್ಡ ಮತ್ತು ಸಣ್ಣ ಲೋಟಗಳು/ಗಾಜಿನ ಲೋಟ ಮತ್ತು ಬಟ್ಟಲುಗಳು
2. ಮಕ್ಕಳು ಸುತ್ತಲೂ ಇರುವ ಹಲವಾರು ವಸ್ತುಗಳನ್ನು ಸಂಗ್ರಹಿಸುವುದು – ಎಲೆಗಳು, ಕಲ್ಲುಗಳು, ಕಡ್ಡಿಗಳು ಇತ್ಯಾದಿ
3. ಈ ಕೆಳಗಿನ ಸಂಯೋಜನೆ ಇರುವ ಚಿತ್ರಗಳು
   - ದೊಡ್ಡದೊಡ್ಡ/ಸಣ್ಣಸಣ್ಣ
   - ದೊಡ್ಡಸಣ್ಣ/ಸಣ್ಣದೊಡ್ಡ
   - ದೊಡ್ಡಸಣ್ಣ/ಸಣ್ಣಸಣ್ಣ/ಸಣ್ಣದೊಡ್ಡ



### ಶಿಕ್ಷಕರ ಪೂರ್ವಸಿದ್ಧತೆ

ನಿಮ್ಮ ಬಳಿ ಎಲ್ಲ ಮಕ್ಕಳಿಗೂ ಸಾಕಾಗುವಷ್ಟು ಕ್ಯೂ ಕಾರ್ಡ್‌ಗಳು ಇಲ್ಲದಿರಬಹುದು – ಇದೇ ವಿನ್ಯಾಸವನ್ನು ನಕಲು ಮಾಡಿ, ಕ್ಯೂ ಕಾರ್ಡುಗಳನ್ನು ಸಿದ್ಧಪಡಿಸಿಕೊಳ್ಳುವುದು.

### ಸೂಚನೆಗಳು

1. ತರಗತಿಯ ಬೇರೆಬೇರೆ ಕಡೆಗಳಲ್ಲಿ ಸಣ್ಣ ಗುಡ್ಡೆ/ರಾಶಿಯಲ್ಲಿರುವ ವಸ್ತುಗಳನ್ನು ಕ್ಯೂ ಕಾರ್ಡುಗಳ ಜೊತೆಗೆ ಇಡುವುದು.
2. ಕ್ಯೂ ಕಾರ್ಡಿನಲ್ಲಿ ತೋರಿಸಿರುವ ವಿನ್ಯಾಸವನ್ನು ಹೇಗೆ ಪುನಃ ನಕಲು ಮಾಡುವುದು ಎಂದು ಮಕ್ಕಳಿಗೆ ತೋರಿಸುವುದು. ಇದಕ್ಕೆ ಕೋಲಾಟದ ಕೋಲುಗಳು ಮತ್ತು ಪೆನ್ಸಿಲ್‌ಗಳನ್ನು ಬಳಸಿಕೊಂಡು, ಅವುಗಳ ಪರಸ್ಪರ ಗಾತ್ರದತ್ತ (ಎರಡೂ ವಸ್ತುಗಳ ದಪ್ಪದ ಕುರಿತು) ಮಕ್ಕಳ ಗಮನವನ್ನು ಸೆಳೆಯುವುದು.
3. ಮಕ್ಕಳಿಗೆ ಇಬ್ಬರು ಜೋಡಿಯಾಗಿ ಚಟುವಟಿಕೆ ಮಾಡಲು ತಿಳಿಸುವುದು, ಅವರು ಮೊದಲು ಕ್ಯೂ ಕಾರ್ಡಿನಲ್ಲಿ ತೋರಿಸಿರುವ ವಿನ್ಯಾಸವನ್ನು ನಕಲು ಮಾಡುವುದು ಮತ್ತು ಕೊಟ್ಟಿರುವ ಎಲ್ಲ ವಸ್ತುಗಳನ್ನು ಬಳಸಿಕೊಂಡು ಮಾಡಿ ಮುಗಿಸಿದ ನಂತರ ಕೈ ಎತ್ತಲು ಹೇಳುವುದು.
4. ಹಾಗೆಯೇ ತರಗತಿ ಕೋಣೆಯಲ್ಲಿ ಎಲ್ಲ ಗುಂಪುಗಳ ಬಳಿಯೂ ಒಮ್ಮೆ ಹೋಗಿ, ಮಕ್ಕಳನ್ನು ಗಮನಿಸುವುದು ಮತ್ತು ಅವರು ಮಾಡುತ್ತಿರುವ ವಿನ್ಯಾಸವನ್ನು ಸರಿಯಾದ ಗಾತ್ರದ ಪದದಿಂದ ವಿವರಿಸುವಂತೆ ಕೇಳುವುದು.
5. ಅವರು ಒಮ್ಮೆ ವಿನ್ಯಾಸವನ್ನು ನಕಲು ಮಾಡಲು ಸಮರ್ಥರಾದ ನಂತರ, ಅದೇ ವಿನ್ಯಾಸವನ್ನು ಮುಂದುವರೆಸಲು ಹೇಳುವುದು (ಮಣಿಗಳನ್ನು ಮತ್ತೆ ಹೀಗೆಯೇ ಇಟ್ಟು, ಇದೇ ರೀತಿ ಮುಂದುವರೆಸಿ, ಈ ಸಾಲನ್ನು ಇನ್ನೂ ಸ್ವಲ್ಪ ಉದ್ದ ಮಾಡ್ತೀರ ಎಂದು ಮಕ್ಕಳಿಗೆ ಕೇಳಬಹುದು)
6. ಇಲ್ಲಿ ಮಕ್ಕಳಿಗೆ ಮತ್ತೆ ಕೇಳಬಹುದು – ವಸ್ತುಗಳನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ಇಟ್ಟಿದ್ದು ಯಾಕೆ – ಇದರ ನಂತರ ಏನು ಬರುತ್ತದೆ? ಯಾಕೆ?

7. ಮಕ್ಕಳ ಜೋಡಿಗೆ ಮೊದಲಿನ ಎರಡು ವಿನ್ಯಾಸಗಳ ಮೇಲೆ ವಿವಿಧ ಬಗೆಯ ವಸ್ತುಗಳನ್ನು ಬಳಸಿಕೊಂಡು ವಿನ್ಯಾಸವನ್ನು ನಕಲು ಮಾಡಲು ಆಸ್ಪದ ನೀಡುವುದು (ದೊಡ್ಡದೊಡ್ಡ/ಸಣ್ಣಸಣ್ಣ ಮತ್ತು ದೊಡ್ಡಸಣ್ಣ/ಸಣ್ಣದೊಡ್ಡ ಮತ್ತು ಅದೇ ವಿನ್ಯಾಸವನ್ನು ಮುಂದುವರೆಸಲು ಹೇಳುವುದು)
8. ಮಕ್ಕಳು ಜೋಡಿಯಾಗಿ ಚಟುವಟಿಕೆಯನ್ನು ಅಭ್ಯಾಸ ಮಾಡಿದ ನಂತರ, ಅವರಿಗೆ ಕ್ಯೂ ಕಾರ್ಡ್‌ಗಳನ್ನು ನೀಡಿ (ದೊಡ್ಡದೊಡ್ಡ/ಸಣ್ಣಸಣ್ಣ ಮತ್ತು ದೊಡ್ಡಸಣ್ಣ/ಸಣ್ಣದೊಡ್ಡ) ಅವರು ಒಬ್ಬೊಬ್ಬರೇ ವಿನ್ಯಾಸಗಳನ್ನು ನಕಲು ಮಾಡಿ, ಮೂರನೇ ವಿನ್ಯಾಸವನ್ನು ವಿಸ್ತರಿಸಲು ಅವಕಾಶ ಕಲ್ಪಿಸುವುದು
9. ಮಕ್ಕಳಿಗೆ ಅವರು ಮಾಡಿರುವ ವಿನ್ಯಾಸಗಳನ್ನು ವಿವರಿಸುವಂತೆ ಕೇಳುವುದು

**ಟಿಪ್ಪಣಿ:** ಮಕ್ಕಳಿಗೆ ವಿವಿಧ ಗಾತ್ರದ ಹಲವಾರು ಬಗೆಯ ವಸ್ತುಗಳು ಮತ್ತು ವಸ್ತುಗಳ ಚಿತ್ರ ಕಾರ್ಡ್‌ಗಳನ್ನು ನೀಡಿ, ಅಭ್ಯಾಸವನ್ನು ಮಾಡಿಸುವುದು. ಕೆಲವು ಸಂಭಾವ್ಯ ಸಂಯೋಜನೆಗಳು ಹೀಗಿವೆ:

- ದೊಡ್ಡ ಎಲೆ–ದೊಡ್ಡ ಎಲೆ/ಸಣ್ಣ ಎಲೆ–ಸಣ್ಣ ಎಲೆ
- ದೊಡ್ಡ ಚೆಂಡು–ದೊಡ್ಡ ಚೆಂಡು/ ಸಣ್ಣ ಚೆಂಡು–ಸಣ್ಣ ಚೆಂಡು/ ದೊಡ್ಡ ಚೆಂಡು...
- ಉದ್ದ ಕಡ್ಡಿ – ಉದ್ದ ಕಡ್ಡಿ/ ಗಿಡ್ಡ ಕಡ್ಡಿ – ಗಿಡ್ಡ ಕಡ್ಡಿ
- ನುಗ್ಗೆಕಾಯಿ–ತೊಂಡೆಕಾಯಿ / ಉದ್ದ ಮತ್ತು ದುಂಡನೆಯ ಬದನೇಕಾಯಿ ಇತ್ಯಾದಿ

**ವಿಸ್ತರಣಾ ಚಟುವಟಿಕೆಗಳು**

## ಅನ್ವಯಿಸುವುದು


### ಕಲಿಕಾ ಫಲಿತಗಳು

ದೈನಂದಿನ ಸಮಸ್ಯೆಗಳನ್ನು ಬಗೆಹರಿಸಲು ಗಾತ್ರದ ಪರಿಕಲ್ಪನೆಯನ್ನು ಬಳಸಿಕೊಳ್ಳುವುದು

### ಕಲಿಕಾ ಸಾಮಗ್ರಿಗಳು

ಈ ಕೆಳಗಿನವುಗಳ ಚಿಕ್ಕ 3" * 3" ಚಿತ್ರ ಕಾರ್ಡ್‌ಗಳು

- ಕಟ್ಟಡವೊಂದರಲ್ಲಿ 3 ವಿಭಿನ್ನ ಎತ್ತರದಲ್ಲಿ ಇರುವ 3 ಕಿಟಕಿಗಳು ಮತ್ತು ಮೂರು ಬೇರೆ ಬೇರೆ ಎತ್ತರದ ಏಣಿಗಳು
- 3 ಬೇರೆ ಬೇರೆ ದೇಹಗಾತ್ರದ ಗಂಡಸರು ಮತ್ತು ಬೇರೆ ಬೇರೆ ಅಳತೆಯ ಅಂಗಿಗಳು
- 3 ಬೇರೆ ಬೇರೆ ಗಾತ್ರ ಬೀಗ ಮತ್ತು ಅವುಗಳ ಕೀಲಿಗಳು
- 3 ವಿಭಿನ್ನ ಗಾತ್ರದ ಹಾಸಿಗೆಗಳು ಮತ್ತು ವಿಭಿನ್ನ ಎತ್ತರದ ಪುರುಷರು
- 3 ಬೇರೆ ಬೇರೆ ಗಾತ್ರದ ಬಾಗಿಲುಗಳು ಮತ್ತು ಹಸುಗಳು (ದಪ್ಪ ಮತ್ತು ತೆಳು)
- 3 ಬೇರೆ ಬೇರೆ ಗಾತ್ರದ ಬಟ್ಟಲುಗಳು ಮತ್ತು ಪ್ಯಾಕೆಟ್‌ಗಳು
- 3 ಬೇರೆ ಬೇರೆ ಗಾತ್ರದ ಸೈಕಲ್ಲುಗಳು ಮತ್ತು ಸೈಕಲ್ ಸವಾರರು
- ಒಂದು ಚೂಪಾದ ನಿಬ್, ಒಂದು ಬಣ್ಣದ ಪೆನ್ಸಿಲ್ ಮತ್ತು ಒಂದು ಕ್ರೆಯಾನ್ / 3 ಗೆರೆಗಳ ಚಿತ್ರಗಳು
- ಒಂದಕ್ಕಿಂತ ಒಂದು ಸ್ವಲ್ಪ ದೊಡ್ಡ ಇರುವ 3 ಮಗುವಿನ ಚಿತ್ರಗಳು
- ಬೀಜದಿಂದ ಬೆಳೆಯುತ್ತಿರುವ ಒಂದು ಸಸ್ಯ, ಬೀಜದಿಂದ ಸಸ್ಯ



### ಸೂಚನೆಗಳು

**ಪ್ರಶ್ನೆ 1:** ಈಗ ಇಲ್ಲಿ ನೋಡಿ – 3 ಹಾಸಿಗೆಗಳಿವೆ ಮತ್ತು 3 ಜನಕ್ಕೆ ಮಲಗಬೇಕಿದೆ. ಯಾರು ಯಾವ ಹಾಸಿಗೆ ಮೇಲೆ ಮಲಗಬೇಕು ಅಂತ ಹೇಳ್ತೀರ? ಯಾಕೆ? ಗಿಡ್ಡ ಹಾಸಿಗೆಯಲ್ಲಿ ತುಂಬ ಎತ್ತರವಿರುವ ಮನುಷ್ಯ ಮಲಗಿಕೊಂಡರೆ ಏನಾಗುತ್ತದೆ?

**ಪ್ರಶ್ನೆ 2:** ಒಬ್ಬ ಟೈಲರ್ 3 ಗಂಡಸರಿಗೆ 3 ಅಂಗಿಗಳನ್ನು ಹೊಲೆದಿದ್ದಾನೆ. ಟೈಲರ್ ಈಗ ಹೊರಗಡೆ ಹೋಗಿದ್ದಾನೆ ಮತ್ತು ಈ ಗಂಡಸರು ಅವನ ಅಂಗಡಿಗೆ ಬಂದು ಅಂಗಿಗಳನ್ನು ತೆಗೆದುಕೊಳ್ಳಬೇಕು. ಯಾವ ಅಂಗಿ ಯಾರಿಗೆ ಎಂದು ನೀವು ಹೇಗೆ ಹೇಳುವಿರಿ? ಯಾಕೆ ಹೀಗೆ ಯೋಚಿಸುತ್ತೀರಿ? ಈ ದೊಡ್ಡ ಮನುಷ್ಯ ಸಣ್ಣ ಅಂಗಿಯನ್ನು ಹಾಕಿಕೊಳ್ಳಬಹುದೇ? ಹಾಕಿಕೊಂಡರೆ ಏನಾಗುತ್ತೆ?

**ಪ್ರಶ್ನೆ 2:** ರಾಜುವಿನ ಅಮ್ಮ ಅವನಿಗೆ ಆಟಕ್ಕೆ ಹೋಗುವ ಮೊದಲು ಮನೆಯಲ್ಲಿರುವ ಎಲ್ಲ 3 ಬಾಗಿಲುಗಳಿಗೆ 3 ಬೀಗ ಹಾಕಲು ಹೇಳುತ್ತಾಳೆ. ಪ್ರತೀ ಬಾಗಿಲಿಗೂ ಬೇರೆ ಬೀಗವಿದೆ ಮತ್ತು ಅಲ್ಲಿ 3 ಕೀಲಿಕೈಗಳು ಇವೆ. ರಾಜುವಿಗೆ ಬೇಗನೆ ಆಟಕ್ಕೆ ಹೋಗಬೇಕಾಗಿದೆ. ನೀವು ಅವನಿಗೆ ಸಹಾಯ ಮಾಡ್ತೀರಾ? ಪ್ರತಿಯೊಂದೂ ಬೀಗಕ್ಕೆ ಯಾವ ಕೀಲಿಯನ್ನು ಬಳಸಬೇಕೆಂದು ಅವನಿಗೆ ಹೇಳುವಿರಾ? ಏಕೆ ಹೀಗೆ ಹೇಳುವಿರಿ? ಅವನು ಈ ದೊಡ್ಡ ಬೀಗಕ್ಕೆ ಈ ಕೀಲಿಯನ್ನು ಬಳಸುವುದಕ್ಕೆ ಆಗುವುದಿಲ್ಲ? ಅವನ ಬಳಿ 2 ಕೀಲಿಗಳು ಮಾತ್ರವೇ ಇವೆ ಎಂದುಕೊಳ್ಳಿ, ಆಗ ಸಣ್ಣ ಕೀಲಿಯನ್ನು ದೊಡ್ಡ ಬೀಗಕ್ಕೆ ಹಾಕಲು ಬಳಸಬಹುದೇ?

**ಪ್ರಶ್ನೆ 4:** ಇಲ್ಲಿರುವ ಮೂರು ಬೇರೆಬೇರೆ ಕಿಟಕಿಗಳನ್ನು ಕೆಲಸದವನು ಸ್ವಚ್ಛಮಾಡಬೇಕಿದೆ. ಅವನು ಆ ಜಾಗಕ್ಕೆ ಹೋದಾಗ ಅವನಿಗೆ 3 ಬೇರೆಬೇರೆ ಎತ್ತರದ ಏಣಿಗಳನ್ನು ನೆಲದ ಮೇಲೆ ಇಟ್ಟಿದ್ದು ಕಾಣಿಸಿತು. ಯಾವ ಏಣಿಯನ್ನು ಯಾವ ಕಿಟಕಿಗೆ ಬಳಸಬೇಕು ಎಂದು ಅವನಿಗೆ ನೀವು ಹೇಳುವಿರಾ? ಯಾಕೆ? ಅವನು ಆ 3ನೇ ಏಣಿಯನ್ನು ಎತ್ತರದ ಕಿಟಕಿಗೆ ಬಳಸಿದರೆ ಏನಾಗುತ್ತದೆ?

**ಪ್ರಶ್ನೆ 5:** ರಾಮು ಒಬ್ಬ ರೈತ, ಅವನು ಸಂತೆಯಿಂದ 3 ಹಸುಗಳನ್ನು ಮನೆಗೆ ತಂದನು. ಅವನ್ನು ಕೊಟ್ಟಿಗೆಯಲ್ಲಿ ಕಟ್ಟಬೇಕು. ಆದರೆ ಬಡಗಿಯು 3 ಬೇರೆಬೇರೆ ಗಾತ್ರದ ಬಾಗಿಲುಗಳನ್ನು ಮಾಡಿದ್ದಾನೆ. ಹಸುಗಳನ್ನು ಕೊಟ್ಟಿಗೆ ಒಳಕ್ಕೆ ಬಿಡಲಿಕ್ಕೆ ಯಾವ ಬಾಗಿಲನ್ನು ಯಾವ ಹಸುವಿಗೆ ಬಳಸಬೇಕು ಎಂದು ನೀವು ರಾಮುವಿಗೆ ಹೇಳುವಿರಾ? ರಾಮು ಬಾಗಿಲುಗಳನ್ನು ತಪ್ಪಾಗಿ ಆಯ್ಕೆ ಮಾಡಿಕೊಂಡರೆ ಏನಾಗುತ್ತದೆ?

**ಪ್ರಶ್ನೆ 6:** ಅಮ್ಮ 3 ಪ್ಯಾಕೆಟ್ ಸೇಂಗಾ ತಂದಿದ್ದಾಳೆ. ಅವನ್ನು 3 ಬಟ್ಟಲಿಗೆ ಹಾಕುವಂತೆ ನಿಮಗೆ ಹೇಳುತ್ತಾಳೆ. ಇಲ್ಲಿ 3 ಬಟ್ಟಲುಗಳು ಇವೆ. ಯಾವ ಪ್ಯಾಕೆಟ್‌ನ್ನು ಯಾವ ಬಟ್ಟಲಿಗೆ ಹಾಕಬೇಕು ಎಂದು ನೀವು ಹೇಳುವಿರಾ? ಈ ಪ್ಯಾಕೆಟ್ ಅನ್ನು ಹಾಕಲು ಇದೇ ಬಟ್ಟಲನ್ನು ಏಕೆ ಆಯ್ಕೆ ಮಾಡಿಕೊಂಡಿರಿ? (ಚಿತ್ರದಲ್ಲಿ ಆಯ್ಕೆ ಮಾಡಿದ ಬಟ್ಟಲನ್ನು ಮತ್ತು ಒಂದು ಪ್ಯಾಕೆಟನ್ನು ತೋರಿಸಿ, ಕೇಳಿ.) ಈ ಪ್ಯಾಕೆಟನ್ನು (ತುಂಬ ದೊಡ್ಡದು) ಈ ಬಟ್ಟಲಿಗೆ ಹೇಳಿದರೆ ಏನಾಗುತ್ತದೆ (ಅತೀ ಚಿಕ್ಕದು)

**ಪ್ರಶ್ನೆ 7:** ಮನೆಯಲ್ಲಿ 3 ಅಣ್ಣತಮ್ಮಂದಿರಿಗೆ 3 ಸೈಕಲ್ಲುಗಳಿವೆ. ಅವರು ಶಾಲೆಗೆ ಹೋಗುವಾಗ ಸೈಕಲ್ ತೆಗೆದುಕೊಂಡು ಹೋಗಬೇಕು. ಯಾರು ಯಾವ ಸೈಕಲ್ ಬಳಸಬೇಕು ಎಂದು ನೀವು ಹೇಳುವಿರಾ? ಯಾಕೆ? ದೊಡ್ಡ ಅಣ್ಣ ಚಿಕ್ಕ ಸೈಕಲ್ ಮೇಲೆ ಕುಳಿತರೆ ಏನಾಗುತ್ತದೆ? ಚಿಕ್ಕ ತಮ್ಮ ತುಂಬ ದೊಡ್ಡ ಸೈಕಲ್ ಮೇಲೆ ಕುಳಿತರೆ ಏನಾಗುತ್ತದೆ?

**ಪ್ರಶ್ನೆ 8:** ರಾಜು 3 ಗಿಡಗಳನ್ನು ಬೇರೆ ಬೇರೆ ಸಮಯದಲ್ಲಿ ನೆಟ್ಟಿದ್ದಾನೆ. ಈ ಮೂರರಲ್ಲಿ ಹೆಚ್ಚು ವಯಸ್ಸಾದ ಗಿಡ ಯಾವುದು ಹೇಳಿ? ಯಾಕೆ? ಯಾವುದು ತುಂಬ ಎಳೆಯ ಗಿಡ? ಯಾಕೆ?

**ಪ್ರಶ್ನೆ 9:** ರಾಮು, ಶಾಮು ಮತ್ತು ದಾಮು ಸಹೋದರರು. ನೀವು ಅವರನ್ನು ಒಮ್ಮೆ ನೋಡಿ, ಅವರಲ್ಲಿ ದೊಡ್ಡವರು ಯಾರು ಮತ್ತು ಚಿಕ್ಕವರು ಯಾರು ಎಂದು ಹೇಳುವಿರಾ? ನೀವು ಯಾಕೆ ಹಾಗೆ ಹೇಳುತ್ತಿದ್ದೀರಿ?

**ಪ್ರಶ್ನೆ 10:** ರೀಟಾ, ಸೀತಾ ಮತ್ತು ಮಾಯಾ 3 ಬೇರೆ ಬೇರೆ ಪೆನ್ಸಿಲ್‌ಗಳು/ಪೆನ್ನುಗಳನ್ನು ಬಳಸಿಕೊಂಡು ಗೆರೆ ಎಳೆದಿದ್ದಾರೆ. ಯಾವ ಗೆರೆಯನ್ನು ಎಳೆಯಲು ಯಾವ ಪೆನ್/ಪೆನ್ಸಿಲ್ ಬಳಸಿದ್ದಾರೆ ಎಂದು ನೀವು ಹೇಳುವಿರಾ? ಏಕೆ?

ಈ ಎಲ್ಲ ಸನ್ನಿವೇಶಗಳಲ್ಲಿ ಮಕ್ಕಳಿಗೆ ಅವರು ಆ ಆಯ್ಕೆಗಳನ್ನು ಮಾಡಿಕೊಳ್ಳಲು ಕಾರಣವೇನು ಎಂದು ಕೇಳಿರಿ. ಅವರು ತಪ್ಪು ಮಾಡಿದ್ದರೆ, ಅವರಿಗೆ ಪ್ರಶ್ನೆಗಳನ್ನು ಕೇಳಿ, ಸರಿಯಾದ ಉತ್ತರವನ್ನು ಹೇಳಲು ಸಹಾಯ ಮಾಡಿ ಮತ್ತು ಇದರೊಂದಿಗೆ ಅವರು ಒಂದು ಹೆಚ್ಚುವರಿ ಸಮಸ್ಯೆಯನ್ನು ಬಿಡಿಸಲಿ.

# ಶಿಕ್ಷಕರ ಕೈಪಿಡಿ – 4 ರಿಂದ 5 ವರ್ಷದವರಿಗೆ





Printed for

ಸಮಗ್ರ ಶಿಕ್ಷಣ ಕರ್ನಾಟಕ

**Department of Primary & Secondary Education, Samagra Shikshana Karnataka**

New Public Offices, Annexe Building, Nrupathunga Road, Sampangi Rama Nagar, Bengaluru - 560001, Karnataka

Designed by: Zinc & Broccoli, www.zandb.in

Printed at: SCPL, www.scpl.net

© 192327